ಸೋಮವಾರ, ಏಪ್ರಿಲ್ 21, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೊಹ್ಲಿ ಮೈಲಿಗಲ್ಲು

ಆರ್‌ಸಿಬಿಯ ವಿರಾಟ್ ಕೊಹ್ಲಿ (73*) ಐಪಿಎಲ್‌ನಲ್ಲಿ 67ನೇ ಬಾರಿ 50ಕ್ಕಿಂತ ಹೆಚ್ಚು ರನ್ (ಅರ್ಧಶತಕ + ಶತಕ) ಗಳಿಸಿದರು. ಡೇವಿಡ್ ವಾರ್ನರ್ ಹೆಸರಿನಲ್ಲಿದ್ದ (66) ದಾಖಲೆ ಮುರಿದರು. ಪಂಜಾಬ್ ಕಿಂಗ್ಸ್ ವಿರುದ್ಧ ಭಾನುವಾರ ಆರ್‌ಸಿಬಿ ಏಳು ವಿಕೆಟ್‌ಗಳಿಂದ ಗೆದ್ದಿತು

260 ಪಂದ್ಯ
8,326 ರನ್
59 ಅರ್ಧಶತಕ
8 ಶತಕ

46 YEARS OF EXCELLENCE

SRAMAYEVA JAYATHE
NARAYANA®
EDUCATIONAL INSTITUTIONS

India's Powerhouse of JEE Top Ranks

NARAYANA STUDENTS SHINE AS TOPPERS IN 10 STATES

HAT TRICK OF 300/300 MARKS
2023 - 1
2024 - 8
2025 - 1

Narayanites Rule Open Category in 2025
- 10 Ranks in Top 25
- 29 Ranks in Top 100
- 168 Ranks in Top 1000

All India Open Category Top Ranks

AIR 21 (MH TOPPER), AIR 22, AIR 24 (KARNATAKA TOPPER), AIR 25, AIR 26, AIR 29, AIR 36 (CHANDIGARH TOPPER), AIR 36 (TN TOPPER), AIR 39

AIR 45, AIR 47, AIR 59, AIR 60, AIR 61, AIR 67, AIR 67, AIR 72, AIR 76

AIR 80 (PUNJAB TOPPER), AIR 81, AIR 84, AIR 86, AIR 87, AIR 95, AIR 102, AIR 103

AIR 104, AIR 105, AIR 108, AIR 116, AIR 120 (ISHAN KUMAR, APP NO: 250310451212)

and many more...

NARAYANA KARNATAKA'S SHINING STARS in JEE MAIN 2025

24, 81, 84, 161, 174, 268, 276, 284, 315, 347, 388, 392

441, 483, 600, 693, 734, 752, 767, 787, 795, 943, 956

nLearn Online self-learning app

ADMISSIONS OPEN FOR ALL COURSES (SESSION 2025-26)
JEE (MAIN+ADV.) | JEE (MAIN)
NEET (UG) | BOARDS

Narayana Schools & Colleges in Karnataka

SCHOOLS • BELLANDUR - Ph : 7022293908 • ELECTRONIC CITY (Garvebhavi Palya) Ph : 7892302271. • HSR LAYOUT (HARLUR ROAD) - Ph : 7892294594. • JP NAGAR - Ph : 7022293914. • KORAMANGALA - Ph : 7022294007. • MARATHAHALLI - Ph : 7022293890. • RK LAYOUT (YELACHENAHALLI) - Ph : 7022293884. • BANNERGHATTA ROAD (HULIMAVU) - Ph : 7022293937. • ELECTRONIC CITY (PHASE-II) - Ph: 70220 37240. • BALLARI - Ph: 7022293903. • MARAGONDANAHALLI - Ph : 7022293861. • ADUR - Ph : 7349738563. • KALYAN NAGAR - Ph : 7022293902. • KASTURI NAGAR - Ph : 7022293863. • WHITEFIELD - Ph : 7022960894. • RAMAMURTHY NAGAR - Ph : 7022293867. • MALLASANDRA - Ph : 7899964836. • KR PURAM - : 7022293859. • KAGGADASAPURA - Ph : 7022293844. • TUMKUR - Ph : 7349738575. • RT NAGAR - Ph : 7022294015. • SAHAKAR NAGAR - Ph : 9591716806. • VIDYARANYAPURA - Ph: 7022293943. • YELAHANKA - Ph: 9632183071. • HOSUR - Ph : 8438653429. • NANDINI LAYOUT - Ph : 7022293870. • NAGARBHAVI - Ph : 7022281466. • UTTARAHALLI - Ph : 7022192738. • MATHIKERE - Ph : 9353845823. • CHANDAPURA - Ph: 7022037238. • GORAVIGERE- Ph: 7022293933.

COLLEGES • BALLARI - Ph: 7022293903 • BANASHANKARI - GIRINAGAR: Ph : 7022293962 • BELLANDUR - Ph: 7022293948 • BYRATHI - Ph: 7022293850. • CHANDAPURA - Ph: 7349738574. • CV RAMAN NAGAR - Ph: 7022293953. • E-CITY PHASE-II - Ph: 7022293930. • HULIMAVU - Ph: 7022293931. • JP NAGAR - Ph: 7022293922. • KADUGODI - Ph: 7022001267. • KASAVANAHALLI - Ph: 7022293858. • KASTURI NAGAR - Ph: 7022224095. • KOLAR - Ph: 7022293962. • MALASANDRA - Ph : 7022001268. • MARATHAHALLI - Ph: 7022293955. • MYSORE - Ph: 7022662586. • NAGARABHAVI - Ph: 7022293879. • RAMAMURTHY NAGAR - Ph: 7022281465. • SAHAKARNAGAR - Ph: 7022293876. • TUMKUR - Ph: 7349738565. • VIDYARANYAPURA - Ph: 7022294002. • KEMPAPURA - DASARAHALLI - Ph: 7022294013. • NELAMANGALA - RESIDENTIAL - Ph: 7022294001. • NELAMANGALA RESIDENTIAL (BOYS/GIRLS) - Ph: 7022294001. • CHEMASANDRA RESIDENTIAL (BOYS) - Ph: 7022001271. • BANDAPURA RESIDENTIAL (GIRLS) - Ph: 7022001271. • SAMETHANAHALLI RESIDENTIAL (BOYS) - Ph: 7337587421.

Scan QR Code For Admissions

Disclaimer: Any inadvertent error published in this advertisement could be brought to our notice

Toll Free: 1800 102 3344 #YourDreamsAreOurDreams www.narayanagroup.com

ನ್ಯಾಯಾಂಗ ತನಿಖೆಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಆಗ್ರಹ

ಸಾಮಾಜಿಕ ಸಮೀಕ್ಷೆ ಮೂಲ ವರದಿ ಎಲ್ಲಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ವಿವಿಧ ಜಾತಿ-ಸಮುದಾಯಗಳ ಜನಸಂಖ್ಯೆಯ ವಿವರ ಇದ್ದ ಸಾಮಾಜಿಕ ಸಮೀಕ್ಷೆಯ ಮೂಲ ಹಸ್ತಪ್ರತಿ ವರದಿ ಎಲ್ಲಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

ಆರ್‌.ಅಶೋಕ

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರು 2021ರಲ್ಲಿ ಬರೆದಿದ್ದ ಪತ್ರದಲ್ಲಿ ಸಾಮಾಜಿಕ ಸಮೀಕ್ಷೆಯ ಮೂಲ ವರದಿ ಇಲ್ಲದಿರುವ ಬಗ್ಗೆ ಉಲ್ಲೇಖಿಸಿದ್ದಾರೆ. ಈ ಬಗ್ಗೆ ಸರ್ಕಾರವು ಸ್ಪಷ್ಟನೆ ನೀಡಬೇಕು' ಎಂದು ಆಗ್ರಹಿಸಿದರು.

'ಜಯಪ್ರಕಾಶ್ ಹೆಗ್ಡೆ ಅವರು ತಮ್ಮ ಪತ್ರದಲ್ಲಿ, 'ಸೀಲ್ಡ್ ಮಾಡಿದ ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅದರಲ್ಲಿ ಸಮೀಕ್ಷಾ ವರದಿಯ ಹಸ್ತಪ್ರತಿ ಅಥವಾ ಮೂಲವರದಿ ಇರಲಿಲ್ಲ. ಪೆಟ್ಟಿಗೆಯಲ್ಲಿ ಇದ್ದ ವರದಿಯಲ್ಲಿ ಹಿಂದಿನ ಅಧ್ಯಕ್ಷರ ಸಹಿ ಇಲ್ಲ. ಈ ಬಗ್ಗೆ ಏನು ಮಾಡಬೇಕು' ಎಂದು ಸರ್ಕಾರವನ್ನು ಪ್ರಶ್ನಿಸಿದ್ದರು. ಮೂಲ ವರದಿ ಇಲ್ಲವೇ ಇಲ್ಲ ಮತ್ತು ಈಗ ಸೋರಿಕೆ ಆಗಿರುವುದು ತಿರುಚಲಾದ ವರದಿ ಎಂಬುದನ್ನು ಇದು ಸಾಬೀತು ಮಾಡುತ್ತದೆ' ಎಂದು ಅವರು ಆರೋಪಿಸಿದರು.

'ಮೂಲ ವರದಿ ಸಿದ್ದರಾಮಯ್ಯ ಅವರ ಮನೆಯಲ್ಲಿ ಇದೆ. ಈಗ ಸರ್ಕಾರದ ಬಳಿ ಇರುವುದು ನಕಲಿ ಅಥವಾ ತಿರುಚಲಾದ ವರದಿ. ಸಿದ್ದರಾಮಯ್ಯ ಅವರ ಕತೆ-ಚಿತ್ರಕತೆ, ನಿರ್ಮಾಣ, ನಿರ್ದೇಶನದ ಅಡಿಯಲ್ಲಿ ಈ ವರದಿ ಸಿದ್ಧವಾಗಿದೆ. ಇದು ಮೂಲ ವರದಿಯೇ ಅಲ್ಲ ಅಂದ ಮೇಲೆ ಸಮೀಕ್ಷೆಗಾಗಿ ವೆಚ್ಚ ಮಾಡಿದ ₹150 ಕೋಟಿ ಎಲ್ಲಿ ಹೋಯಿತು' ಎಂದು ಪ್ರಶ್ನಿಸಿದರು.

'ನಾವು ಜಾತಿ ಜನಗಣತಿಯ ವಿರೋಧಿಗಳಲ್ಲ. ಆದರೆ ಗಣತಿ ವೈಜ್ಞಾನಿಕವಾಗಿ ಮತ್ತು ನ್ಯಾಯಯುತವಾಗಿ ಆಗಬೇಕು. ಮೂಲ ವರದಿ ಕಾಣೆಯಾಗಿರುವ ಬಗ್ಗೆ ಮತ್ತು ಸಮೀಕ್ಷೆಗಾಗಿ ಮಾಡಿರುವ ವೆಚ್ಚದ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕು' ಎಂದು ಅವರು ಒತ್ತಾಯಿಸಿದರು.

ನ್ಯಾಷನಲ್ ಹೆರಾಲ್ಡ್ ಕಾಂಗ್ರೆಸ್‌ನ ಆಸ್ತಿಯಲ್ಲ: 'ನ್ಯಾಷನಲ್ ಹೆರಾಲ್ಡ್ ಸ್ವಾತಂತ್ರ್ಯ ಹೋರಾಟಗಾರರು ಆರಂಭಿಸಿದ್ದ ಪತ್ರಿಕೆ. ಅದು ಕಾಂಗ್ರೆಸ್‌ನದ್ದೂ ಅಲ್ಲ, ಗಾಂಧಿ ಕುಟುಂಬದ್ದೂ ಅಲ್ಲ. ದೇಶದ ವಿವಿಧೆಡೆ ಆ ಪತ್ರಿಕಾ ಸಂಸ್ಥೆಗೆ ₹2,500 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿ ಇದೆ. ಮುಚ್ಚಿದ ಪತ್ರಿಕೆಯ ಷೇರುಗಳನ್ನು ₹50 ಲಕ್ಷಕ್ಕೆ ಖರೀದಿಸಿ, ಅಷ್ಟೂ ಆಸ್ತಿಯನ್ನು ಗಾಂಧಿ ಕುಟುಂಬ ಪಡೆದುಕೊಂಡಿದೆ' ಎಂದು ಆರ್.ಅಶೋಕ ಆರೋಪಿಸಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಪ್ರಕರಣ ಇನ್ನೂ ನ್ಯಾಯಾಲಯದ ಹಂತದಲ್ಲಿದೆ. ಇದು ಸರ್ಕಾರದ ಆಸ್ತಿಯೇ ಹೊರತು ಕಾಂಗ್ರೆಸ್ ನಾಯಕರ ಆಸ್ತಿಯಲ್ಲ. ಇದರ ವಿರುದ್ಧ ಕಾಂಗ್ರೆಸ್ ಹೋರಾಟ ಮಾಡುವುದು ಬೂಟಾಟಿಕೆ' ಎಂದರು.

'ಅತಿ ಹಿಂದುಳಿದ 350 ಜಾತಿಗಳಿಗೆ ಅನ್ಯಾಯ'

ವಿ.ಸುನಿಲ್ ಕುಮಾರ್

'ಜಾತಿ ಜನಗಣತಿಯಲ್ಲಿ ಬಲಾಢ್ಯ ಕುರುಬ ಸಮುದಾಯವನ್ನು 'ಪ್ರವರ್ಗ 1 ಬಿ'ಗೆ ಸೇರಿಸುವ ಮೂಲಕ 350ಕ್ಕೂ ಹೆಚ್ಚು ಅತಿ ದುರ್ಬಲ ಮತ್ತು ಸಣ್ಣ ಸಣ್ಣ ಹಿಂದುಳಿದ ಜಾತಿಗಳಿಗೆ ಅನ್ಯಾಯ ಮಾಡಲಾಗಿದೆ' ಎಂದು ಶಾಸಕ ವಿ.ಸುನಿಲ್‌ಕುಮಾರ್ ಟೀಕಿಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾವು ಪ್ರತಿನಿಧಿಸುವ ಕುರುಬ ಸಮಾಜವನ್ನು 'ಪ್ರವರ್ಗ 1 ಬಿ'ಗೆ ಸೇರಿಸಿರುವುದು ಸ್ವಜಾತಿ ಪ್ರೇಮ ಮತ್ತು ರಾಜಕೀಯ ಪ್ರೇರಿತ. ಈ ಮೂಲಕ ಅತಿ ಹಿಂದುಳಿದ ಮತ್ತು ಧ್ವನಿ ಇಲ್ಲದ ಜಾತಿಗಳನ್ನು ದಮನ ಮಾಡುವ ಪ್ರಯತ್ನ ನಡೆದಿದೆ' ಎಂದು ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

'ಅಚ್ಚರಿ ಎಂದರೆ, 400ಕ್ಕೂ ಹೆಚ್ಚು ಸಣ್ಣ ಸಣ್ಣ ಹಿಂದುಳಿದ ಜಾತಿಗಳ ಜನರು ಇಲ್ಲಿಯವರೆಗೆ ಕನಿಷ್ಠ ಗ್ರಾಮ ಪಂಚಾಯಿತಿ ಸದಸ್ಯರಾಗಲೂ ಸಾಧ್ಯವಾಗಿಲ್ಲ. ಅಂತಹ ಹಿಂದುಳಿದ ಜಾತಿಗಳ ಸಾಲಿಗೆ ಕುರುಬ ಸಮುದಾಯವನ್ನು ಸೇರಿಸಲಾಗಿದೆ. ಹೀಗಾಗಿ ಸಣ್ಣ ಸಣ್ಣ ಸಮುದಾಯಗಳ ಜನರು ಎಲ್ಲ ಬಗೆಯ ಅವಕಾಶಗಳಿಂದಲೂ ವಂಚಿತರಾಗುವುದು ನಿಶ್ಚಿತ. 43 ಲಕ್ಷ ಜನ ಸಂಖ್ಯೆ ಇರುವ ಕುರುಬ ಸಮುದಾಯದ ಜತೆ ದುರ್ಬಲ ಹಿಂದುಳಿದ ಜಾತಿ ಜನರು ಸ್ಪರ್ಧೆ ಮಾಡಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಅತಿ ಹಿಂದುಳಿದ ಸಮಾಜಗಳನ್ನು ಈ ವರದಿ ಉದ್ದೇಶಪೂರ್ವಕವಾಗಿ ಪ್ರಪಾತಕ್ಕೆ ತಳ್ಳಿದೆ. 1 ಬಿ ಪ್ರವರ್ಗ ಸೃಷ್ಟಿಸಿ ಸಣ್ಣ ಜಾತಿಗಳಿಗೆ ಯಾವ ನ್ಯಾಯ ಕೊಡಲು ಸಾಧ್ಯ? ಪ್ರವರ್ಗ 2 ಎ ನಲ್ಲಿರುವ ಉಳಿದ ಜಾತಿಗಳನ್ನು ಬಿಟ್ಟು ಕುರುಬ ಸಮುದಾಯವನ್ನು ಮಾತ್ರ 1 ಬಿ ಗೆ ಹಾಕಿದ್ದಾರೆ. ಇದನ್ನು ವೈಜ್ಞಾನಿಕ ಎನ್ನಲು ಸಾಧ್ಯವೇ? ಇದು ಅಪ್ಪಟ ರಾಜಕೀಯ ದುರುಪಯೋಗ. ಜನಸಂಖ್ಯೆಯ ಕಡಿಮೆ ಆಗಿದೆ ಎನ್ನುವುದಕ್ಕಿಂತ ಹಿಂದುಳಿದ ವರ್ಗಗಳಿಗೆ ಈ ವರದಿ ದೊಡ್ಡ ಅನ್ಯಾಯ ಮಾಡಿದೆ. ಪ್ರಮುಖವಾಗಿ ಪಾಸಾಚಾರಿ, ಮೇರು ಶಿಕಾರಿ, ಕಾವಡಿ, ತಿರಳಿ, ಬುರುಡೆ ಸಿದ್ದಯ್ಯ, ಅಲೆಮಾರಿ, ಅರೆ ಅಲೆಮಾರಿ, ಮರಾಠ, ಈಡಿಗ, ಸವಿತಾ, ಯಾದವ ಸಮುದಾಯ ಸೇರಿವೆ' ಎಂದರು.

'ಸಿದ್ದರಾಮಯ್ಯ ಅವರು ಈ ಜಾತಿ ಜನಗಣತಿ ಮೂಲಕ ಸಬ್ ಕಾ ವಿಭಜನ್ ಸಬ್ ಕಾ ಶೋಷಣ್ ಎಂಬ ಘೋಷಣೆಯನ್ನು ಇಟ್ಟುಕೊಂಡಿದ್ದಾರೆ. ಸ್ವತಃ ಸಿದ್ದರಾಮಯ್ಯ ಅವರೇ ತಮಗೆ ಬೇಕಾದಂತೆ ಜನಗಣತಿ ಬರೆಸಿರುವ ಅನುಮಾನವಿದೆ' ಎಂದು ಹೇಳಿದರು.

'ಕಾಂತರಾಜು ಅವರ ಮೂಲ ವರದಿಯೇ ಇಲ್ಲ. ಅಂದ ಮೇಲೆ ಜಯಪ್ರಕಾಶ್ ಹೆಗ್ಡೆ ಹೇಗೆ ವರದಿ ತಯಾರು ಮಾಡಿದರು. ಮೂಲ ವರದಿ ಸಿಗದೇ ಈ ವರದಿ ತಯಾರು ಮಾಡಲು ಹೇಗೆ ಸಾಧ್ಯ? ಸಿದ್ದರಾಮಯ್ಯ ಅವರೇ ನಿಮಗೆ ರಾಜಕೀಯ ಲಾಭ ಆಗುವುದಿಲ್ಲ ಎಂದು ಆ ವರದಿಯನ್ನು ಎಲ್ಲಿ ಬಚ್ಚಿಟ್ಟಿದ್ದೀರಿ' ಎಂದು ಅವರು ಪ್ರಶ್ನಿಸಿದರು.

'ಅಶೋಕ ಯಾವತ್ತೂ ಸತ್ಯ ಮಾತಾಡಿಲ್ಲ'

ಬೆಳಗಾವಿ: 'ಜಾತಿ ಗಣತಿ ಮೂಲ ಪ್ರತಿ ಸಿದ್ದರಾಮಯ್ಯ ಅವರ ಮನೆಯಲ್ಲಿದೆ. ಈಗ ಬಂದಿರುವುದು ಬೇರೆ' ಎಂದು ವಿಪಕ್ಷ ನಾಯಕ ಆರ್.ಅಶೋಕ ಆರೋಪಿಸಿದ್ದಾರೆ. ಅಶೋಕ ಯಾವತ್ತೂ ಸತ್ಯ ಮಾತಾಡಿಯೇ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ವರದಿಯು ಗುರುವಾರ ಸಂಪುಟ ಸಭೆಯಲ್ಲಿ 'ಶೀಲ್ಡ್ ಕವರ್'ನಲ್ಲಿತ್ತು. ಅದನ್ನು ಎಲ್ಲ ಸಚಿವರ ಎದುರಿಗೆ ತೆರೆದಿದ್ದು, ಮನೆಯಲ್ಲಿ ಇಟ್ಟುಕೊಳ್ಳಲು ಸಾಧ್ಯವೇ? ಆರ್‌ಎಸ್‌ಎಸ್ ಹೇಳಿಕೊಟ್ಟದ್ದನ್ನಷ್ಟೇ ಬಿಜೆಪಿಯವರು ಮಾತನಾಡುತ್ತಾರೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ವೀರಶೈವ-ಲಿಂಗಾಯತರನ್ನು ದೂರ ಇಡುವ ಹುನ್ನಾರ'

ದಾವಣಗೆರೆ: 'ಜಾತಿ ಜನಗಣತಿ ಹೆಸರಲ್ಲಿ ವೀರಶೈವ-ಲಿಂಗಾಯತರನ್ನು ರಾಜಕೀಯದಿಂದ ದೂರ ಇಡುವ ಹುನ್ನಾರ ನಡೆದಿದೆ. ಇದರ ವಿರುದ್ಧ ಸಮುದಾಯದ ಶಾಸಕರು, ಸಚಿವರು ಗಟ್ಟಿ ಧ್ವನಿ ಎತ್ತಬೇಕು' ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಇಲ್ಲಿನ ಎಸ್.ಎಸ್. ಬಡಾವಣೆಯಲ್ಲಿ ಭಾನುವಾರ ನಡೆದ ಮಹಾಗಣಪತಿ ಮತ್ತು ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ರಜತ ಮಹೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

'ರಾಜ್ಯದಲ್ಲಿ ವೀರಶೈವ-ಲಿಂಗಾಯತ ಸಮುದಾಯದ ಜನಸಂಖ್ಯೆ ಅತಿ ಹೆಚ್ಚಿದೆ. ಆದರೆ, ಜಾತಿ ಜನಗಣತಿ ವೇಳೆ ಒಳ ಪಂಗಡಗಳನ್ನು ವರ್ಗೀಕರಿಸಿ, ಕಡಿಮೆ ಜನಸಂಖ್ಯೆ ತೋರಿಸುವ ಚಾಣಾಕ್ಷತೆಯನ್ನು ಸರ್ಕಾರ ಪ್ರದರ್ಶಿಸಿದೆ. ಇನ್ನೊಮ್ಮೆ ಮನೆ, ಮನೆಗೆ ಭೇಟಿ ನೀಡಿ ಸಮೀಕ್ಷೆ ಮಾಡಿದರೆ ನೈಜ ಅಂಕಿ ಅಂಶ ಹೊರಬರಲಿದೆ' ಎಂದರು.

'ವರದಿ ಒಪ್ಪಲು ಸಾಧ್ಯವೇ ಇಲ್ಲ'


ವಚನಾನಂದ ಸ್ವಾಮೀಜಿ

ದಾವಣಗೆರೆ: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಅಥವಾ ಜಾತಿಗಣತಿ ವರದಿಯನ್ನು ಒಪ್ಪಲು ಸಾಧ್ಯವೇ ಇಲ್ಲ' ಎಂದು ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೇಳಿದ್ದಾರೆ.

'ನಮ್ಮ ಸಮುದಾಯದ ಜನಸಂಖ್ಯೆಯು ವರದಿಯಲ್ಲಿ ದಾಖಲಾಗಿರುವುದಕ್ಕಿಂತಲೂ ಹೆಚ್ಚಿದೆ. ಮೇಲ್ನೋಟಕ್ಕೆ ಈ ವರದಿ ಅವೈಜ್ಞಾನಿಕವಾಗಿರುವಂತೆ ಕಂಡುಬರುತ್ತಿದೆ. ಸಮೀಕ್ಷೆ ನಡೆಸಿ 10 ವರ್ಷಗಳಿಗೂ ಅಧಿಕ ಸಮಯವಾಗಿದೆ. ಇವತ್ತಿಗೆ ಇದು ಎಷ್ಟು ಪ್ರಸ್ತುತ' ಎಂದಿದ್ದಾರೆ.

'ಸಮೀಕ್ಷೆ ಮಾಡುವವರು ಸಾಕಷ್ಟು ಮನೆಗಳಿಗೆ ಭೇಟಿ ನೀಡದಿರುವುದು ಸ್ಪಷ್ಟವಾಗಿದ್ದು, ಕರ್ತವ್ಯಲೋಪ ಎಸಗಿದ್ದಾರೆ. ವರದಿಯ ಅಂಕಿ ಅಂಶಗಳು ತಪ್ಪಾಗಿದ್ದರೆ ಫಲಾನುಭವಿಗಳ ಆಯ್ಕೆಯೂ ತಪ್ಪಾಗುವ ಸಾಧ್ಯತೆಯಿದೆ. ಅಂಕಿ ಅಂಶಗಳಲ್ಲಿ ಲೋಪವಾದರೆ ಸಹಜವಾಗಿಯೇ ಸರ್ಕಾರದ ಉದ್ದೇಶ ಈಡೇರುವುದಿಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಆತುರದ ನಿರ್ಧಾರ ಇಲ್ಲ: ಡಿಕೆಶಿ

ಮಂಗಳೂರು: 'ತುಳಿತಕ್ಕೆ ಒಳಗಾದವರಿಗೆ ಶಕ್ತಿ ತುಂಬಿ, ಎಲ್ಲರಿಗೂ ನ್ಯಾಯ ಒದಗಿಸಿ-ಕೊಡಲಾಗುವುದು. ಜಾತಿಗಣತಿ ಜಾರಿ ವಿಚಾರದಲ್ಲಿ ಯಾವುದೇ ಆತುರದ ನಿರ್ಧಾರ ಇರುವುದಿಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಧರ್ಮಸ್ಥಳದಲ್ಲಿ ಹೇಳಿದರು.

'ಕಾಂಗ್ರೆಸ್ ಎಲ್ಲ ಸಮುದಾಯಗಳನ್ನು ಸರಿಸಮನಾಗಿ ತೆಗೆದುಕೊಂಡು ಹೋಗಲು ಬದ್ಧವಾಗಿದೆ. ಎಲ್ಲರಿಗೂ ನ್ಯಾಯ ಒದಗಿಸುವ ಉದ್ದೇಶವಿದೆ. ಯಾರಿಗಾದರೂ ಅನ್ಯಾಯ ಮಾಡಬೇಕು ಎಂದು ಎಲ್ಲಿಯೂ ಹೇಳಿಲ್ಲ. ತುಳಿತಕ್ಕೆ ಒಳಗಾದವರಿಗೆ ಶಕ್ತಿ ತುಂಬುವುದು ಪ್ರಮುಖ ಉದ್ದೇಶ. ಜೈನರು, ಒಕ್ಕಲಿಗರು, ಲಿಂಗಾಯತರು ಸೇರಿದಂತೆ ಎಲ್ಲಾ ಸಮುದಾಯದಲ್ಲೂ ಬಡವರಿದ್ದಾರೆ. ಎಲ್ಲರಿಗೂ ನ್ಯಾಯ ಒದಗಿಸಿಕೊಡಲಾಗುವುದು' ಎಂದು ಹೇಳಿದರು.

ವರದಿ ಅವೈಜ್ಞಾನಿಕ ಎಂಬ ಆರೋಪದ ಬಗ್ಗೆ ಕೇಳಿದಾಗ, 'ಈ ಸಮೀಕ್ಷೆಯಲ್ಲಿ ಶೇ 90ರಷ್ಟು ಜನರಿಂದ ಮಾಹಿತಿ ಪಡೆದಿದ್ದಾರೆ. ನಾವು ಈಗ ವರದಿಯ ಅಧ್ಯಯನ ಆರಂಭಿಸಿದ್ದೇವೆ. ಇದಕ್ಕೆ ಸಮಯ ಬೇಕು. ಈ ವಿಚಾರದಲ್ಲಿ ಯಾವುದೇ ಆತುರದ ತೀರ್ಮಾನವಿಲ್ಲ' ಎಂದರು.

'ಯಾದವ ಸಮಾಜ ಒಡೆದ ಗಣತಿ'

ಪುತ್ತೂರು (ದಕ್ಷಿಣ ಕನ್ನಡ): 'ಸಣ್ಣ ಸಮುದಾಯವಾಗಿರುವ ಗೊಲ್ಲ ಹಾಗೂ ಯಾದವ ಒಂದೇ ಸಮುದಾಯವಾಗಿದ್ದರೂ ಗೊಲ್ಲ ಸಮಾಜವನ್ನು ಪ್ರವರ್ಗ 1ಎ ಹಾಗೂ ಯಾದವ ಸಮಾಜವನ್ನು ಪ್ರವರ್ಗ 1ಬಿ ಎಂದು ವಿಂಗಡಿಸಿ ಸಮುದಾಯವನ್ನು ಒಡೆದು ಆಳುವ ಕಾರ್ಯ ಜಾತಿ ಗಣತಿಯಿಂದ ಆಗಿದೆ' ಎಂದು ದೊಡ್ಡಬಳ್ಳಾಪುರ ಶಾಸಕ ಧೀರಜ್ ಮುನಿರಾಜ್ ಹೇಳಿದರು.

ಪುತ್ತೂರು ತಾಲ್ಲೂಕಿನ ಪಾಣಾಜೆ ಗ್ರಾಮದ ಆರ್ಲಪದವಿನಲ್ಲಿ ಭಾನುವಾರ ಯಾದವ ಸಭಾ ಕರ್ನಾಟಕ ಕೇಂದ್ರ ಸಮಿತಿ ಹಮ್ಮಿಕೊಂಡಿದ್ದ ಜಿಲ್ಲಾ ಯಾದವ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

'ಜಾತಿ ಗಣತಿ ವ್ಯವಸ್ಥೆ ಅವೈಜ್ಞಾನಿಕವಾಗಿದೆ ಎಂದು ಹಲವು ಸಮುದಾಯದವರು ಹೋರಾಟ ಮಾಡಿದ್ದಾರೆ. ಅಲೆಮಾರಿ ಸಮುದಾಯವಾಗಿರುವ ನಮಗೆ ಪ್ರವರ್ಗ 1ರಲ್ಲಿಯೇ ಸೇರಿಸಿ ಸೂಕ್ತ ಸ್ಥಾನಮಾನ ನೀಡಬೇಕು. ಇದಕ್ಕಾಗಿ ರಾಜ್ಯಮಟ್ಟದಲ್ಲಿ ಹೋರಾಟ ಮಾಡಲಾಗುವುದು' ಎಂದರು.

'ಸಮುದಾಯದ ಹಕ್ಕೊತ್ತಾಯವನ್ನು ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಶಾಸಕರೊಂದಿಗೆ ಅಧಿವೇಶನದಲ್ಲಿ ಮಂಡಿಸಿ ಸಮಸ್ಯೆ ಪರಿಹರಿಸಲು ಯತ್ನ ಮಾಡಲಾಗುವುದು' ಎಂದು ಹೇಳಿದರು.

'ಜಾತಿ ಗಣತಿ ವೈಜ್ಞಾನಿಕ: ಎಚ್‌.ಸಿ. ಮಹದೇವಪ್ಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲವು ಸಮುದಾಯಗಳು ತಮ್ಮ ಜನಸಂಖ್ಯೆ 50 ಲಕ್ಷದಿಂದ 80 ಲಕ್ಷ ಎಂದು ಹೇಳುತ್ತಿವೆ. ಆದರೆ, ಯಾರ ಬಳಿಯೂ ಅವರವರ ಸಮುದಾಯದ ಜನಸಂಖ್ಯೆಯ ನಿಖರ ಮಾಹಿತಿ ಇಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಎಚ್‌. ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಎಲ್ಲ ಸಮುದಾಯಗಳ ಜನಸಂಖ್ಯೆಯ ಮಾಹಿತಿಯಿದೆ. ಈ ಸಮೀಕ್ಷೆ ವೈಜ್ಞಾನಿಕವಾಗಿದೆ' ಎಂದು ಅಭಿಪ್ರಾಯಪಟ್ಟರು.

'ತಮ್ಮ ಸಮುದಾಯದ ಅಂಕಿ ಅಂಶ ಸರಿಯಾಗಿದೆಯೇ' ಎಂಬ ಪ್ರಶ್ನೆಗೆ, 'ನನ್ನ ಸಮುದಾಯ ಎಂದು ಎಲ್ಲಿಯೂ ಹೇಳಿಲ್ಲ' ಎಂದರು.

' ಸಂಪುಟ ಸಭೆಯಲ್ಲಿ ಸಮೀಕ್ಷೆ ವರದಿ ಕುರಿತ ಚರ್ಚೆ ಅಪೂರ್ಣವಾಗಿದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚೆ ಮುಂದುವರಿಯಲಿದೆ. ಆದರೆ, ಏ. 24ರಂದು ನಡೆಯಲಿರುವ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬರುವುದಿಲ್ಲ' ಎಂದರು.

'ನಮ್ಮ ತಂದೆ ಹಾಗೆ ಮಾತನಾಡಬಾರದಿತ್ತು'

ದಾವಣಗೆರೆ: 'ಲಿಂಗಾಯತರು ಹಾಗೂ ಒಕ್ಕಲಿಗರನ್ನು ಎದುರು ಹಾಕಿಕೊಂಡು ರಾಜ್ಯಭಾರ ಮಾಡಲು ಸಾಧ್ಯವೇ ಎಂದು ನಮ್ಮ ತಂದೆಯವರು (ಶಾಸಕ ಶಾಮನೂರು ಶಿವಶಂಕರಪ್ಪ) ಹೇಳಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಅವರು ಆ ರೀತಿ ಮಾತನಾಡಬಾರದಿತ್ತು' ಎಂದು ಸಚಿವ ಎಸ್‌.ಎಸ್.ಮಲ್ಲಿಕಾರ್ಜುನ್ ತಿಳಿಸಿದರು.'ಸಮೀಕ್ಷಾ ವರದಿ ಜಿಲ್ಲಾಧಿಕಾರಿ ಕಚೇರಿ, ಪಂಚಾಯಿತಿ, ಹೋಬಳಿ ಹಾಗೂ ವಾರ್ಡ್‌ವಾರು ಸಾರ್ವಜನಿಕರಿಗೆ ಸಿಗುವಂತಾಗಬೇಕು. ಆಗ ಅವರೂ ಅವಲೋಕನ ಮಾಡಬಹುದು. ತಿದ್ದಿ ಸರಿ-ಪಡಿಸಿಕೊಳ್ಳಲು 3 ರಿಂದ 6 ತಿಂಗಳ ಕಾಲಾವಕಾಶ ನೀಡಬೇಕು. ಈ ಸಂಬಂಧ ಸಮಾಜದ ಏಳು ಸಚಿವರು ಒಮ್ಮತದ ನಿರ್ಣಯ ಕೈಗೊಂಡಿದ್ದೇವೆ' ಎಂದರು.

ಮರ ಹನನಕ್ಕೆ ಖಂಡನೆ

ಮೈಸೂರಿನ ಎಸ್‌ಪಿ ಕಚೇರಿ ಎದುರಿನ ರಸ್ತೆಯಲ್ಲಿ 40 ಮರಗಳ ಹನನ ಖಂಡಿಸಿ 'ಟೀಂ ಮೈಸೂರು' ಸದಸ್ಯರು ಭಾನುವಾರ 'ವನತಾಯಿ ಮರಣ' ಶೀರ್ಷಿಕೆಯಲ್ಲಿ 3ಡಿ ಚಿತ್ರ ಬಿಡಿಸಿ ವಿನೂತನವಾಗಿ ಪ್ರತಿಭಟಿಸಿದರು. ಗೋಕುಲ್ ಗೋವರ್ಧನ್, ಮನೋಹರ್ ಮೊದಲಾದವರು ಪಾಲ್ಗೊಂಡಿದ್ದರು

ಪ್ರಜಾವಾಣಿ ಚಿತ್ರ

'ಸಂಪತ್ತಿನ ಸಮಾನ ಹಂಚಿಕೆಗೆ ಯತ್ನ'

ಯಾದವ, ಹಣಬರ, ಗೊಲ್ಲ ಸಂಘದ ಶತಮಾನೋತ್ಸವ ಸಮಾವೇಶದಲ್ಲಿ ಸಿ.ಎಂ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): 'ನಾನು ಮುಖ್ಯಮಂತ್ರಿ ಆದಾಗಿನಿಂದ ಎಲ್ಲ ಸಮಾಜಗಳಿಗೂ ಸಮಾನ ಅವಕಾಶ ಕಲ್ಪಿಸಲು ಮತ್ತು ಸಂಪತ್ತಿನ ಸಮಾನ ಹಂಚಿಕೆ ಮಾಡಲು ಪ್ರಯತ್ನಿಸಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪಟ್ಟಣದಲ್ಲಿ ಭಾನುವಾರ ಕರ್ನಾಟಕ ರಾಜ್ಯ ಯಾದವ, ಹಣಬರ, ಗೊಲ್ಲ ಸಂಘದ ಶತಮಾನೋತ್ಸವ ಸಮಾವೇಶ ಹಾಗೂ ಚಿತ್ರದುರ್ಗದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ ಅವರ 16ನೇ ಪಟ್ಟಾಭಿಷೇಕ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, 'ನಾವೆಲ್ಲ ಶೂದ್ರರು. ಚಿಕ್ಕೋಡಿ-ಸದಲಗಾ ಶಾಸಕ ಗಣೇಶ ಹುಕ್ಕೇರಿ, ಕಾಗವಾಡ ಶಾಸಕ ರಾಜು ಕಾಗೆ ಕೂಡ ಶೂದ್ರ. ಶೂದ್ರರನ್ನು ಬಿಟ್ಟು ಉಳಿದ ಮೂರು ವರ್ಗದವರು ಶಿಕ್ಷಣ ಪಡೆದು ಮುಂದೆ ಹೋದರು. ನಾವು ಹಿಂದೆ ಉಳಿದೆವು' ಎಂದರು.

'ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸಮಾನತೆ ಬಹುಸಂಖ್ಯಾತರಿಗೆ ಸಿಕ್ಕಿಲ್ಲ. ಇವು ಸಿಕ್ಕಾಗ ಮಾತ್ರ ಸಮ ಸಮಾಜದ ನಿರ್ಮಾಣ ಸಾಧ್ಯ. ಇದೇ ಅಸಮಾನತೆ ಮುಂದುವರಿದರೆ ಅವರೇ ಸ್ವಾತಂತ್ರ್ಯ ನಾಶ ಮಾಡುತ್ತಾರೆ ಎಂದು ಡಾ.ಅಂಬೇಡ್ಕರ್ ಹೇಳಿದ್ದಾರೆ' ಎಂದರು.

ಚಿತ್ರದುರ್ಗದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ ಅವರ 16ನೇ ಪಟ್ಟಾಭಿಷೇಕ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ, ಗಣ್ಯರು ಹಾಗೂ ಶ್ರೀಗಳು ಇದ್ದರು

> **ಅಂಬೇಡ್ಕರ್ ಹೇಳಿದ ಶಿಕ್ಷಣ, ಸಂಘಟನೆ, ಹೋರಾಟ ಎಂಬ ತತ್ವಗಳನ್ನು ಸ್ವಾಮೀಜಿಗಳು ನೆನಪಿಟ್ಟುಕೊಳ್ಳಬೇಕು. ಎಲ್ಲ ಜಾತಿ ಬಡವರಿಗೂ ಸಮಾನ ಅವಕಾಶ ಸಿಗಬೇಕು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಕುರುಬರು ಬರೀ ಕುರಿ ಕಾಯ್ದುಕೊಂಡೇ ಇರಬೇಕೆ? ಹಣಬರು, ಗೊಲ್ಲರು ಬರೀ ಹಸು ಸಾಕಿಕೊಂಡು ಹಾಲು ಕರೆದುಕೊಂಡೇ ಇರಬೇಕೆ? ನಾವೆಲ್ಲರೂ ಒಂದೇ ದೋಣಿಯ ಪ್ರಯಾಣಿಕರು. ಹಣಬ, ಯಾದವ, ಗೊಲ್ಲ ಸೇರಿ 28 ಉಪ ಜಾತಿಗಳನ್ನು ಒಳಗೊಂಡ ನಿಗಮ ಮಂಡಳಿ ಸ್ಥಾಪಿಸಬೇಕೆಂಬ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ ಅವರ ಬೇಡಿಕೆ ಬಗ್ಗೆ ಮುಖಂಡರೊಂದಿಗೆ ಚರ್ಚೆ ಮಾಡಿ ಮುಂದುವರಿಯುತ್ತೇನೆ' ಎಂದರು.

ಚಿತ್ರದುರ್ಗದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ, ಇಮ್ಮಡಿ ಸಿದ್ಧರಾಜ ಸ್ವಾಮೀಜಿ, ಶಾಂತವೀರ ಸ್ವಾಮೀಜಿ, ಅಖಿಲ ಭಾರತ ಯಾದವ ಸಮಾಜದ ರಾಷ್ಟ್ರೀಯ ಅಧ್ಯಕ್ಷ ಸಪನ್ ಘೋಷ್, ಸಚಿವರಾದ ಸತೀಶ ಜಾರಕಿಹೊಳಿ, ಭೈರತಿ ಸುರೇಶ, ರಾಜ್ಯ ಗೊಲ್ಲ ಯಾದವ ಹಣಬರ ಸಮಾಜದ ಅಧ್ಯಕ್ಷ ಡಿ.ಟಿ. ಶ್ರೀನಿವಾಸ ಇದ್ದರು.

'ರೆಡ್ಡಿ ಸಮುದಾಯದ ಜನಸಂಖ್ಯೆ ನಿಖರವಲ್ಲ'

ಬೆಂಗಳೂರು: ಸಾಮಾಜಿಕ, ಆರ್ಥಿಕ ಸಮೀಕ್ಷೆಯಲ್ಲಿ ರೆಡ್ಡಿ ಸಮುದಾಯದ ಜನಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ. ರೆಡ್ಡಿ ಜನರ ಹಿತಾಸಕ್ತಿಗೆ ವ್ಯತಿರಿಕ್ತ ತೀರ್ಮಾನ ಕೈಗೊಂಡಲ್ಲಿ ಸರ್ಕಾರದ ವಿರುದ್ಧ ಹೋರಾಟ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ರೆಡ್ಡಿ ಜನಸಂಘ ಭಾನುವಾರ ಎಚ್ಚರಿಸಿದೆ.

ರೆಡ್ಡಿ ಜನಸಂಘದ ಆಡಳಿತ ಮಂಡಳಿಯ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಂಘದ ಅಧ್ಯಕ್ಷ ಜಯರಾಮರೆಡ್ಡಿ, 'ರಾಜ್ಯದಲ್ಲಿ ಸಮುದಾಯದ ಜನಸಂಖ್ಯೆ 35 ರಿಂದ 40 ಲಕ್ಷದಷ್ಟಿದೆ. ಆದರೆ, ಕೇವಲ 7.5 ಲಕ್ಷ ತೋರಿಸಿದ್ದಾರೆ. ಸಂಘದಿಂದಲೇ ಸಮುದಾಯದ ಗಣತಿ ಮಾಡುತ್ತೇವೆ' ಎಂದರು.

'ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಇತರೆ ಸಚಿವರು ಮತ್ತು ಪಕ್ಷಾತೀತವಾಗಿ ಎಲ್ಲ ಹಾಲಿ, ಮಾಜಿ, ಶಾಸಕರು, ಮುಖಂಡರನ್ನು ಭೇಟಿ ಮಾಡಿ ಸಭೆಯ ಅಭಿಪ್ರಾಯ ತಿಳಿಸಲಾಗುವುದು' ಎಂದು ಹೇಳಿದರು.

'ರೆಡ್ಡಿ ಅಭಿವೃದ್ಧಿ ನಿಗಮ ಸ್ಥಾಪನೆ ಸೇರಿದಂತೆ ಸಮುದಾಯದ ಬೇಡಿಕೆಗಳನ್ನು ಶತಮಾನೋತ್ಸವಕ್ಕೆ ಮುನ್ನ ಈ ಬೇಡಿಕೆಗಳನ್ನು ಕಾಲಮಿತಿಯಲ್ಲಿ ಈಡೇರಿಸಬೇಕು' ಎಂದು ಒತ್ತಾಯಿಸಿದರು.

'ಮುಖ್ಯಮಂತ್ರಿ ಬದಲಾವಣೆ ಚರ್ಚೆ ಅಪ್ರಸ್ತುತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಬದಲಾವಣೆ ವಿಚಾರ ಚರ್ಚೆ ಈಗ ಅಪ್ರಸ್ತುತ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಪರಮೇಶ್ವರ

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಬದಲಾವಣೆ ವಿಚಾರದ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹಾಡಿ ಹೊಗಳಿದ ಕುರಿತ ಪ್ರಶ್ನೆಗೆ, 'ಒಂದಿಷ್ಟು ಸತ್ಯ ಹೇಳಿದರೆ ಹೊಗಳುವುದು ಏನು ಬಂತು. ಸಿದ್ದರಾಮಯ್ಯ ಅವರು ಹದಿನಾರು ಬಜೆಟ್ ಕೊಟ್ಟಿದ್ದು ಸತ್ಯ ಅಲ್ಲವೇ? ಅವರು ರಾಜ್ಯದಲ್ಲಿ ಆರ್ಥಿಕ ಸಮನ್ವಯತೆ ಸಾಧಿಸಿದ್ದಾರೆ. ಅದನ್ನು ಹೊಗಳಿಕೆ ಅಂದು ಕೊಂಡರೆ ಅಂದುಕೊಳ್ಳಲಿ' ಎಂದರು.

'ಕಳೆದ ಹಲವು ವರ್ಷಗಳಿಂದ ಬೆಂಗಳೂರು-ಮೈಸೂರು ಮೂಲ ಸೌಕರ್ಯ ಕಾರಿಡಾರ್ (ಬಿಎಂಐಸಿ) ಯೋಜನೆಯ ಸಮಸ್ಯೆ ಬಗೆಹರಿದಿಲ್ಲ. ಸರ್ಕಾರ ಜಮೀನು ಕೊಟ್ಟಿದ್ದು, 300ಕ್ಕೂ ಹೆಚ್ಚು ಪ್ರಕರಣ ಕೋರ್ಟ್‌ನಲ್ಲಿದೆ. ಸಚಿವ ಸಂಪುಟ ಸಭೆಯಲ್ಲಿ ಅರ್ಧ ಗಂಟೆಯಲ್ಲಿ ಈ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ. ಹೆಚ್ಚಿನ ಚರ್ಚೆ ಆಗಬೇಕೆಂದು ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದೆ. ಸಮಿತಿಯ ಅಧ್ಯಕ್ಷರನ್ನಾಗಿ ನನ್ನನ್ನು ಮುಖ್ಯಮಂತ್ರಿ ನೇಮಿಸಿದ್ದಾರೆ. ಟಿ.ಬಿ. ಜಯಚಂದ್ರ ಅವರು ಹಿಂದೆ ನೀಡಿದ್ದ ವರದಿಯನ್ನು ಕೂಡ ಅಧ್ಯಯನ ಮಾಡಿ ನಮ್ಮ ವರದಿ ಕೊಡುತ್ತೇವೆ' ಎಂದರು.

ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ: 'ಜಾತಿ ಜನಗಣತಿ ವರದಿ ಜಾರಿಗೆ ವರ್ಷ ಆಗಲಿದೆ' ಎಂಬ ಸಚಿವ ಸತೀಶ ಜಾರಕಿಹೊಳಿ ಹೇಳಿಕೆಗೆ ಬಗ್ಗೆ ಕೇಳಿದಾಗ, 'ಅವರು ವೈಯಕ್ತಿಕ ಅಭಿಪ್ರಾಯ ಹೇಳಿದ್ದಾರೆ. ಅಂತಿಮವಾಗಿ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಆಗುತ್ತದೆ. ಇದು ಜಟಿಲ ಎಂದು ನನಗೇನೂ ಕಾಣಿಸುವುದಿಲ್ಲ' ಎಂದರು.

'ಅಧಿಕಾರಕ್ಕೆ ಆಸೆಪಟ್ಟರೆ ತಪ್ಪೇನು'


ಕೆ.ಎನ್‌. ರಾಜಣ್ಣ

ಚಿಕ್ಕಮಗಳೂರು: ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಯಾವ ಅಧಿಕಾರಕ್ಕೆ ಆಸೆಪಟ್ಟರೂ ತಪ್ಪಲ್ಲ. ಅಂತಿಮ ನಿರ್ಧಾರವನ್ನು ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಕೈಗೊಳ್ಳಲಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಎಲ್ಲರಿಗೂ ಮುಖ್ಯಮಂತ್ರಿಯಾಗುವ ಅರ್ಹತೆ ಇದೆ. ಕೆ.ಎಚ್.ಮುನಿಯಪ್ಪ ಅವರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ಅದರಲ್ಲಿ ತಪ್ಪೇನು ಇಲ್ಲ. ಡಿ.ಕೆ. ಶಿವಕುಮಾರ್, ಕೆ.ಎಚ್.ಮುನಿಯಪ್ಪ ಇರಬಹುದು ಯಾರನ್ನೇ ಮುಖ್ಯಮಂತ್ರಿ ಮಾಡಬೇಕಿದ್ದರೂ ಹೈಕಮಾಂಡ್ ನಿರ್ಧಾರ ಅಂತಿಮ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಬಿಎಸ್‌ವೈ ವಿರುದ್ಧದ ಪ್ರಕರಣ: ಇಂದು 'ಸುಪ್ರೀಂ' ತೀರ್ಪು

ಬಿ.ಎಸ್‌. ಯಡಿಯೂರಪ್ಪ

ನವದೆಹಲಿ: ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ವಿರುದ್ಧದ ಡಿನೋಟಿಫಿಕೇಷನ್ ಪ್ರಕರಣದಲ್ಲಿ ಸಲ್ಲಿಕೆಯಾಗಿದ್ದ ವಿವಿಧ ಅರ್ಜಿಗಳ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್, ಈ ಕುರಿತ ತೀರ್ಪನ್ನು ಸೋಮವಾರ ಪ್ರಕಟಿಸಲಿದೆ.

ಭ್ರಷ್ಟಾಚಾರ ಪ್ರಕರಣದಡಿ ಸಾರ್ವಜನಿಕ ಸೇವೆಯ ವ್ಯಕ್ತಿ ವಿರುದ್ಧ ತನಿಖೆಗೆ ಅನುಮತಿ ನೀಡುವುದಕ್ಕೆ ಈ ಅರ್ಜಿಗಳು ಪ್ರಾಥಮಿಕವಾಗಿ ಸಂಬಂಧಿಸಿವೆ. ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ, ಮನೋಜ್ ಮಿಶ್ರಾ ಅವರಿದ್ದ ಪೀಠ ಏ. 21ರಂದು ತೀರ್ಪು ಪ್ರಕಟಿಸಲಿದೆ.

ವಾಂತಿ ಭೇದಿ: ಸಾವು

ರಿಪ್ಪನ್‌ಪೇಟೆ (ಶಿವಮೊಗ್ಗ): ಚಿಕ್ಕಜೇನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುತ್ತಲ ಸರ್ಕಾರಿ ಶಾಲೆಯ 4ನೇ ತರಗತಿ ವಿದ್ಯಾರ್ಥಿ ಅಭಿನವ (10) ವಾಂತಿ-ಭೇದಿಯಿಂದ ಮೃತಪಟ್ಟಿದ್ದಾನೆ.

ಈತ ಕಾರಕ್ಕಿ ಗ್ರಾಮದ ಸುಂದರ ಹಾಗೂ ಕೋಮಲ ದಂಪತಿಯ ಏಕೈಕ ಪುತ್ರ. ಬಾಲಕನಿಗೆ ವಾಂತಿ-ಭೇದಿ ಕಾಣಿಸಿಕೊಂಡ ಕಾರಣ ಗುರುವಾರ ಕೋಡೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಮನೆಗೆ ಕರೆ ತರಲಾಗಿತ್ತು. ಮತ್ತೆ ಸುಸ್ತು ಕಾಣಿಸಿಕೊಂಡಿದ್ದರಿಂದ ಶುಕ್ರವಾರ ತಾಲ್ಲೂಕು ಆಸ್ಪತ್ರೆಗೆ ಕರೆ-ದೊಯ್ಯಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗುವಾಗ ಅಸುನೀಗಿದ್ದಾನೆ.

ನಗರಸಭೆ ಮಾಜಿ ಸದಸ್ಯನ ಹತ್ಯೆ

ಕಾರವಾರ: ಇಲ್ಲಿನ ಸಂತೆ ಮಾರುಕಟ್ಟೆಯಲ್ಲಿ ಭಾನುವಾರ ನಸುಕಿನ ಜಾವ ನಗರಸಭೆ ಮಾಜಿ ಸದಸ್ಯ ಸತೀಶ್ ಕೊಳಂಬಕರ (62) ಅವರನ್ನು ಚಾಕುವಿನಿಂದ ಇರಿದು ಹತ್ಯೆ ಮಾಡಲಾಗಿದೆ.

'ವಾಯುವಿಹಾರಕ್ಕೆ ತೆರಳಿದ್ದ ವೇಳೆ ಸತೀಶ ಅವರನ್ನು ಬೈಕ್‌ನಲ್ಲಿ ಬಂದ ಇಬ್ಬರು ಅಡ್ಡಗಟ್ಟಿದ್ದರು. ವಾಗ್ವಾದ ನಡೆಸಿ, ಬಳಿಕ ಚಾಕುವಿನಿಂದ ಇರಿದು ಪರಾರಿಯಾದರು. ಗಂಭೀರ ಗಾಯಗೊಂಡ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟರು. ಕೃತ್ಯಕ್ಕೆ ವ್ಯಾವಹಾರಿಕ ದ್ವೇಷ ಕಾರಣವಾಗಿರಬಹುದು. ಆರೋಪಿಗಳ ಸುಳಿವು, ತನಿಖೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ತಿಳಿಸಿದರು.

ಲೊಕೊ ಪೈಲಟ್‌ಗಳಿಗೆ 'ರನ್ನಿಂಗ್ ರೂಮ್'

ಹುಬ್ಬಳ್ಳಿ: ಲೋಕೊ ಪೈಲಟ್‌ಗಳು, ಸಹ ಲೋಕೊ ಪೈಲಟ್‌ಗಳು ಹಾಗೂ ರೈಲ್ವೆ ವ್ಯವಸ್ಥಾಪಕರಿಗೆ ಅವರ ವಿಶ್ರಾಂತಿ ಅವಧಿಯಲ್ಲಿ ವಾಸ್ತವ್ಯಕ್ಕೆ ರನ್ನಿಂಗ್ ರೂಮ್ ಸೌಲಭ್ಯ ಕಲ್ಪಿಸಲಾಗಿದೆ ಎಂದು ನೈರುತ್ಯ ರೈಲ್ವೆ ಹೆಚ್ಚುವರಿ ರೈಲ್ವೆ ವ್ಯವಸ್ಥಾಪಕ ಟಿ.ವಿ. ವಿಷ್ಣುಭೂಷಣ ಹೇಳಿದರು.

'ನೈರುತ್ಯ ರೈಲ್ವೆಯ ಹುಬ್ಬಳ್ಳಿ ವಿಭಾಗದಲ್ಲಿ 9, ಬೆಂಗಳೂರು ವಿಭಾಗದಲ್ಲಿ 4, ಮೈಸೂರು ವಿಭಾಗದಲ್ಲಿ 9 ಸೇರಿದಂತೆ ಒಟ್ಟು 22 ರನ್ನಿಂಗ್ ರೂಮ್‌ಗಳು ಕಾರ್ಯ ನಿರ್ವಹಿಸುತ್ತಿವೆ' ಎಂದು ಅವರು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ಹುಬ್ಬಳ್ಳಿ ವಿಭಾಗದ 9 ರನ್ನಿಂಗ್ ರೂಮ್‌ಗಳಲ್ಲಿ, 431 ಹಾಸಿಗೆ ಸೌಲಭ್ಯ ಇದೆ. ಹುಬ್ಬಳ್ಳಿ ರೈಲು ನಿಲ್ದಾಣದ ಬಳಿ 36 ಕೊಠಡಿ ಇರುವ ರನ್ನಿಂಗ್ ರೂಮ್ ಇದ್ದು, ಇಲ್ಲಿ 72 ಹಾಸಿಗೆ ಸೌಲಭ್ಯ, ಅತ್ಯಾಧುನಿಕ ಮತ್ತು ಹವಾನಿಯಂತ್ರಿತ ವ್ಯವಸ್ಥೆ ಇದೆ' ಎಂದು ತಿಳಿಸಿದರು.

ಲೋಕೊ ಪೈಲಟ್‌ಗಳಿಗೆ ಕೇವಲ ₹5ಕ್ಕೆ ಊಟ, ಉಪಾಹಾರ ಒದಗಿಸಲಾ-ಗುತ್ತಿದೆ. ಒಂದು ಬಾರಿ ಊಟಕ್ಕೆ ₹65 ವೆಚ್ಚವಾಗಲಿದ್ದು, ಅದರಲ್ಲಿ ₹60 ಅನ್ನು ರೈಲ್ವೆ ಇಲಾಖೆ ಭರಿಸಲಿದೆ ಎಂದು ತಿಳಿಸಿದರು.

ಬೆಂಗಳೂರು ಗ್ರಾಮಾಂತರದಲ್ಲಿ ತಾಸಿಗೂ ಹೆಚ್ಚು ಕಾಲ ಗಾಳಿ, ಮಳೆ

ವಿವಿಧೆಡೆ ಗುಡುಗು– ಸಿಡಿಲು ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಶಿವಮೊಗ್ಗ: ಕೊಡಗು ಜಿಲ್ಲೆಯ ಮಡಿಕೇರಿ, ಸುಂಟಿಕೊಪ್ಪ, ಸಿದ್ದಾಪುರ ಸೇರಿದಂತೆ ಹಲವೆಡೆ ಭಾನುವಾರ ಮಳೆಯಾಗಿದೆ. ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯಾದ್ಯಂತ ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆ ಸುರಿದಿದೆ.

ಮಡಿಕೇರಿಯಲ್ಲಿ ಅರ್ಧ ಗಂಟೆ ಬಿರುಸಿನ ಮಳೆಯಾಯಿತು. ಸೋಮವಾರ ಪೇಟೆ, ವಿರಾಜಪೇಟೆ, ನಾಪೋಕ್ಲುವಿನಲ್ಲಿ ಸಾಧಾರಣ ಮಳೆಯಾಗಿದೆ.

ಮೈಸೂರು ನಗರದಲ್ಲಿ ರಾತ್ರಿ ಗುಡುಗು-ಸಿಡಿಲು ಸಹಿತ ಜೋರು ಮಳೆಯಾಯಿತು. ಜಿಲ್ಲೆಯ ಪಿರಿಯಾಪಟ್ಟಣ, ಹುಣಸೂರು ಭಾಗದಲ್ಲಿ, ಹಾಸನ ಜಿಲ್ಲೆಯ ವಿವಿಧೆಡೆಯೂ ಮಳೆಯಾಗಿದೆ.

ಶಿವಮೊಗ್ಗ ನಗರದಲ್ಲಿ ಸಂಜೆ ಅರ್ಧ ಗಂಟೆ ವರುಣನ ಆರ್ಭಟ ನಡೆಯಿತು. ಸಾಗರ ತಾಲ್ಲೂಕಿನಲ್ಲಿ ಒಂದು ಗಂಟೆಗೂ ಹೆಚ್ಚು ಅವಧಿ ಮಳೆ ಸುರಿಯಿತು. ಗಾಳಿಯ ರಭಸಕ್ಕೆ ಆರು ಮನೆಗಳ ಮೇಲೆ ಮರ ಬಿದ್ದು ಹಾನಿ ಉಂಟಾಗಿದೆ. ಆನಂದಪುರ ಹಾಗೂ ಶಿಕಾರಿಪುರ ಸುತ್ತಮುತ್ತಲೂ ವರ್ಷಧಾರೆಯಾಗಿದೆ.

ಆನೇಕಲ್ ತಾಲ್ಲೂಕಿನ ಕಿತ್ತಗಾನಹಳ್ಳಿ ಗೇಟ್‌ನಲ್ಲಿ ಮಳೆ ನೀರಿನಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು

ದಾವಣಗೆರೆ ವರದಿ: ದಾವಣಗೆರೆಯಲ್ಲಿ ರಾತ್ರಿ ಸುಮಾರು ಅರ್ಧಗಂಟೆ ಜೋರು ಮಳೆ ಸುರಿಯಿತು. ನಗರದ ಹಲವು ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದರಿಂದ ಸ್ಥಳೀಯರು ಸಂಕಷ್ಟ ಅನುಭವಿಸಿದರು. ಜಿಲ್ಲೆಯ ಕಡರನಾಯ್ಕನಹಳ್ಳಿ, ಮಲೇಬೆನ್ನೂರು, ಹರಿಹರ, ಹೊನ್ನಾಳಿಯಲ್ಲೂ ಮಳೆ ಸುರಿದಿದೆ.

ಸಂಜೆ ಮಳೆಗೆ ಹೊಳೆಯಾದ ರಸ್ತೆಗಳು (ಬೆಂ. ಗ್ರಾಮಾಂತರ): ತುಮಕೂರು, ರಾಮನಗರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಭಾನುವಾರ ಸಂಜೆ ತಾಸಿಗೂ ಹೆಚ್ಚು ಮಳೆ ಸುರಿಯಿತು. ರಭಸದಿಂದ ಮಳೆ ಜೊತೆಗೆ ಗಾಳಿ, ಗುಡುಗು, ಸಿಡಿಲುಗಳ ಆರ್ಭಟವೂ ಜೋರಾಗಿತ್ತು.

ನಾಲ್ಕು ದಿನಗಳಿಂದ ಸಂಜೆಯಾದಂತೆಯೇ ಮಳೆ ಶುರುವಾಗುತ್ತಿದೆ. ಮಳೆ ನೀರು ಸರಾಗವಾಗಿ ಹರಿದು ಹೋಗದ ಕಾರಣ ರಸ್ತೆಗಳು ಕೆರೆಯಂತಾಗುತ್ತಿವೆ.

ಹೆಚ್ಚಿನ ಕಡೆ ಒಳಚರಂಡಿಗಳು ಕಟ್ಟಿಕೊಂಡಿವೆ. ಕೆಲವು ಕಡೆ ರಸ್ತೆ ದುರಸ್ತಿ ಕಾರ್ಯ ನಡೆಯುತ್ತಿದೆ. ಇದು ಪರಿಸ್ಥಿತಿಯನ್ನು ಬಿಗಡಾಯಿಸುವಂತೆ ಮಾಡಿದೆ. ಇದರಿಂದ ಕೊಳಚೆ ನೀರು ರಸ್ತೆ ಮೇಲೆ ಹರಿಯಿತು. ತಗ್ಗು ಪ್ರದೇಶದ ಮನೆಗಳಿಗೂ ಕೊಳಚೆ ನೀರು ನುಗ್ಗಿತು. ಕೆಲವು ಮನೆ ಹಾಗೂ ಮಳಿಗೆಗಳ ನೆಲ-ಮಹಡಿಗಳಲ್ಲಿ ಮೊಳಕಾಲವರೆಗೆ ನೀರು ನಿಂತಿದ್ದು, ಪಂಪ್‌ಸೆಟ್‌ಗಳಿಂದ ಹೊರ ಹಾಕಲಾಯಿತು.

ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಸುರಿದ ಭಾರಿ ಮಳೆಯಿಂದಾಗಿ ರಸ್ತೆಗಳಲ್ಲಿ ಎರಡು-ಮೂರು ಅಡಿ ನೀರು ನಿಂತು ವಾಹನ ಸವಾರರು ಪರದಾಡಿದರು. ರಸ್ತೆಯಲ್ಲಿ ಹಲವು ಅಡಿ ನೀರು ನಿಂತ ಕಾರಣ ಮೈಲುಗಟ್ಟಲೇ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಸಂಪುಟ ಸಭೆಗೆ ನೀತಿಸಂಹಿತೆ ಅಡ್ಡಿ?

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಜಿಲ್ಲೆಯ ಹನೂರು ತಾಲ್ಲೂಕಿನ ಮಹದೇಶ್ವರ ಬೆಟ್ಟದಲ್ಲಿ ಇದೇ 24ರಂದು ನಿಗದಿಯಾಗಿರುವ ಸಚಿವ ಸಂಪುಟ ಸಭೆಗೆ ಮಾದರಿ ನೀತಿಸಂಹಿತೆ ಅಡ್ಡಿಯಾಗುವುದೇ ಎಂಬ ಪ್ರಶ್ನೆ ಎದುರಾಗಿದೆ. ಬೆಟ್ಟದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೊರಸಾಣಿ (ಎಸ್‌ಟಿ ಮೀಸಲು) ಗ್ರಾಮದ ಸದಸ್ಯ ಸ್ಥಾನಕ್ಕೆ ಉಪ ಚುನಾವಣೆ ನಡೆಯುತ್ತಿ-ರುವುದು ಇದಕ್ಕೆ ಕಾರಣ.

ಈ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್, 'ಬೆಟ್ಟದ ಒಂದು ಕ್ಷೇತ್ರಕ್ಕೆ ಮೇ 14ರಂದು ಉಪ ಚುನಾವಣೆ ನಿಗದಿಯಾಗಿದ್ದು, ನೀತಿಸಂಹಿತೆ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗಿತ್ತು. ನೀತಿಸಂಹಿತೆ ಉಲ್ಲಂಘನೆ ಆಗದಂತೆ ಸಭೆ ಆಯೋಜಿಸುವಂತೆ ಮುಖ್ಯ ಕಾರ್ಯದರ್ಶಿ ಸೂಚಿಸಿದ್ದು, ಅದರಂತೆ ಸಿದ್ಧತೆ ನಡೆಸಲಾಗುತ್ತಿದೆ' ಎಂದು ತಿಳಿಸಿದರು.

'ನಿಗದಿಯಂತೆ ಸಭೆ ನಡೆಯಲಿದ್ದು, ಬೆಟ್ಟದ ವ್ಯಾಪ್ತಿಯಲ್ಲಿ ಯಾವುದೇ ಹೊಸ ಯೋಜನೆ ಅಥವಾ ಕಾಮಗಾರಿ ಘೋಷಣೆ ಆಗುವುದಿಲ್ಲ ಎಂದರು.

ಸೋಮವಾರ, ಏಪ್ರಿಲ್ 21, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 110 | ಪುಟ 12

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಬೆಂಗಳೂರು ಮಹಿಳೆಯರಿಗೆ ಸುರಕ್ಷಿತವೇ?
'ಬಿಜೆಪಿಯ ರಾಜಕೀಯ ಬೂಟಾಟಿಕೆ' 9
ವೆಬ್‌ನಲ್ಲಿ ಸಂಗೀತ 'ಪಾಠ'ದ ವಿಡಿಯೊ 4

ಪರೀಕ್ಷೆಗೂ 'ಆಧಾರ್'

- ಅಭ್ಯರ್ಥಿಗಳ ಗುರುತು ಪರಿಶೀಲಿಸಲು 'ಆಧಾರ್' ಆಧಾರಿತ ಬಯೊಮೆಟ್ರಿಕ್ ದೃಢೀಕರಣ ವ್ಯವಸ್ಥೆ ಜಾರಿಗೊಳಿಸಲು 'ಸ್ಟಾಫ್ ಸೆಲೆಕ್ಷನ್ ಕಮಿಷನ್' (ಎಸ್‌ಎಸ್‌ಸಿ) ನಿರ್ಧರಿಸಿದೆ
- ಮುಂದಿನ ತಿಂಗಳಿಂದ ನಡೆಯಲಿರುವ ನೇಮಕಾತಿ ಪರೀಕ್ಷೆಗಳಿಗೆ ಈ ಹೊಸ ನಿಯಮ ಜಾರಿ
- ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡುವ ವೇಳೆಯಲ್ಲಿಯೇ ಆಧಾರ್ ಸಂಖ್ಯೆ ನಮೂದಿಸಬೇಕು

ವ್ಯಾನ್ಸ್ ಇಂದು ಭಾರತಕ್ಕೆ ಭೇಟಿ

ನವದೆಹಲಿ: ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಸೋಮವಾರ ಭಾರತಕ್ಕೆ ಭೇಟಿ ನೀಡಲಿದ್ದು, ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಾತುಕತೆ ನಡೆಸಲಿದ್ದಾರೆ. 9

'ತಾಳ್ಮೆ ಪರೀಕ್ಷಿಸಬೇಡಿ'

ಬೆಂಗಳೂರು: 'ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಯ ಜನಿವಾರ ತೆಗೆಸಿದ ಪ್ರಕರಣದಲ್ಲಿ ತಪ್ಪಿತಸ್ಥರನ್ನು ಶಿಕ್ಷಿಸುವ ಮೂಲಕ ಮತ್ತೆ ಈ ರೀತಿ ಘಟನೆ ಮರುಕಳಿಸದಂತೆ ಸ್ಪಷ್ಟ ಸಂದೇಶ ರವಾನಿಸಬೇಕು' ಎಂದು ಕೆಪಿಸಿಸಿ ವಕ್ತಾರ ಶಂಕರ ಗುಹಾ ದ್ವಾರಕನಾಥ್ ಅವರು ಆಗ್ರಹಿಸಿದ್ದಾರೆ. 4

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಹರಿತವಾದ ಆಯುಧ ಬಳಸಿ ಕೃತ್ಯ: ಪತ್ನಿ, ಮಗಳು ವಶಕ್ಕೆ

ನಿವೃತ್ತ ಡಿಜಿ ಓಂ ಪ್ರಕಾಶ್ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಡಿಜಿ ಮತ್ತು ಐಜಿಪಿ) ಓಂ ಪ್ರಕಾಶ್ (68) ಅವರನ್ನು ಹರಿತವಾದ ಆಯುಧದಿಂದ ಇರಿದು ಕೊಲೆ ಮಾಡಲಾಗಿದೆ.

ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ಅವರ ಮನೆಯಲ್ಲೇ ಭಾನುವಾರ ಸಂಜೆ ಕೃತ್ಯ ನಡೆದಿದ್ದು, ಪ್ರಕರಣದ ಸಂಬಂಧ ಮೃತರ ಪತ್ನಿ ಪಲ್ಲವಿ ಮತ್ತು ಮಗಳು ಕೃತಿಯನ್ನು ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸುತ್ತಿದ್ದಾರೆ.

ಪತಿ ಮೃತಪಟ್ಟಿರುವುದಾಗಿ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದ್ದ ಪತ್ನಿ ಪಲ್ಲವಿ, ಪೊಲೀಸರು ಮನೆಗೆ ತಲುಪುವಷ್ಟರಲ್ಲಿ ಮನೆಯ ಮೂರನೇ ಮಹಡಿಯಲ್ಲಿನ ಕೊಠಡಿ ಸೇರಿಕೊಂಡಿದ್ದರು. ಮಗಳೊಂದಿಗೆ ಕೊಠಡಿಯ ಬಾಗಿಲು ಹಾಕಿಕೊಂಡಿದ್ದು, ಹೊರಬರಲು ನಿರಾಕರಿಸುತ್ತಿದ್ದರು. ಪ್ರಾಥಮಿಕ ತನಿಖೆ ಪ್ರಕಾರ ಪತ್ನಿ, ಮಗಳು ಓಂ ಪ್ರಕಾಶ್ ಅವರನ್ನು ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

8ನೇ ಪುಟ ನೋಡಿ

ಖಾರದ ಪುಡಿ, 2 ಚಾಕು ವಶಕ್ಕೆ

ಓಂ ಪ್ರಕಾಶ್ ಅವರ ಕೊಲೆಗೆ ಬಳಸಿರುವ 2 ಚಾಕು ಮತ್ತು ಮೃತದೇಹದ ಪಕ್ಕದಲ್ಲಿದ್ದ ಖಾರದಪುಡಿಯ ಬಾಟಲಿಯನ್ನು ಪೊಲೀಸರು ಸ್ಥಳ ಮಹಜರು ವೇಳೆ ವಶಕ್ಕೆ ಪಡೆದುಕೊಂಡಿದ್ದಾರೆ.

ಓಂ ಪ್ರಕಾಶ್ ಅವರ ಕುಟುಂಬ ಎಚ್‌ಎಸ್‌ಆರ್ ಬಡಾವಣೆಯಲ್ಲಿನ ನೆಲ ಮಹಡಿಯೂ ಸೇರಿದಂತೆ ನಾಲ್ಕು ಅಂತಸ್ತಿನ ಮನೆಯಲ್ಲಿ ವಾಸಿಸುತ್ತಿತ್ತು. ನೆಲ ಮಹಡಿಯಲ್ಲಿ ಓಂ ಪ್ರಕಾಶ್ ಮತ್ತು ಪತ್ನಿ ಪಲ್ಲವಿ ವಾಸವಿದ್ದರು. ಮೊದಲ ಮಹಡಿಯಲ್ಲಿ ಮಗ ಮತ್ತು ಸೊಸೆ ವಾಸಿಸುತ್ತಿದ್ದರು. ಎರಡು ಮತ್ತು ಮೂರನೇ ಮಹಡಿಯಲ್ಲಿ ಮಗಳು ಕೃತಿ ನೆಲಸಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪತ್ನಿ ಕೊಲೆಗೆ ಯತ್ನ?

'ಒಂದು ವಾರದಿಂದ ಮನೆಯಲ್ಲಿ ಜಗಳ ನಡೆಯುತ್ತಿತ್ತು. ಪತಿ ಓಂ ಪ್ರಕಾಶ್ ಪದೇ ಪದೇ ಪಿಸ್ತೂಲ್ ತಂದು, ನನ್ನನ್ನು ಹಾಗೂ ಮಗಳನ್ನು ಶೂಟ್ ಮಾಡುವುದಾಗಿ ಬೆದರಿಸುತ್ತಿದ್ದರು. ಭಾನುವಾರ ಸಹ ಬೇರೆ ಬೇರೆ ವಿಚಾರಕ್ಕೆ ಗಲಾಟೆ ಆಯಿತು. ಗಲಾಟೆ ವಿಕೋಪಕ್ಕೆ ತಿರುಗಿ, ನಮ್ಮ ಕೊಲೆಗೆ ಯತ್ನಿಸಿದರು. ಆಗ ಅವರ ಮುಖಕ್ಕೆ ಖಾರದ ಪುಡಿ ಎರಚಿದೆವು, ಅಡುಗೆ ಎಣ್ಣೆ ಸುರಿದೆವು. ಬಳಿಕ ಕೈ-ಕಾಲು ಕಟ್ಟಿಹಾಕಿ, ಅಡುಗೆ ಮನೆಯ ಚಾಕುವಿನಿಂದ ಚುಚ್ಚಲಾಯಿತು. ತೀವ್ರ ರಕ್ತಸ್ರಾವದಿಂದ ಪತಿ ಮೃತಪಟ್ಟರು' ಎಂದು ಪಲ್ಲವಿ ತನಿಖಾಧಿಕಾರಿಗಳ ಎದುರು ಹೇಳಿಕೆ ನೀಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

8ನೇ ಪುಟ ನೋಡಿ

ಯಾರನ್ನೂ ಬಂಧಿಸಿಲ್ಲ: ವಿಕಾಸ್

'ನಿವೃತ್ತ ಅಧಿಕಾರಿಯ ಕೊಲೆಗೆ ಹರಿತವಾದ ಆಯುಧ ಬಳಸಲಾಗಿದೆ. ಹೆಚ್ಚು ರಕ್ತ ಅವರ ದೇಹದಿಂದ ಹರಿದಿದೆ. ಆಯುಧವನ್ನು ವಶಕ್ಕೆ ಪಡೆದುಕೊಂಡಿದ್ದು, ಕೃತ್ಯಕ್ಕೆ ಇದೇ ಆಯುಧ ಬಳಸಲಾಗಿದೆಯೇ ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ. ಘಟನೆ ನಡೆದ ವೇಳೆ ಮೂವರು ಇದ್ದರು ಎಂಬುದು ಗೊತ್ತಾಗಿದೆ' ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ವಿಕಾಸ್ ತಿಳಿಸಿದರು.

'ಕೊಲೆ ಯಾವ ಕಾರಣಕ್ಕೆ ನಡೆದಿದೆ ಎಂಬುದರ ಬಗ್ಗೆ ಪೂರ್ಣ ಮಾಹಿತಿ ಇಲ್ಲ. ಯಾರನ್ನೂ ಬಂಧಿಸಿಲ್ಲ. ಕುಟುಂಬದ ಸದಸ್ಯರ ಹೇಳಿಕೆ ಪಡೆದುಕೊಳ್ಳಲಾಗುತ್ತಿದೆ. ಮೃತರ ಪುತ್ರ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡ ಬಳಿಕ ತನಿಖೆ ಕೈಗೊಳ್ಳಲಾಗುವುದು. ಸೋಮವಾರ ಮರಣೋತ್ತರ ಪರೀಕ್ಷೆ ನಡೆಯಲಿದ್ದು, ವರದಿ ಬಂದ ಬಳಿಕ ಮತ್ತಷ್ಟು ವಿಷಯ ಗೊತ್ತಾಗಲಿದೆ' ಎಂದು ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಂದ ಆಶೀರ್ವಾದ ಪಡೆದರು

'ಟೀಕೆಗೆ ಹೆಗ್ಗಡೆ ಅಂಜಬೇಕಿಲ್ಲ'

ಧರ್ಮಸ್ಥಳ (ದಕ್ಷಿಣ ಕನ್ನಡ): 'ವೀರೇಂದ್ರ ಹೆಗ್ಗಡೆ ಅವರು ಜೈನರು, ಧರ್ಮಸ್ಥಳದ ಮಂಜುನಾಥ ದೇವಸ್ಥಾನ ಹಿಂದೂ ದೇವಸ್ಥಾನ ಎಂಬ ಟೀಕೆ ಖಂಡನೀಯ. ಹೆಗ್ಗಡೆಯವರು ಇದಕ್ಕೆ ಅಂಜಬೇಕಾಗಿಲ್ಲ, ಅಳುಕಬೇಕಾಗಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಧರ್ಮಸ್ಥಳದಲ್ಲಿ ನಿರ್ಮಿಸಿರುವ ಉಮಾಮಹೇಶ್ವರ, ಶಿವಪಾರ್ವತಿ ಮತ್ತು ಗೌರೀಶಂಕರ ಕಲ್ಯಾಣ ಮಂಟಪಗಳ ಸಮುಚ್ಚಯವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

'ನಿಮ್ಮ ಜೊತೆ ನಾವಿದ್ದೇವೆ. ನಿಮ್ಮ ಹಾಗೂ ಕ್ಷೇತ್ರದ ರಕ್ಷಣೆಗೆ ನಾವೆಲ್ಲ ಸಿದ್ಧರು, ಬದ್ಧರು. ಟೀಕೆಗಳು ತಾತ್ಕಾಲಿಕವಾಗಿದ್ದು, ಅಲ್ಪಕಾಲದಲ್ಲಿ ಸಾಯುತ್ತವೆ. ನಾವು ಮಾಡುವ ಸೇವಾಕಾರ್ಯಗಳು ಶಾಶ್ವತವಾಗಿರುತ್ತವೆ' ಎಂದರು.

ದತ್ತಾಂಶ ಸಂಗ್ರಹಕ್ಕೆ 'ಮೊಬೈಲ್ ಆ್ಯಪ್' • ಶಿಕ್ಷಕರ ಬಳಕೆ

ಒಳ ಮೀಸಲು: ಮೇನಲ್ಲಿ ಸಮೀಕ್ಷೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಕುರಿತು ಶಿಫಾರಸು ಮಾಡಲು ಸರ್ಕಾರ ರಚಿಸಿರುವ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಆಯೋಗವು ಮೇ ಮೊದಲ ವಾರದಿಂದ ರಾಜ್ಯದಾದ್ಯಂತ ಪರಿಶಿಷ್ಟ ಜಾತಿಗಳಿಗೆ ಸಂಬಂಧಿಸಿದ ವಿವಿಧ ಅಂಶಗಳ ದತ್ತಾಂಶ ಸಂಗ್ರಹಕ್ಕೆ ಸಮೀಕ್ಷೆ ನಡೆಸಲು ತೀರ್ಮಾನಿಸಿದೆ.

ಇದೇ ಮೊದಲ ಬಾರಿಗೆ ಮೊಬೈಲ್ ತಂತ್ರಾಂಶದ ಮೂಲಕ ಸಮೀಕ್ಷೆ ನಡೆಯಲಿದೆ. ಸಮೀಕ್ಷೆಯಿಂದ ಯಾರೂ ಹೊರಗುಳಿಯಬಾರದೆಂಬ ಕಾರಣಕ್ಕೆ ಮೊದಲು ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹ, ಯಾರಾದರೂ ಬಿಟ್ಟು ಹೋಗಿದ್ದರೆ ಅಂಥವರು ಮಾಹಿತಿ ನೀಡಲು ಅನುಕೂಲ ಮಾಡಿಕೊಡಲು ಪಂಚಾಯಿತಿ ಮಟ್ಟದಲ್ಲಿ ತಾತ್ಕಾಲಿಕ ಕೇಂದ್ರ ಸ್ಥಾಪಿಸಲಾಗುವುದು.

4ನೇ ಪುಟ ನೋಡಿ

ಸಮೀಕ್ಷೆಯ ಉಸ್ತುವಾರಿಗೆ ಸಮನ್ವಯ ಸಮಿತಿ

ಪರಿಶಿಷ್ಟ ಜಾತಿಗಳ ಸಮೀಕ್ಷೆ ಪೂರ್ಣಗೊಳಿಸಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯೂ (ಎಸಿಎಸ್) ಆಗಿರುವ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಸಮನ್ವಯ ಸಮಿತಿ ರಚಿಸಲಾಗಿದೆ. ಈ ಸಮಿತಿಯಲ್ಲಿ ವಿವಿಧ ಇಲಾಖೆಗಳ ಮುಖ್ಯಸ್ಥರು, ಎಸ್‌ಸಿಎಸ್‌ಪಿ, ಟಿಎಸ್‌ಪಿ ನೋಡಲ್ ಏಜೆನ್ಸಿಯ ಸಲಹೆಗಾರ ಇ. ವೆಂಕಟಯ್ಯ, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್. ಕಾಂತರಾಜ, ನಿವೃತ್ತ ಐಎಎಸ್ ಅಧಿಕಾರಿ ಡಿ.ಎನ್. ನಾಯಕ್, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ಬಿ.ಎಸ್. ಹಿರೇಮಠ್ ಸೇರಿ 14 ಸದಸ್ಯರಿದ್ದಾರೆ. ಅಲ್ಲದೆ, ನಗರಾಭಿವೃದ್ಧಿ ಇಲಾಖೆಯ ಎಸಿಎಸ್ ಅಧ್ಯಕ್ಷತೆಯಲ್ಲಿ ಮೂವರು ಸದಸ್ಯರನ್ನು ಒಳಗೊಂಡ ಬಿಬಿಎಂಪಿ ಸಮನ್ವಯ ಸಮಿತಿ, ಆಯಾ ಜಿಲ್ಲಾಧಿಕಾರಿಯ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಹಾಗೂ ಉಪ ವಿಭಾಗಾಧಿಕಾರಿ ಅಧ್ಯಕ್ಷತೆಯಲ್ಲಿ ತಾಲ್ಲೂಕುಮಟ್ಟದ ಸಮನ್ವಯ ಸಮಿತಿ ರಚಿಸಲಾಗಿದೆ.

3 ಹಂತಗಳಲ್ಲಿ ದತ್ತಾಂಶ ಸಂಗ್ರಹ

- ಮನೆ ಮನೆಗೆ ತೆರಳಿ ಸಮೀಕ್ಷೆ
- ಪ್ರತಿ ಪಂಚಾಯಿತಿಯಲ್ಲಿ ತಾತ್ಕಾಲಿಕ ಕ್ಯಾಂಪ್
- ಆನ್‌ಲೈನ್ ಮೂಲಕ ಮಾಹಿತಿ ಸಂಗ್ರಹ

4ನೇ ಪುಟ ನೋಡಿ

ಶಿಸ್ತಿನ ಪಾಠ ಹೇಳಿದ ಅಪ್ಪನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂದೆಯ ಶಿಸ್ತಿನ ಪಾಠಕ್ಕೆ ಬೇಸತ್ತ ಮಗ, ತಾಯಿ ಜತೆ ಸೇರಿ ನಿವೃತ್ತ ಸೈನಿಕನನ್ನು ತಲೆದಿಂಬಿನಿಂದ ಉಸಿರುಗಟ್ಟಿಸಿ ಕೊಲೆ ಮಾಡಿರುವ ಘಟನೆ ವಿವೇಕನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ವಿವೇಕನಗರ ನಿವಾಸಿ ಬೋಲು ಅರಬ್ (47) ಕೊಲೆಯಾದ ನಿವೃತ್ತ ಸೈನಿಕ. ಶನಿವಾರ ನಡುರಾತ್ರಿ ಈ ಘಟನೆ ನಡೆದಿದ್ದು, ಮೃತನ ಪುತ್ರ ಸಮೀರ್(19) ಮತ್ತು ಪತ್ನಿ ತಬಸ್ಸುಮ್(36) ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮಹಾರಾಷ್ಟ್ರ ಮೂಲದ ಬೋಲು ಅರಬ್ ನಿವೃತ್ತ ಸೈನಿಕ, ಮೊದಲ ಪತ್ನಿಗೆ ವಿಚ್ಛೇದನ ನೀಡಿ 2003ರಲ್ಲಿ ತಬಸ್ಸುಮ್ ಅವರನ್ನು ಮದುವೆಯಾಗಿ ಪುತ್ರನ ಜತೆ ವಿವೇಕನಗರದಲ್ಲಿ ವಾಸವಾಗಿದ್ದರು. ಪುತ್ರ ಸಮೀರ್ ನಗರದ ಖಾಸಗಿ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದ. ಶಿಸ್ತಿನ ವ್ಯಕ್ತಿ ಯಾಗಿದ್ದ ಬೋಲು, ಪತ್ನಿ ಮತ್ತು ಪುತ್ರನಿಗೂ ಶಿಸ್ತಿನಿಂದ ಇರುವಂತೆ ಹೇಳುತ್ತಿದ್ದರು.

ವಿನಾಕಾರಣ ಮನೆಯಿಂದ ಹೊರಗೆ ಹೋಗುವಂತಿಲ್ಲ. ಇಂತಿಷ್ಟೇ ಊಟ ಮಾಡಬೇಕೆಂದು ನಿಯಮ ಮಾಡಿದ್ದರು. ಹಾಗಾಗಿ ತಾಯಿ-ಮಗ ಸೇರಿ ಬೋಲು ಅರಬ್ ಕೊಲೆಗೆ ಸಂಚು ರೂಪಿಸಿದ್ದರು. ಶನಿವಾರ ರಾತ್ರಿ ಊಟದಲ್ಲಿ ನಿದ್ದೆ ಮಾತ್ರೆ ಬೆರೆಸಿ ಬೋಲು ಅರಬ್‌ಗೆ ನೀಡಲಾಗಿತ್ತು. ಊಟ ಮಾಡಿದ ಬಳಿಕ ನಿದ್ದೆಗೆ ಜಾರಿದ್ದಾರೆ. ರಾತ್ರಿ 1.30ರ ಸುಮಾರಿಗೆ ತಾಯಿ-ಮಗ ಸೇರಿ ತಲೆದಿಂಬು ತೆಗೆದು ಬೋಲು ಅರಬ್ ಮುಖದ ಮೇಲೆ ಅದುಮಿ ಉಸಿರುಗಟ್ಟಿಸಿ ಕೊಲೆ ಮಾಡಲು ಯತ್ನಿಸಿದ್ದಾರೆ. ಆದರೆ, ಎಚ್ಚರಗೊಂಡು ಪ್ರತಿರೋಧವೊಡ್ಡಿ ಪುತ್ರ, ಪತ್ನಿಗೆ ಹೊಡೆದಿದ್ದಾರೆ. ಆಗ ಪುತ್ರ ಸಮೀರ್ ಕೈಯಿಂದಲೇ ತಲೆ ಹಾಗೂ ಮುಖಕ್ಕೆ ಹಲ್ಲೆ ನಡೆಸಿ ತಂದೆಯನ್ನು ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಹೇಳಿದರು.

4ನೇ ಪುಟ ನೋಡಿ

‘ಹೋಮಿಯೋಪಥಿ ಸಂಶೋಧನಾ ಕೇಂದ್ರ ಸ್ಥಾಪನೆಗೆ ಸಮಾಲೋಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೋಮಿಯೋಪಥಿ ಚಿಕಿತ್ಸಾ ವಿಧಾನದಲ್ಲಿ ಸಂಶೋಧನೆ ಹೆಚ್ಚಬೇಕಿದೆ. ರಾಜ್ಯದಲ್ಲಿ ಹೋಮಿಯೋಪಥಿ ಸಂಶೋಧನಾ ಕೇಂದ್ರ ಸ್ಥಾಪನೆಗೆ ಸಂಬಂಧಿಸಿದಂತೆ ಕೇಂದ್ರ ಆಯುಷ್ ಇಲಾಖೆ ಜತೆಗೆ ಸಮಾಲೋಚನೆ ನಡೆಸಲಾಗುವುದು’ ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಭರವಸೆ ನೀಡಿದರು.

ಕರ್ನಾಟಕ ಹೋಮಿಯೋಪಥಿಕ್ ಮೆಡಿಕಲ್ ಅಸೋಸಿಯೇಷನ್ (ಕೆಎಚ್ಎಂಎ) ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ವಿಶ್ವ ಹೋಮಿಯೋಪಥಿ ದಿನ’ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಹೋಮಿಯೋಪಥಿ ಚಿಕಿತ್ಸಾ ವಿಧಾನ ಇನ್ನಷ್ಟು ಪ್ರಗತಿ ಹೊಂದಲು ಸಂಶೋಧನಾ ಕೇಂದ್ರ ಸಹಕಾರಿಯಾಗಲಿದೆ. ರಾಜ್ಯ ಹೋಮಿಯೋಪಥಿಕ್ ಸಂಘದ ಬೇಡಿಕೆ ಅನುಸಾರ ಕೇಂದ್ರ ಆಯುಷ್ ಇಲಾಖೆ ಜತೆಗೆ ಮಾತುಕತೆ ನಡೆಸುತ್ತೇನೆ. ಅಲೋಪಥಿ, ನ್ಯಾಚುರೋಪಥಿ ಹಾಗೂ ಹೋಮಿಯೋಪಥಿ ನಡುವೆ ಸ್ಪರ್ಧೆ ಹೆಚ್ಚಾಗಿದೆ. ಇದೇ ವೇಳೆ ವೈದ್ಯಕೀಯ ಸೇವೆಯಲ್ಲಿನ ಗುಣಮಟ್ಟ ಕುಸಿಯುತ್ತಿದೆ. ವೈದ್ಯರು ರೋಗಿಗಳ ಜೊತೆಗೆ ಸಮಯ ಕಳೆದು, ಸಮಸ್ಯೆ ಅರಿಯುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಬಳಕೆ ಹೆಚ್ಚಾಗುತ್ತಿರುವ ಈ ಕಾಲಘಟ್ಟದಲ್ಲಿ, ವೈದ್ಯಕೀಯ ಕಾಲೇಜುಗಳಲ್ಲಿನ ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ. ಈ ಬಗ್ಗೆ ಗಮನಹರಿಸಬೇಕಾಗಿದೆ.

ಡಾ. ಸಿ.ಎನ್. ಮಂಜುನಾಥ್

ರಾಜ್ಯ, ಕೇಂದ್ರ ಸರ್ಕಾರಗಳು ವೈದ್ಯಕೀಯ ಕಾಲೇಜುಗಳ ಕಟ್ಟಡ ನಿರ್ಮಾಣದ ಜತೆಗೆ ಅಗತ್ಯ ಸಿಬ್ಬಂದಿಯನ್ನೂ ಒದಗಿಸಬೇಕು. ತಾಲ್ಲೂಕು, ಜಿಲ್ಲಾ ಮಟ್ಟದ ಆಸ್ಪತ್ರೆ, ಮಲ್ಟಿ ಸ್ಪೆಷಾಲಿಟಿ ಸೇರಿ ರಾಜ್ಯದಲ್ಲಿ ಕೊರತೆಯಿರುವ ಶೇ 40ರಷ್ಟು ಸಿಬ್ಬಂದಿಯನ್ನು ಭರ್ತಿ ಮಾಡುವತ್ತ ಸರ್ಕಾರಗಳು ಕ್ರಮ ಕೈಗೊಳ್ಳಬೇಕು’ ಎಂದು ಹೇಳಿದರು.

ಬಿಜೆಪಿ ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ, ‘ಹೋಮಿಯೋಪಥಿ ಪದವೀಧರರಿಗೆ ಉದ್ಯೋಗದ ಸಮಸ್ಯೆ ಕಾಡುತ್ತಿದೆ. ಸರ್ಕಾರವು ಪ್ರದೇಶವಾರು ಹೋಮಿಯೋಪಥಿ ಆಸ್ಪತ್ರೆ, ಕಾಲೇಜು ಪ್ರಾರಂಭಿಸಿ, ಉದ್ಯೋಗ ಸೃಷ್ಟಿ ಮಾಡಬೇಕು. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಬ್ಬರು ಹೋಮಿಯೋಪಥಿ ವೈದ್ಯರು ಕಡ್ಡಾಯವಾಗಿ ಇರುವಂತೆ ನೋಡಿಕೊಳ್ಳಬೇಕು’ ಎಂದು ಆಗ್ರಹಿಸಿದರು.

ಇದೇ ವೇಳೆ, ಕೆಎಚ್ಎಂಎ ವತಿಯಿಂದ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಹಾಗೂ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ. ಸಿ.ಭಗವಾನ್ ಅವರನ್ನು ಸನ್ಮಾನಿಸಲಾಯಿತು. ಕೆಎಚ್ಎಂಎ ರಾಜ್ಯ ಘಟಕದ ಅಧ್ಯಕ್ಷ ಡಾ. ವೀರ ಬ್ರಹ್ಮಾಚಾರಿ, ಕಾರ್ಯಾಧ್ಯಕ್ಷರಾದ ಡಾ. ರಾಜೇಶ್ ಎ., ಡಾ. ನಿರಂಜನ್ ಕುರ್ಕಿಮಠ, ಉಪಾಧ್ಯಕ್ಷ ಡಾ.ಜಯಂತ್ ಎ.ಬಿ. ಉಪಸ್ಥಿತರಿದ್ದರು.

ಬಾನು ಮುಷ್ತಾಕ್ ಅವರ ‘ಹಾರ್ಟ್ ಲ್ಯಾಂಪ್’ ಕುರಿತು ಸಂವಾದ

‘ಕತೆಗಿಲ್ಲ ದೇಶ–ಭಾಷೆಯ ಕಟ್ಟುಪಾಡು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕತೆಯೊಂದು ಜಗತ್ತಿನ ಯಾವುದೇ ಕಾಲ–ದೇಶಗಳೊಂದಿಗೆ ಬೆಸೆದುಕೊಳ್ಳಲು ಭಾಷೆಯೇ ಮುಖ್ಯವಾಗುತ್ತದೆ. ಅದೇ ಸಂದರ್ಭದಲ್ಲಿ ಭಾಷಿಕ ಕಟ್ಟುಪಾಡುಗಳನ್ನು ಒಡೆದುಹಾಕುವ ಯತ್ನಗಳೂ ಅಷ್ಟೇ ಮುಖ್ಯವಾಗುತ್ತವೆ. ಕನ್ನಡ, ಉರ್ದು, ಹಿಂದಿ ಅಥವಾ ಈ ಎಲ್ಲ ಭಾಷೆಗಳ ಸೊಗಡನ್ನು ಉಳಿಸಿಕೊಂಡು ಇಂಗ್ಲಿಷ್‌ಗೆ ಅನುವಾದ ಮಾಡಿದಾಗಲೂ ಕತೆಯು, ಮೂಲದಷ್ಟೇ ಶಕ್ತವಾಗಿರುತ್ತದೆ...’

ಬಾನು ಮುಷ್ತಾಕ್ ಅವರ ಆಯ್ದ ಕತೆಗಳ ಆಂಗ್ಲರೂಪ ‘ಹಾರ್ಟ್ ಲ್ಯಾಂಪ್’ ಕುರಿತು ಬೆಂಗಳೂರು ಅಂತರ ರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ಭಾನುವಾರ ನಡೆದ ಸಂವಾದದಲ್ಲಿ ವ್ಯಕ್ತವಾದ ಅಭಿಪ್ರಾಯಗಳ ಕೂಡುರೂಪವಿದು.

ನಗರದ ಆಗಸಕ್ಕೆ ಕವಿದಿದ್ದ ಮೋಡದ ಮಧ್ಯೆ ಬಿಐಸಿಯಲ್ಲಿ, ಬಾನು ಮುಷ್ತಾಕ್ ಮತ್ತು ಅವರ ಕತೆಗಳನ್ನು ಇಂಗ್ಲಿಷ್‌ನಲ್ಲಿ ಕಟ್ಟಿಕೊಟ್ಟಿರುವ ಅನುವಾದಕಿ ದೀಪಾ ಭಸ್ತಿ ಅವರ ಮಾತುಗಳನ್ನು ಕೇಳಲು ಓದುಗರು ಕಿಕ್ಕಿರಿದು ತುಂಬಿದ್ದರು. ಸಂವಾದ ನಡೆಸಿಕೊಟ್ಟ ಶೈನಿ ಆ್ಯಂಟನಿ ಅವರು ಮುಂದಿಟ್ಟ ಪ್ರಶ್ನೆಗೆ ಲೇಖಕಿ ಮತ್ತು ಅನುವಾದಕಿ ಇಬ್ಬರೂ ಉತ್ತರಿಸುತ್ತಲೇ, ಸಭಿಕರೊಂದಿಗೂ ಮಾತಿಗಿಳಿದರು.

ಮುಸ್ಲಿಂ ಸಮುದಾಯದ ಲೇಖಕಿ ಕನ್ನಡದಲ್ಲಿ ಬರೆಯುವ ಬಗ್ಗೆ ಸಭಿಕರಿಂದ ಬಂದ ಪ್ರಶ್ನೆಗೆ ಬಾನು ಅವರು, ‘ನಮ್ಮ ಕತೆಯನ್ನು ನೀನೇಕೆ ಕನ್ನಡದಲ್ಲಿ ಬರೆಯುತ್ತೀಯ ಎಂದು ನನ್ನ ಸಮುದಾಯದ ಹಲವು ಮಂದಿ ನನ್ನನ್ನು ಪ್ರಶ್ನಿಸುತ್ತಲೇ ಇರುತ್ತಾರೆ. ನಮ್ಮ ಮಧ್ಯೆ ಇಲ್ಲದೇ ಇರುವ ಇಂತಹ ಗೋಡೆಗಳನ್ನು ನಾವೇಕೆ ಕಟ್ಟಿಕೊಳ್ಳಬೇಕು’ ಎಂದು ಮರುಪ್ರಶ್ನೆ ಹಾಕಿದರು.

‘ಬೇರೆ ಬೇರೆ ಸಮುದಾಯಗಳ ಸಾಮಾಜಿಕ ಸ್ಥಿತಿಯ ಅರಿವಿನ ಬಗ್ಗೆ ಪರಸ್ಪರರ ಮಧ್ಯೆ ಇರಬಹುದಾದ ಅಂತರವನ್ನು ನನ್ನ ಕತೆಗಳು ಇಲ್ಲವಾಗಿಸುತ್ತವೆ ಎಂದು ನಾನು ನಂಬಿದ್ದೇನೆ’ ಎಂದರು.

ಕನ್ನಡ, ಉರ್ದು ಮತ್ತು ಹಿಂದಿ ಮಿಶ್ರಿತ ಇಂಗ್ಲಿಷ್ ಅನ್ನು ಅನುವಾದಕ್ಕೆ ಆಯ್ಕೆ ಮಾಡಿಕೊಂಡದ್ದರ ಬಗೆಗಿನ ಪ್ರಶ್ನೆಯನ್ನು ಸಭಿಕರು ದೀಪಾ ಭಸ್ತಿ ಎದುರಿಟ್ಟರು. ದೀಪಾ, ‘ಹಾರ್ಟ್ ಲ್ಯಾಂಪ್‌ನಲ್ಲಿರುವುದು ನಮಗೆಲ್ಲರಿಗೂ ಅರ್ಥವಾಗಬಲ್ಲ ಮತ್ತು ಮನಸ್ಸಿಗೆ ನಾಟಬಲ್ಲ ಇಂಗ್ಲಿಷ್. ಅದನ್ನು ಬ್ರಿಟನ್ ಇಂಗ್ಲಿಷ್‌ನಲ್ಲಿ ಅನುವಾದಿಸಿಬಿಟ್ಟರೆ, ಅದರಲ್ಲಿನ ನಾಟುವ ಶಕ್ತಿ ಇಲ್ಲದೇ ಹೋಗುತ್ತದೆ’ ಎಂದರು.

ಮಾತನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ದ ಬಾನು ಅವರು, ‘ಇಂಗ್ಲಿಷ್ ಜನರ ಜೀವನವನ್ನು ಅರ್ಥಮಾಡಿಕೊಳ್ಳಲು ನಾವು ಅವರದ್ದೇ ಭಾಷೆಯಲ್ಲಿ ಬಹಳಷ್ಟು ಓದಿದ್ದೇವೆ. ಅವರೂ ನಮ್ಮನ್ನು ನಮ್ಮ ಭಾಷೆಯಲ್ಲೇ ಅರ್ಥಮಾಡಿಕೊಳ್ಳಬೇಕಲ್ಲವೇ? ಅಂತಹದ್ದೊಂದು ಅವಕಾಶವನ್ನು ದೀಪಾ ಭಸ್ತಿ ಅವರ ಅನುವಾದ ಒದಗಿಸಿಕೊಡುತ್ತದೆ’ ಎಂದರು.

ಸಂವಾದದಲ್ಲಿ ಶೈನಿ ಆ್ಯಂಟನಿ, ಬಾನು ಮುಷ್ತಾಕ್, ದೀಪಾ ಭಸ್ತಿ —ಪ್ರಜಾವಾಣಿ ಚಿತ್ರ

ಬೆಂಗಳೂರಿನ ಕೋಟೆ ಹೈಸ್ಕೂಲ್ ಆವರಣದಲ್ಲಿ ಭಾನುವಾರ ‘ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್’ ಆಯೋಜಿಸಿದ್ದ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ಗಾಯಕ ಅಭಿಷೇಕ್ ರಘುರಾಮ್ ಕಛೇರಿ ನೀಡಿದರು —ಚಿತ್ರ/ರಂಜು ಪಿ

ಸಂಜೆ ಕಾಲೇಜು ಪ್ರವೇಶಾತಿ ಪ್ರಾರಂಭ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತಿನಡಿ ಕಾರ್ಯನಿರ್ವಹಿಸುತ್ತಿರುವ ಬೆಂಗಳೂರು ಸ್ಕೂಲ್ ಆಫ್ ವಿಶುವಲ್ ಆರ್ಟ್ಸ್ (ಸಂಜೆ ಕಾಲೇಜು) ದೃಶ್ಯಕಲೆ ಯಲ್ಲಿ 2025-26ನೇ ಸಾಲಿಗೆ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ತರಗತಿಗಳಿಗೆ ಪ್ರವೇಶಾತಿ ಪ್ರಾರಂಭಿಸಿದೆ.

ನಾಲ್ಕು ವರ್ಷಗಳ ಬ್ಯಾಚುಲರ್ ಆಫ್ ವಿಶುವಲ್ ಆರ್ಟ್ಸ್ (ಬಿ.ವಿ.ಎ) ಪದವಿ ಪ್ರವೇಶಕ್ಕೆ ಪಿಯುಸಿ ಅಥವಾ 12ನೇ ತರಗತಿ ತೇರ್ಗಡೆಯಾಗಿರಬೇಕು. ಚಿತ್ರಕಲೆ, ಶಿಲ್ಪಕಲೆ, ಪ್ರಿಂಟ್ ಮೇಕಿಂಗ್, ಅನ್ವಯಕಲೆ, ಅನಿಮೇಶನ್ ಹಾಗೂ ಕಲಾ ಇತಿಹಾಸ ವಿಭಾಗಗಳಲ್ಲಿ ಪದವಿ ಕೋರ್ಸುಗಳ ಪ್ರವೇಶಾತಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಪ್ರತಿಗಳು www.thebsva.artನಲ್ಲಿ ಲಭ್ಯವಿವೆ. ವಿವರಕ್ಕೆ ಮೊಬೈಲ್ ಸಂಖ್ಯೆ 9606719559ಕ್ಕೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಸುದ್ದಿ 2 ನಿಮಿಷ

ಮಳೆ: ಉರುಳಿದ ಮರಗಳು

ಬೆಂಗಳೂರು: ನಗರದಲ್ಲಿ ಭಾನುವಾರ ಗಾಳಿ ಸಹಿತ ಮಳೆ ಸುರಿದಿದ್ದು, ಹಲವು ಕಡೆಗಳಲ್ಲಿ ಮರಗಳು ಉರುಳಿಬಿದ್ದಿವೆ.

ಯಲಹಂಕದ ಜಕ್ಕೂರು ಬಳಿಯ ಚಾಮುಂಡಿ ಬಡಾವಣೆಯಲ್ಲಿ ವಿದ್ಯುತ್ ತಂತಿಯ ಮೇಲೆ ಮರ ಮುರಿದುಬಿದ್ದಿದೆ. ಕೋಗಿಲುವಿನಲ್ಲಿ ಮರ ಬಿದ್ದಿದ್ದರಿಂದ ಕಾರಿಗೆ ಹಾನಿಯಾಗಿದೆ. ಜನರಿಗೆ ಯಾವುದೇ ತೊಂದರೆಗಳಾಗಿಲ್ಲ. ಚಾಮರಾಜಪೇಟೆ, ಕುಮಾರಸ್ವಾಮಿ ಲೇಔಟ್, ಮಡಿವಾಳ, ಜೆ.ಪಿ. ನಗರ ಮಿಲೇನಿಯಂ ಅಪಾರ್ಟ್‌ಮೆಂಟ್ ಬಳಿ ಮರಗಳು ಧರೆಗುರುಳಿವೆ. ಇದರಿಂದ ವಾಹನ ಸಂಚಾರಕ್ಕೆ ತೊಡಕುಂಟಾಯಿತು.

ರಸ್ತೆಯಲ್ಲಿ ನೀರು ನಿಂತಿದ್ದರಿಂದ ಎರಡೂ ಬದಿಯಲ್ಲಿ ವಾಹನ ಸಂಚಾರಕ್ಕೆ ತಡೆ ಉಂಟಾಯಿತು. ವೀರಸಂದ್ರ ಜಂಕ್ಷನ್‌ನಲ್ಲಿ ಮಳೆ ನೀರು ನಿಂತು ಹೊಸೂರು ರಸ್ತೆ ಕಡೆಗೆ ಮತ್ತು ನಗರದ ಕಡೆಗೆ ವಾಹನ ಸಂಚಾರ ನಿಧಾನವಾಯಿತು. ಇದರಿಂದ ವಾಹನದಟ್ಟಣೆ ಹೆಚ್ಚಾಯಿತು.

ಜಕ್ಕೂರು, ಚೌಡೇಶ್ವರಿ, ಹಂಪಿನಗರ, ವಿದ್ಯಾರಣ್ಯಪುರ, ವನ್ನಾರಪೇಟೆಯಲ್ಲಿ ಒಂದು ಸೆಂಟಿಮೀಟರ್‌ಗಿಂತ ಅಧಿಕ ಮಳೆ ದಾಖಲಾಗಿದೆ.

ಕೆಟ್ಟು ನಿಂತಿದ್ದ ವಿಮಾನಕ್ಕೆ ಟೆಂಪೊ ಡಿಕ್ಕಿ

ದೇವನಹಳ್ಳಿ (ಬೆಂ.ಗ್ರಾಮಾಂತರ): ಇಲ್ಲಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಟ್ಟು ನಿಂತಿದ್ದ ಇಂಡಿಗೊ ವಿಮಾನಕ್ಕೆ ಶನಿವಾರ ರಾತ್ರಿ ಪ್ರಯಾಣಿಕರ ವಾಹನ (ಟೆಂಪೊ ಟ್ರಾವೆಲರ್) ಡಿಕ್ಕಿ ಹೊಡೆದಿದೆ. ಇದರಿಂದ ಯಾವುದೇ ಅಪಾಯ ಸಂಭವಿಸಿಲ್ಲ.

ವಿಮಾನ ನಿಲ್ದಾಣದ ರನ್ ವೇಯಲ್ಲಿ ಕೆಲಸ ಮಾಡುವ ಸಿಬ್ಬಂದಿಯನ್ನು (ಗ್ರೌಂಡ್ ಸ್ಟಾಫ್) ಪಿಕ್ ಅಪ್ ಮತ್ತು ಡ್ರಾಪ್ ಮಾಡುವ ಖಾಸಗಿ ಕಂಪನಿಯೊಂದಕ್ಕೆ ಸೇರಿದ ವಾಹನವು ವಿಮಾನಕ್ಕೆ ಆಕಸ್ಮಿಕವಾಗಿ ಡಿಕ್ಕಿ ಹೊಡೆದಿದೆ.

ಇಂಡಿಗೊ ವಿಮಾನಯಾನ ಸಂಸ್ಥೆಗೆ ಸೇರಿದ ಈ ವಿಮಾನ (0320) ತಾಂತ್ರಿಕ ದೋಷದಿಂದಾಗಿ ಮೂರು ತಿಂಗಳಿಂದ ವಿಮಾನ ನಿಲ್ದಾಣದ ನಿಲುಗಡೆ ಸ್ಥಳದಲ್ಲಿ ನಿಂತಲ್ಲೇ ನಿಂತಿದೆ. ಇಂಡಿಗೊ ವಿಮಾನದ ಮುಂಭಾಗದ ಅಡಿಯಲ್ಲಿ ಹಾಯ್ದು ಹೋಗುವಾಗ ವಾಹನದ ಚಾವಣಿಯು ವಿಮಾನದ ಚೂಪಾದ ಮೂತಿಗೆ ತಾಕಿದೆ. ವಾಹನ ಚಾಲಕ ನಿದ್ರೆ ಮಂಪರಿನಲ್ಲಿದ್ದ ಕಾರಣ ಆತನಿಗೆ ಅರಿವಿಗೆ ಬಾರದೆ ಆಕಸ್ಮಿಕವಾಗಿ ಈ ಘಟನೆ ಸಂಭವಿಸಿದೆ. ಈ ವೇಳೆ ವಿಮಾನ ಮತ್ತು ವಾಹನದಲ್ಲಿ ಪ್ರಯಾಣಿಕರು ಇರಲಿಲ್ಲ ಎಂದು ತಿಳಿದುಬಂದಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂ(ವಿ)/ಪ್ರ(ಕಾ)ವ/ಅಇಂವಿ(ಕ)/ಸಇಂ–1/25–26/376–78 ದಿನಾಂಕ:17.04.2025

ಟೆಂಡರ್ ಅಧಿಸೂಚನೆ
(ಕೆಪಿಪಿಪಿ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಇ–ಬಿಡ್ ವಿಚಾರಣೆ ಸಂಖ್ಯೆ: KPTCL/CEE/TKR/TZ/AE-1/001 Dt:15.04.2025 ಮೂಲಕ ತುಮಕೂರು ಪ್ರಸರಣ (ಕಾರ್ಯಾಚರಣೆ) ವಲಯ ವ್ಯಾಪ್ತಿಯಲ್ಲಿ ಬರುವ ವಿವಿಧ ವಿದ್ಯುತ್ ಉಪಕೇಂದ್ರಗಳಿಗೆ ಅಗತ್ಯವಿರುವ 210 ಲೀಟರ್ ಸಾಮರ್ಥ್ಯದ ಹಿಂತಿರುಗಿಸಲಾಗದ ಹೊಸ ಬ್ಯಾರೆಲ್‌ಗಳಲ್ಲಿ ಉತ್ತಮ ದರ್ಜೆಯ ಟ್ರಾನ್ಸ್‌ಫಾರ್ಮರ್ ತೈಲವನ್ನು ಖರೀದಿಸಲು ಕೆಪಿಪಿ ಪೋರ್ಟಲ್ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ. ಕೆಪಿಪಿಪಿ ಪ್ರಕ್ರಿಯೆಯಲ್ಲಿ ವಿಷಯ ವಿಚಾರಣೆಯ ಕುರಿತು ವಿವರವಾದ ಅಧಿಸೂಚನೆ ನೀಡಲಾಗಿದೆ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಗೆ ಹೈಪರ್‌ಲಿಂಕ್ ‘E procurement KPTCL’ ನಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 19.04.2025ರ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಇಂಜಿನಿಯರ್(ವಿ),
ಪ್ರಸರಣ(ಕಾರ್ಯಾಚರಣೆ)ವಲಯ, ಕವಿಪ್ರನಿನಿ, ಪ್ರಸರಣ ಭವನ, 1ನೇ ಮಹಡಿ,
ಕೋತಿತೋಪು ರಸ್ತೆ, 66/11ಕೆವಿ ತುಮಕೂರು ಉಪಕೇಂದ್ರದ ಆವರಣ, ತುಮಕೂರು–03

ನಗರದಲ್ಲಿ ಇಂದು

ವಿಶ್ವ ಭೂಮಿ ದಿನಾಚರಣೆ: ಎಚ್.ಎಸ್.ಎಂ. ಪ್ರಕಾಶ್, ಬಿ.ಆರ್. ವೆಂಕಟೇಶ್, ನಾಗೇಶ ಹೆಗಡೆ, ಟಿ.ಜೆ. ರೇಣುಕಾ ಪ್ರಸಾದ್, ಆಯೋಜನೆ: ಪರಿಸರಕ್ಕಾಗಿ ನಾವು ಮತ್ತು ಜ್ಞಾನಭಾರತಿ ವಾಯುವಿಹಾರಿಗಳ ಸಂಘ, ನಮ್ಮವರ ತಂಡ, ಸ್ವಯಂ ಜಾಗೃತಿ, ಮಿಡಿತ ಫೌಂಡೇಶನ್, ಗ್ರೀನ್ ಆರ್ಮಿ, ಸ್ಥಳ: ಜಿಯೋ ಪಾರ್ಕ್, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 7ರಿಂದ

ಕೋಟೆ ಮಾರಮ್ಮ, ಪಟ್ಟಂದರಮ್ಮ, ಚಂದ್ರಮೌಳೇಶ್ವರ ಸ್ವಾಮಿಯ ಉತ್ಸವ: ಬಸವಣ್ಣ ದೇವರಿಗೆ, ಚನ್ನರಾಯಸ್ವಾಮಿಗೆ ಬೆಲ್ಲದ ಆರತಿ, ಸ್ಥಳ: ಬಸವಣ್ಣ ದೇವಸ್ಥಾನದ ಆವರಣ, ಚಿಕ್ಕಬಾಣಾವರ, ಬೆಳಿಗ್ಗೆ 10ರಿಂದ

ಡಾ.ಎಂ.ಎಸ್. ರಾಮಯ್ಯ ಸ್ಮಾರಕ ಉಪನ್ಯಾಸ: ಅತಿಥಿ: ವಿ. ನಾರಾಯಣನ್, ಅಧ್ಯಕ್ಷತೆ: ಎಂ.ಆರ್. ಸೀತಾರಾಂ, ಉಪಸ್ಥಿತಿ: ಎಂ.ಆರ್. ಜಯರಾಂ, ಎಂ.ಆರ್. ಜಾನಕಿರಾಂ, ಎಂ.ಆರ್. ಆನಂದರಾಂ, ಎಂ.ಆರ್. ಸಂಪಂಗಿರಾಮಯ್ಯ, ಎಂ.ಆರ್. ಕೋದಂಡರಾಮ್, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 11ರಿಂದ

ಸರ್ಕಾರಿ ನೌಕರರ ದಿನಾಚರಣೆ–2025, ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ಉದ್ಘಾಟನೆ: ಎಂ. ವೆಂಕಟಸ್ವಾಮಿ, ಅತಿಥಿಗಳು: ಬಿ. ರಮೇಶ್, ಚಕ್ರವರ್ತಿ ಸೂಲಿಬೆಲೆ, ಶ್ರೀನಿವಾಸ ಗುರೂಜಿ, ಜಿ. ಗೋವಿಂದಯ್ಯ, ಸಿ. ನರಸಿಂಹಮೂರ್ತಿ, ಅರ್ಜುನ್ ಗೋಪಾಲಯ್ಯ, ಅಧ್ಯಕ್ಷತೆ: ವೆಂಕಟೇಶ್, ಆಯೋಜನೆ: ರಾಷ್ಟ್ರೀಯ ಅಂಬೇಡ್ಕರ್ ಸೇನೆ, ಸ್ಥಳ: ವಿದ್ವತ್ ಸಭಾಂಗಣ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಯನಗರ, ಬೆಳಿಗ್ಗೆ 11ರಿಂದ

ಗುರುವಂದನಾ ಕಾರ್ಯಕ್ರಮ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕೆ.ಆರ್. ಸೋಮಶೇಖರ್, ಸುಚೇಂದ್ರ ಪ್ರಸಾದ್, ಟಿ.ಎ. ಬಾಲಕೃಷ್ಣ ಅಡಿಗ ಆಯೋಜನೆ ಮತ್ತು ಸ್ಥಳ: ವಿಜಯ ಕಾಲೇಜು, ಆರ್.ವಿ. ರಸ್ತೆ, ಬಸವನಗುಡಿ, ಮಧ್ಯಾಹ್ನ 3

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಶಶಿಕಲಾ ದಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಸ್ಫೂರ್ತಿ ರಾವ್, ಅದಿತಿ ಕೃಷ್ಣಪ್ರಕಾಶ್, ಅನಿರುದ್ಧ ಭಟ್, ಸುಕನ್ಯಾ ರಾಮ್‌ಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

‘ರಾಮಾಯಣದ ಪ್ರಸಂಗಗಳು’ ಧಾರ್ಮಿಕ ಪ್ರವಚನ: ಚಂದ್ರಶೇಖರ್ ಆಚಾರ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಆರನೇ ಅಡ್ಡರಸ್ತೆ, ಈಜುಕೋಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

‘ಅಂಬೇಡ್ಕರ್ ಒಂದು ಸಮುದಾಯಕ್ಕೆ ಸೀಮಿತರಲ್ಲ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಅಂಬೇಡ್ಕರ್ ಅವರನ್ನು ಒಂದು ಜಾತಿ, ಧರ್ಮಕ್ಕೆ ಸೀಮಿತ ಮಾಡದೆ ಎಲ್ಲರೂ ಗೌರವಿಸಿ ಆರಾಧಿಸಬೇಕು ಎಂದು ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ ತಿಳಿಸಿದರು.

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಡಾ.ಬಿ. ಆರ್.ಅಂಬೇಡ್ಕರ್ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ತುಳಿತಕ್ಕೆ ಒಳಗಾದವರು, ನೊಂದವರು, ಶ್ರಮಿಕರಿಗೆ ನ್ಯಾಯ, ಶಿಕ್ಷಣ, ಅಧಿಕಾರ, ಉದ್ಯೋಗವನ್ನು ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ದೊರಕಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ಜಿ.ಕೃಷ್ಣಮೂರ್ತಿ, ಲಗ್ಗೆರೆ ನಾರಾಯಣಸ್ವಾಮಿ, ಬಿ.ಆರ್.ನಂಜುಂಡಪ್ಪ, ಆನಂದ್, ಲಿಂಗರಾಜು, ರಾಂಪುರ ನಾಗೇಶ್, ಪಿ.ಗಂಗಾಧರ್, ಪಾರ್ಥಗೌಡ ಎಚ್., ತುಕಾರಾಂ, ಚಿಕ್ಕೇಗೌಡನಪಾಳ್ಯ ಲಕ್ಕಣ್ಣ , ಕಾಚೋಹಳ್ಳಿ ಲೋಕೇಶ್, ವಾಜರಹಳ್ಳಿ ಶಿವಣ್ಣ ಮಾತನಾಡಿದರು.

ಬಾಣಂತಿ ಸಾವು: ವೈದ್ಯರ ನಿರ್ಲಕ್ಷ್ಯ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ವಾಣಿವಿಲಾಸ ಆಸ್ಪತ್ರೆಯಲ್ಲಿ 25 ವರ್ಷದ ಬಾಣಂತಿಯೊಬ್ಬರು ಮೃತಪಟ್ಟಿದ್ದು, ವೈದ್ಯರ ನಿರ್ಲಕ್ಷ್ಯವೇ ಇದಕ್ಕೆ ಕಾರಣವೆಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಸ್ವಾತಿ ಮೃತ ಮಹಿಳೆ. ಅವರನ್ನು ಕಳೆದ ಸೋಮವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಸಿಸೇರಿಯನ್ ಹೆರಿಗೆ ಮಾಡಿಸಿದ್ದ ವೈದ್ಯರು, ಗಂಡು ಮಗುವನ್ನು ಹೊರ ತೆಗೆದಿದ್ದರು. ಬಾಣಂತಿ ಶನಿವಾರ ರಾತ್ರಿ ಮೃತಪಟ್ಟಿದ್ದಾರೆ. ಸಿಸೇರಿಯನ್ ವೇಳೆ ವೈದ್ಯರು ಮಹಿಳೆಯ ದೊಡ್ಡ ಕರುಳಿಗೆ ಹಾನಿ ಮಾಡಿದ್ದಾರೆ ಎಂದು ಆರೋಪಿಸಿರುವ ಕುಟುಂಬಸ್ಥರು, ಆಸ್ಪತ್ರೆ ಮುಂದೆ ಭಾನುವಾರ ಆಕ್ರೋಶ ವ್ಯಕ್ತಪಡಿಸಿದರು.

‘ಆಸ್ಪತ್ರೆಗೆ ದಾಖಲಿಸಿದಾಗ ಸಹಜ ಹೆರಿಗೆ ಮಾಡಿಸುವುದಾಗಿ ವೈದ್ಯರು ಭರವಸೆ ನೀಡಿದ್ದರು. ಮಗು–ತಾಯಿಯ ಆರೋಗ್ಯದ ದೃಷ್ಟಿಯಿಂದ ಸಿಸೇರಿಯನ್‌ಗೆ ನಾವು ಒಪ್ಪಿದೆವು. ಕಿರಿಯ ವೈದ್ಯರೇ ಚಿಕಿತ್ಸೆ ನೀಡುತ್ತಿದ್ದರು. ಅವಳಿ ಮಕ್ಕಳು ಇರುವಂತೆ ಹೊಟ್ಟೆ ಕಾಣಿಸುತ್ತಿತ್ತು. ಎರಡು ಮೂರು ಬಾರಿ ಶಸ್ತ್ರಚಿಕಿತ್ಸೆ ನಡೆಸಿದ್ದರು. ವೈದ್ಯರ ನಿರ್ಲಕ್ಷ್ಯದಿಂದಲೇ ಈ ಮರಣ ಸಂಭವಿಸಿದೆ’ ಎಂದು ಮೃತ ಮಹಿಳೆಯ ತಾಯಿ ಹಾಗೂ ಸಹೋದರಿ ಆರೋಪಿಸಿದರು.

ಈ ಬಗ್ಗೆ ಸ್ಪಷ್ಟನೆ ನೀಡಿದ ಆಸ್ಪತ್ರೆಯ ಪ್ರಸೂತಿ ತಜ್ಞೆ ಡಾ. ಅನಿತಾ, ‘ತಾಯಿಯ ಹೊಟ್ಟೆಯಲ್ಲಿಯೇ ಮಗು ಮಲವಿಸರ್ಜನೆ ಮಾಡಿಕೊಂಡಿತ್ತು. ತಕ್ಷಣ ಅವರಿಗೆ ಶಸ್ತ್ರಚಿಕಿತ್ಸೆ ಮಾಡಿ, ಮಗುವನ್ನು ಹೊರ ತೆಗೆಯಲಾಗಿತ್ತು. ‘ವಾರ್ಡ್‌ಗೆ ಸ್ಥಳಾಂತರಿಸಿದ ಎರಡು ದಿನ ಮಹಿಳೆ ಚೆನ್ನಾಗಿಯೇ ಇದ್ದರು. ಅವರಿಗೆ ವಿವಿಧ ಸಮಸ್ಯೆಗಳಿದ್ದವು’ ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

WANTED FEMALE Office Assistant Any Degree Knowing Tally Fluent In English, Kannada, Hindi, Location: Rajajinagar Contact: 9108458798

Graphic Designers

WANTED MALE Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 9845579620

Teachers/ Professors

HIGH SCHOOL TEACHERS. Social Science and English, Physical Education. Cambridge English School, Mathikere, Bangalore-54. M: 9379191544

DH Classifieds More value, more impact | ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
9731810277
9886213331
9845114560

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Janatha Education Society®
VIVEKANANDA EDUCATIONAL INSTITUTIONS
Dr. Rajkumar Road, Next to Orion Mall, Rajajinagar, Bengaluru - 560055.
Phone: 080 - 23371952 | 6366733434
Applications are invited for the following posts

VIVEKANANDA INSTITUTE OF TECHNOLOGY
Professor/Associate Professor/Asst. Professor: CS/IS/AI&ML/E&CE Dept. – Qualification and Pay Scale as per AICTE norms
Placement Officer: B.E. & MBA with 10 yrs Experience
Physical Education Director : M.PEd. 5-yrs Experience
Asst. Placement Officer: MBA with 5yrs Experience
Administrator: MBA with 10 yrs Experience
PA to Principal: Any Degree with 5-10yrs Experience with Computer Knowledge
Programmer: B.E. in CSE/ISE/AI & ML
Lab Instructor: Diploma/B.E. in CSE/ISE/AI & ML
Systems Administrator/Analyst: Dip/B.Sc./BCA in Comp. Sci. Specialized in Networking & CCTV integration with min 2-3 years' exp.
Transport Supervisor: Any Degree with min 2-3 years' exp.

VIVEKANANDA COLLEGE OF PHARMACY
Professor/Assistant Professor: Pharmaceutics/Pharmacology/Pharmaceutical Chemistry Dept. – Qualification & Experience as per PCI norms
Lab Technician: D. Pharm with 3yrs Experience

VIVEKANANDA INSTITUTE OF MANAGEMENT
Faculty: BCA Dept. – MCA with 3yrs Experience
Placement Officer: MBA with 3-5yrs Experience
Communication Skill Trainer: MA with 3yrs Experience

VIVEKANANDA PU & DEGREE COLLEGE FOR WOMEN
Lecturer: Statistics, Chemistry, Commerce – M.Sc., M.Com, B.Ed. with 3 yrs. Exp
Part Time Lecturer: History – M.A, B.Ed. with 3 yrs. Experience
Account Assistant: B.Com/M.Com with 5 yrs. Experience
Data Entry Operator: PUC, Kannada & English Typing with Computer Knowledge

VIVEKANANDA PU COLLEGE, VKIT Campus
Lecturer: Chemistry Dept. – M.Sc., B.Ed. with 3 yrs. Experience
Part Time Lecturer: Hindi – M.A, M.Ed. with 3 yrs. Experience

VIVEKANANDA PUBLIC SCHOOL, VKIT & City Campus
Nursery Teacher: NTT/MTT (Fresher/3yrs Experience)
Primary Teacher: English, Hindi Any Degree with D.Ed. (2yrs Experience)
High School Teacher: B.Sc./M.Sc. with B.Ed. (PCM) (2yrs Experience)
Physical Teacher: B.PEd. / M.PEd. (2yrs Experience)

Eligible candidates are informed to submit their BIODATA along with supporting documents with 2 passport size photos through registered post or in person to the Hon. Secretary, JES within 10 days from the date of this notification or email to jobs@jes-edu.in

Sd/- Sri H. C. Balakrishna, Hon. President
Sd/- Sri H. G. Balagopal, Hon. Secretary

ಆರನೇ ವರ್ಷದ ಚಿರಸ್ಮರಣೆ

ಡಾ॥ ಎಸ್. ಆರ್. ನಾಗರಾಜ ರೆಡ್ಡಿ
ಛೇರ್ಮನ್: ಜೆ.ಆರ್. ಗ್ರೂಪ್ ಆಫ್ ಕಂಪನೀಸ್

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷವಾಯಿತು,
ನಿಮ್ಮ ಇರುವಿಕೆಯ ನೆನಪಿನ ನಿಶಬ್ದದ ಕಣ್ಣೀರಿನ ಹನಿಯಲ್ಲಿ, ನಿಮ್ಮ ಸ್ವರ್ಗೀಯ
ನೆನಪು ಸದಾ ವಸಂತ, ನಿಮ್ಮ ಸ್ಮರಣೆಯೇ ನಮ್ಮ ಜೀವನದ ದಾರಿದೀಪ

ಸದಾ ಸ್ಮರಿಸುವ
ಧರ್ಮಪತ್ನಿ ಶ್ರೀಮತಿ ಕೆ. ಜೆ. ಯಶೋದ ಮತ್ತು ಮಕ್ಕಳು, ಶ್ರೀಮತಿ. ರತ್ನಮ್ಮ. ಕೆ,
ಡಾ॥ ಕೆ. ಜೆ. ಪುರುಷೋತ್ತಮ್, ಡಾ॥ ಕೆ. ಜೆ. ಚಂದ್ರಶೇಖರ್,
ಕುಟುಂಬದವರು, ಬಂಧುಗಳು ಮತ್ತು ಮಿತ್ರರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದು ಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: **9606038256**

‘ಕಸದ ರಾಶಿ ತೆರವುಗೊಳಿಸಿ’

ಕನಕಪುರ ರಸ್ತೆಯ ರಘುವನಹಳ್ಳಿಯ ಸಿದ್ಧಗಂಗಾ ಶಾಲೆಯ ಮುಂಭಾಗದ ರಸ್ತೆಯಲ್ಲಿ ಕಸ ಹಾಕಲಾಗುತ್ತಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ವಿದ್ಯಾರ್ಥಿಗಳು ಮೂಗು ಮುಚ್ಚಿಕೊಂಡು ಶಾಲೆಗೆ ತೆರಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ರಸ್ತೆಯಲ್ಲಿ ಮೂರು–ನಾಲ್ಕು ವರ್ಷಗಳಿಂದ ಕಸ ತಂದು ಸುರಿಯಲಾಗುತ್ತಿದೆ. ಇಲ್ಲಿ ಕಸ ಹಾಕದಂತೆ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಅರುಣ್ ಗೌಡ, ರಘುವನಹಳ್ಳಿ

‘ಕಬ್ಬನ್ ಉದ್ಯಾನ: ಕೆಸರು ಗದ್ದೆಯಾದ ರಸ್ತೆ’

ಕಬ್ಬನ್ ಉದ್ಯಾನದ ಆವರಣದಲ್ಲಿರುವ ಬೆಂಗಳೂರು ಪ್ರೆಸ್‌ಕ್ಲಬ್ ಮುಂಭಾಗದ ರಸ್ತೆ ಮಳೆ ಬಂದರೆ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಮರ–ಗಿಡಗಳಿಂದ ಉದುರಿದ ಎಲೆ ಕಸ–ಕಡ್ಡಿಯನ್ನು ಸ್ವಚ್ಛಗೊಳಿಸದ ಕಾರಣ ಈ ಸಮಸ್ಯೆ ಉದ್ಭವಿಸಿದೆ. ಇದರಿಂದ ವಾಹನ ಸಂಚಾರಕ್ಕೆ ಸಮಸ್ಯೆ ಆಗುತ್ತಿದೆ. ಸಾರ್ವಜನಿಕರು ಈ ರಸ್ತೆಯಲ್ಲಿ ಪ್ರಯಾಸಪಟ್ಟುಕೊಂಡು ಹೋಗಬೇಕಾದ ದುಃಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ರಸ್ತೆಯನ್ನು ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ವಾಯುವಿಹಾರಿ

ಮುತ್ತಪ್ಪ ರೈ ಪುತ್ರನ ಮೇಲೆ ಗುಂಡಿನ ದಾಳಿ ಪ್ರಕರಣ • ನಾಲ್ವರು ಆರೋಪಿಗಳಿಗೆ ನೋಟಿಸ್ ನೀಡಲು ಸಿದ್ಧತೆ

ರಿಕ್ಕಿ ಹೇಳಿಕೆ ದಾಖಲು: ಆಪ್ತರ ವಿಚಾರಣೆ

ಪ್ರಜಾವಾಣಿ ವಾರ್ತೆ

ರಿಕ್ಕಿ ರೈ

ರಾಮನಗರ: ತಾಲ್ಲೂಕಿನ ಬಿಡದಿ ಬಳಿಯ ಕರಿಯಪ್ಪನ ದೊಡ್ಡಿಯಲ್ಲಿ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ನಡೆದ ಗುಂಡಿನ ದಾಳಿಯ ತನಿಖೆ ತೀವ್ರಗೊಳಿಸಿರುವ ಪೊಲೀಸರು ಭಾನುವಾರ ರಿಕ್ಕಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ಮತ್ತೊಂದೆಡೆ ಘಟನಾ ಸ್ಥಳ ಮತ್ತು ರಿಕ್ಕಿ ಮನೆಗೆ ತನಿಖಾಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ.

ಅಡುಗೆ ಸಿಬ್ಬಂದಿ, ಭದ್ರತಾ ಸಿಬ್ಬಂದಿ, ಅಂಗರಕ್ಷಕರು, ಕಾರು ಚಾಲಕ ಸೇರಿದಂತೆ ರಿಕ್ಕಿ ಅವರ ಮನೆಯಲ್ಲಿ ಕೆಲಸ ಮಾಡುವವರು ಹಾಗೂ ಕೃತ್ಯ ನಡೆದಾಗ ರಿಕ್ಕಿ ಅವರನ್ನು ಬಿಡದಿ ಆಸ್ಪತ್ರೆಗೆ ಕರೆತಂದಾಗ ಇದ್ದವರನ್ನು ತೀವ್ರ ವಿಚಾರಣೆಗೆ ಒಳಪಡಿಸಿದೆ.

ಆರೋಪ ಪುನರುಚ್ಚಾರ: ಗುಂಡಿನ ದಾಳಿಯಲ್ಲಿ ಮೂಗು ಮತ್ತು ತೋಳಿಗೆ ಗಾಯವಾಗಿದ್ದರಿಂದ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಿಕ್ಕಿ ಶನಿವಾರ ಮೂಗಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಚೇತರಿಸಿಕೊಂಡಿದ್ದಾರೆ. ಇದರ ಬೆನ್ನಲ್ಲೇ, ಪೊಲೀಸರ ಒಂದು ತಂಡ ಆಸ್ಪತ್ರೆಗೆ ತೆರಳಿ ರಿಕ್ಕಿ ಹೇಳಿಕೆ ದಾಖಲಿಸಿಕೊಂಡಿದೆ.

ಈ ವೇಳೆ, ಪ್ರಕರಣದ ದೂರುದಾರನಾಗಿರುವ ತನ್ನ ಕಾರು ಚಾಲಕ ಬಸವರಾಜು ಮಾಡಿರುವ ಆರೋಪವನ್ನು ರಿಕ್ಕಿ ಪುನರುಚ್ಚರಿಸಿದ್ದಾರೆ. ಕೃತ್ಯದ ಹಿಂದೆ ರಾಕೇಶ್ ಮಲ್ಲಿ, ಮಲತಾಯಿ ಅನುರಾಧ, ರಿಯಲ್ ಎಸ್ಟೇಟ್ ಮಾಲೀಕರಾದ ನಿತೇಶ್ ಶೆಟ್ಟಿ, ವೈದ್ಯನಾಥನ್ ಇರುವ ಕುರಿತು ಅನುಮಾನ ವ್ಯಕ್ತಪಡಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನೋಟಿಸ್ ನೀಡಲು ತಯಾರಿ: ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರರು ಅನುಮಾನ ವ್ಯಕ್ತಪಡಿಸಿರುವ ನಾಲ್ವರು ಆರೋಪಿಗಳಿಗೂ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲು ಪೊಲೀಸರು ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ರಿಕ್ಕಿ ಅವರ ಮಲತಾಯಿ ಅನುರಾಧ ಅವರು ಘಟನೆಗೆ ಐದು ದಿನ ಮೊದಲೇ ದೇಶ ತೊರೆದಿದ್ದಾರೆ. ಅವರು ಯಾವ ದೇಶಕ್ಕೆ ತೆರಳಿದ್ದಾರೆ ಎಂಬ ಮಾಹಿತಿ ಇಲ್ಲ. ರಿಕ್ಕಿ ಅವರ ಆಸ್ತಿ, ಕಂಪನಿಗಳು, ಪಾಲುದಾರಿಕೆ, ಹೂಡಿಕೆ, ರಿಯಲ್ ಎಸ್ಟೇಟ್ ವ್ಯವಹಾರ, ಹಣಕಾಸಿನ ವ್ಯವಹಾರ, ಹಲವರ ಜೊತೆಗಿನ ವ್ಯಾಜ್ಯ ಹಾಗೂ ಅವರ ವಿರುದ್ಧ ದಾಖಲಾಗಿರುವ ಪ್ರಕರಣಗಳ ಕುರಿತು ಸಹ ಪೊಲೀಸರ ತಂಡ ಮಾಹಿತಿ ಕಲೆಹಾಕುತ್ತಿದೆ.

ಜೊತೆಗೆ ರಿಕ್ಕಿ, ಚಾಲಕ, ಅಂಗರಕ್ಷಕರು, ಮನೆಯಲ್ಲಿ ಕೆಲಸ ಮಾಡುವವರೆಲ್ಲರ ಮೊಬೈಲ್ ಕರೆ ವಿವರ ಹಾಗೂ ಮನೆ ಸುತ್ತಮುತ್ತಲಿನ ರಸ್ತೆಗಳಲ್ಲಿನ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸುತ್ತಿದೆ.

ಮನೆ ಬಳಿ ಗಾಳಿಯಲ್ಲಿ ಗುಂಡು: ಕೃತ್ಯ ನಡೆದ ದಿನ ರಾತ್ರಿ ರಿಕ್ಕಿ ಮನೆಯಲ್ಲಿದ್ದಾಗ ನಾಯಿಗಳು ಬೊಗಳಿದ ಶಬ್ದ ಕೇಳಿದೆ. ಆಗ ಒಬ್ಬ ಅಂಗರಕ್ಷಕ ಹೊರಗಡೆ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಇದಾದ ಕೆಲ ಹೊತ್ತಿನ ಬಳಿಕ ರಿಕ್ಕಿ ಕಾರಿನಿಂದ ಹೊರಟು ಹೋದವರು ಮತ್ತೆ ಮನೆಗೆ ಬಂದು ಕೆಲ ಹೊತ್ತು ಇದ್ದರು. ಮತ್ತೆ ಹೊರಟಾಗ ಕಾರಿನ ಮೇಲೆ ಗುಂಡಿನ ದಾಳಿ ಘಟನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಘಟನಾ ಸ್ಥಳದ ಸುತ್ತಮುತ್ತ ಶ್ವಾನದಳದ ಸಿಬ್ಬಂದಿ ಪರಿಶೀಲನೆ ನಡೆಸಿದರು

‘ರಾಕೇಶ್ ಮಲ್ಲಿ ಭಾಗಿ ವಿಚಾರ ಗೊತ್ತಿಲ್ಲ’

ರಿಕ್ಕಿ ರೈ ಕಾರಿನ ಮೇಲೆ ಗುಂಡು ಹಾರಿಸಿದ ಘಟನೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ರಾಕೇಶ್ ಮಲ್ಲಿ ಭಾಗಿಯಾಗಿರುವ ವಿಚಾರ ಗೊತ್ತಿಲ್ಲ. ತನಿಖೆ ಬಳಿಕ ಯಾರೆಂದು ಗೊತ್ತಾಗಲಿದೆ. ಇಂತಹ ವಿಷಯದಲ್ಲಿ ಊಹಾಪೋಹ ಮಾಡಲಾಗದು ಎಂದು ಘಟನೆ ಕುರಿತು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಪ್ರತಿಕ್ರಿಯಿಸಿದರು.

ಗುಂಡಿನ ದಾಳಿ: ಪೊಲೀಸರನ್ನು ಕಾಡುತ್ತಿವೆ ಹಲವು ಅನುಮಾನಗಳು

ಗುಂಡಿನ ದಾಳಿ ಘಟನೆ ಕುರಿತಂತೆ ರಿಕ್ಕಿ ಕಾರು ಚಾಲಕ ಹಾಗೂ ಅಂಗರಕ್ಷಕನ ಹೇಳಿಕೆ ಬಗ್ಗೆ ಪೊಲೀಸರಿಗೆ ಹಲವು ಅನುಮಾನಗಳು ಕಾಡುತ್ತಿವೆ.

ಘಟನಾ ಸ್ಥಳದ ಸ್ಥಿತಿಗೂ ಮತ್ತು ಹೇಳಿಕೆಗಳಿಗೂ ಪರಸ್ಪರ ತಾಳೆಯಾಗುತ್ತಿಲ್ಲ. ಹಾಗಾಗಿ, ಪ್ರಕರಣ ಪೊಲೀಸರಿಗೆ ಸವಾಲಾಗಿದೆ.

ರಿಕ್ಕಿ ಸುತ್ತಮುತ್ತ ಸದಾ ಇಬ್ಬರು ಅಂಗರಕ್ಷಕರಿರುತ್ತಾರೆ. ಬೆಂಗಳೂರಿಗೆ ಹೋಗುವಾಗ ಒಬ್ಬ ಅಂಗರಕ್ಷಕ ಮಾತ್ರ ಇದ್ದ. ಮತ್ತೊಬ್ಬ ಅಂಗರಕ್ಷಕ ಎಲ್ಲಿದ್ದ? ಚಾಲಕನಿದ್ದರೂ ಸಾಮಾನ್ಯವಾಗಿ ರಿಕ್ಕಿ ಅವರೇ ಕಾರು ಚಾಲನೆ ಮಾಡುತ್ತಾರೆ. ಘಟನೆ ದಿನ ಚಾಲಕ ಬಸವರಾಜು ಚಾಲನೆ ಮಾಡುತ್ತಿದ್ದ. ರಿಕ್ಕಿ ಅಥವಾ ಅಂಗರಕ್ಷಕ ರಾಜ್‌ಪಾಲ್ ಮುಂದೆ ಕೂತಿರಲಿಲ್ಲ. ಬದಲಿಗೆ ಇಬ್ಬರೂ ಹಿಂದೆ ಕುಳಿತಿದ್ದು ಯಾಕೆ ಎಂಬ ಪ್ರಶ್ನೆಗಳು ಪೊಲೀಸರನ್ನು ಕಾಡುತ್ತಿವೆ.

ಕಾರಿನ ಮೇಲೆ ಗುಂಡಿನ ದಾಳಿ ನಡೆದಾಗ ಅಂಗರಕ್ಷಕ ಪ್ರತಿದಾಳಿ ನಡೆಸಿಲ್ಲ ಏಕೆ? ಘಟನಾ ಸ್ಥಳದ ರಸ್ತೆ ಮತ್ತು ಮನೆ ಪ್ರವೇಶ ದ್ವಾರದ ಬಳಿ ಯಾವುದೇ ಬೀದಿದೀಪದ ವ್ಯವಸ್ಥೆ ಇಲ್ಲ. ಆದರೂ ಕಾರಿನ ಮೇಲೆ ಗುಂಡಿನ ದಾಳಿ ನಡೆದಿದೆ. ಹಾಗಿದ್ದರೆ, ದಾಳಿ ಮಾಡಿದವರು ಒಬ್ಬರೇ ಅಥವಾ ಅದಕ್ಕೂ ಹೆಚ್ಚು ಮಂದಿ ಇದ್ದರೆ? ಕಣ್ಣಳತೆಯ ದೂರದಲ್ಲಿ ಗುಂಡಿನ ದಾಳಿ ನಡೆದರೂ, ಆಗಷ್ಟೇ ಕಾರು ಬಿಡಲು ಪ್ರವೇಶದ್ವಾರ ತೆರೆದ ಭದ್ರತಾ ಸಿಬ್ಬಂದಿಗೆ ದಾಳಿ ವಿಷಯ ಗೊತ್ತಾಗಲಿಲ್ಲವೇ? ಹೀಗೆ ಹಲವು ಅನುಮಾನಗಳು ಪೊಲೀಸರನ್ನು ಕಾಡುತ್ತಿವೆ. ಹಾಗಾಗಿ, ಘಟನೆ ದಿನ ಇದ್ದವರನ್ನು ಮತ್ತೆ ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

> ಪ್ರಕರಣ ಕುರಿತು ಹಲವು ಆಯಾಮಗಳಿಂದ ತನಿಖೆ ನಡೆಯುತ್ತಿದೆ. ರಿಕ್ಕಿ ಆಪ್ತರ ವಿಚಾರಣೆ ಜೊತೆಗೆ ತಾಂತ್ರಿಕ ಮಾಹಿತಿ ಪರಿಶೀಲಿಸಲಾಗುತ್ತಿದೆ. ಇದುವರೆಗೆ ಯಾರಿಗೂ ನೋಟಿಸ್ ಕೊಟ್ಟಿಲ್ಲ
>
> **ಆರ್. ಶ್ರೀನಿವಾಸ ಗೌಡ**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಲಿಂಗತ್ವ ಅಲ್ಪಸಂಖ್ಯಾತೆಯ ಕೊಲೆ

ಪ್ರಜಾವಾಣಿ ವಾರ್ತೆ

ತನುಶ್ರೀ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರೊಬ್ಬರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ಕೆ.ಆರ್.ಪುರ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕೆ.ಆರ್.ಪುರದ ಸೀಗೆಹಳ್ಳಿ ನಿವಾಸಿ ತನುಶ್ರೀ ಅಲಿಯಾಸ್ ನವೀನ್ (45) ಕೊಲೆಯಾದವರು. ಮೂರು ದಿನಗಳ ಹಿಂದೆ ಕೃತ್ಯ ನಡೆದಿದೆ. ಸ್ನೇಹಿತ ಜಗದೀಶ್ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದ್ದು, ಪ್ರಕರಣ ದಾಖಲಿಸಿಕೊಂಡು, ಆರೋಪಿಗೆ ಶೋಧ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

ಕೆ.ಆರ್.ಪುರದ ಸೀಗೆಹಳ್ಳಿಯ ಮನೆಯಲ್ಲಿ ಸ್ನೇಹಿತ ಜಗದೀಶ್ ಮತ್ತು ತನುಶ್ರೀ ವಾಸವಾಗಿದ್ದರು. ಮೂರು ದಿನಗಳ ಹಿಂದೆ ಇಬ್ಬರ ನಡುವೆ ಜಗಳ ನಡೆದಿದೆ. ಈ ವೇಳೆ ಜಗದೀಶ್ ಕೊಲೆ ಮಾಡಿ ಮನೆಗೆ ಬೀಗ ಹಾಕಿಕೊಂಡು ಪರಾರಿಯಾಗಿರಬಹುದು ಎನ್ನಲಾಗಿದೆ.

ಲಿಂಗತ್ವ ಅಲ್ಪಸಂಖ್ಯಾತರ ಸಂಘಟನೆಯವರು ತನುಶ್ರೀ ಅವರ ಮೊಬೈಲ್ ಸಂಖ್ಯೆಗೆ ಕರೆ ಮಾಡಿದ್ದಾರೆ. ಆದರೆ, ಅವರು ಕರೆ ಸ್ವೀಕರಿಸಿರಲಿಲ್ಲ. ಭಾನುವಾರ ಬೆಳಿಗ್ಗೆ ಮನೆಯ ಬಳಿಗೆ ಹುಡುಕಿಕೊಂಡು ಹೋಗಿದ್ದರು. ತನುಶ್ರೀ ಬಾಗಿಲು ತೆಗೆದಿಲ್ಲ. ಅನುಮಾನಗೊಂಡು ಅದೇ ಕಟ್ಟಡದ ಮೊದಲ ಮಹಡಿಯಲ್ಲಿ ವಾಸವಾಗಿದ್ದ ಅವರ ಸಹೋದರನಿಗೆ ವಿಷಯ ತಿಳಿಸಿದ್ದಾರೆ. ಬಳಿಕ ಅವರ ಸಹಾಯ ಪಡೆದು ಮನೆ ಬಾಗಿಲಿನ ಬೀಗ ಒಡೆದು ನೋಡಿದಾಗ ಮೃತದೇಹ ಪತ್ತೆಯಾಗಿದ್ದು, ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ಬಂದ ಕೆ.ಆರ್.ಪುರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಿದ್ದಾರೆ.

ಕ್ಯಾಬ್ ಚಾಲಕನಾಗಿರುವ ಜಗದೀಶ್‌ಗೆ 2024ರ ಸೆಪ್ಟೆಂಬರ್‌ನಲ್ಲಿ ತನುಶ್ರೀ ಪರಿಚಯವಾಗಿದೆ. ಆಕೆ ಲಿಂಗತ್ವ ಅಲ್ಪಸಂಖ್ಯಾತರು ಎಂದು ಗೊತ್ತಿದ್ದರೂ ತನುಶ್ರೀಯನ್ನು ಕೆಲ ತಿಂಗಳ ಹಿಂದೆ ಎರಡನೇ ಮದುವೆಯಾಗಿದ್ದಾನೆ ಎಂದು ಹೇಳಲಾಗಿದೆ. ಆದರೆ, ಈ ಬಗ್ಗೆ ಸ್ಪಷ್ಟತೆ ಇಲ್ಲ ಎಂದು ಪೊಲೀಸರು ಮಾಹಿತಿ ನೀಡಿದರು.

ಹಣ-ಚಿನ್ನಾಭರಣಕ್ಕಾಗಿ ಹತ್ಯೆ?: ಹಣ ಮತ್ತು ಚಿನ್ನಾಭರಣಕ್ಕಾಗಿ ತನುಶ್ರೀಯನ್ನು ಕೊಲೆ ಮಾಡಿರುವ ಬಗ್ಗೆ ಪೊಲೀಸರು ಶಂಕೆ ವ್ಯಕ್ತಪಡಿಸಿ ದ್ದಾರೆ. ತನುಶ್ರೀ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತೆ ಆಗಿದ್ದರು. ಜತೆಗೆ ಸಂಗಮ ಎಂಬ ಸ್ವಯಂ ಸೇವಾ ಸಂಸ್ಥೆ ನಡೆಸುತ್ತಿದ್ದು, ಸಾಮಾಜಿಕಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು.

‘ಅಂದು ಅಂದದೂರು, ಇಂದು ಹಾಳೂರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇವಲ 50 ವರ್ಷಗಳ ಹಿಂದೆ ಬೆಂಗಳೂರು ಉದ್ಯಾನಧಾಮ, ನಿವೃತ್ತರ ಆನಂದಧಾಮ. ಈ ನಗರವನ್ನು ಅಂದದೂರು ಎಂದು ಹಾಡಿ ಹೊಗಳಲಾಗುತ್ತಿತ್ತು. ಆದರೆ, ಅಭಿವೃದ್ಧಿ ಹೇಗೆ ಮಾಡಬೇಕು ಎಂಬ ಕಲ್ಪನೆ ಇಲ್ಲದ ರಾಜಕಾರಣಿಗಳಿಂದಾಗಿ ಇಂದು ಹಾಳೂರಾಗಿದೆ ಎಂದು ಲೇಖಕ ಕೆ. ರಾಜಕುಮಾರ್ ಬೇಸರ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ಭಾನುವಾರ ಹಮ್ಮಿಕೊಂಡಿದ್ದ ‘ನಾಡಪ್ರಭು ಕೆಂಪೇಗೌಡರ ಅಭಿವೃದ್ಧಿಯ ದೃಷ್ಟಿಕೋನ, ನಗರಾಭಿವೃದ್ಧಿಯ ಸವಾಲು–ಸಾಧ್ಯತೆ’ ವಿಚಾರಸಂಕಿರಣ, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಈಗ ಒಡೆಯುವ ರಾಜಕಾರಣಿಗಳೇ ಜಾಸ್ತಿಯಾಗಿದ್ದಾರೆ. ಕೆಂಪೇಗೌಡರು ಕಟ್ಟುವ ರಾಜನಾಗಿದ್ದರು. ಅವರ ಅಭಿವೃದ್ಧಿಯ ದೂರದೃಷ್ಟಿಯಿಂದಾಗಿ ಬೆಂಗಳೂರು ಮಹಾನಗರಿಯಾಗಿ ಬೆಳೆದಿತ್ತು. ವೃತ್ತಿಗೆ ಅನುಗುಣವಾಗಿ ಬೆಂಗಳೂರಿನಲ್ಲಿ 64 ಪೇಟೆಗಳನ್ನು ನಿರ್ಮಿಸಿದ್ದರು. ಚಿಕ್ಕಪೇಟೆ, ತಿಗಳರಪೇಟೆ, ಬಳೆಪೇಟೆ ಸಹಿತ ಈಗಲೂ 54 ಪೇಟೆಗಳು ಉಳಿದಿವೆ ಎಂದು ತಿಳಿಸಿದರು.

ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ಲೇಖಕಿ ಭಾಗ್ಯ ಕೃಷ್ಣಮೂರ್ತಿ, ಕರ್ನಾಟಕ ಜಾನಪದ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಟಿ. ತಿಮ್ಮೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಸಾಧಕರಾದ ನಾಗರತ್ನ ಕಲಾಧಾರೆ, ಲಿಂಗಣ್ಣ ಗುಂಡಳ್ಳಿ, ಎನ್. ವೆಂಕಟರೆಡ್ಡಿ, ಬಿ.ವಿ. ವೆಂಕಟೇಶ್ ಲಾಡ್, ನಾರಾಯಣ ತಿರುಮಲಾಪುರ, ಬಿ.ವಿ. ರಂಗನಾಥ್ ಲಾಡ್, ರವಿಗೌಡ ಚಿಕ್ಕೊಂಡ, ಎಲ್. ಚಿಕ್ಕಲಿಂಗೇಗೌಡ, ಸಿ.ವಿ. ರಾಘವೇಂದ್ರ ಶೆಟ್ಟಿ, ಸುಮನಾರಾಣಿ ವಿ., ಕಾವ್ಯಶ್ರೀ, ಆಶಾ ಕೆ.ಬಿ., ಎ.ಎಸ್. ದಿವಾಕರ್ ಅವರಿಗೆ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಿಚಾರಸಂಕಿರಣದಲ್ಲಿ ಸಾಧಕರಿಗೆ ‘ನಾಡಪ್ರಭು ಕೆಂಪೇಗೌಡ ಪ್ರಶಸ್ತಿ’ ಪ್ರದಾನ ಮಾಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

ಟೆಕಿಗೆ ₹84 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಖಾಸಗಿ ಕಂಪನಿಯ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರಿಗೆ ವಂಚಕರು ₹84 ಲಕ್ಷ ವಂಚಿಸಿರುವ ಘಟನೆ ನಡೆದಿದೆ.

ಸಂತ್ರಸ್ತೆಯ ದೂರು ಆಧರಿಸಿ ವೈಟ್‌ಫೀಲ್ಡ್ ಸೈಬರ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

‘ಕೆಲ ದಿನಗಳ ಹಿಂದೆ ಟೆಕಿಗೆ ವಾಟ್ಸ್‌ಆ್ಯಪ್ ಕರೆ ಮಾಡಿದ ವ್ಯಕ್ತಿ, ತನ್ನನ್ನು ಆರ್‌ಬಿಐ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದ. ಬಳಿಕ, ‘ನಿಮ್ಮ ಬ್ಯಾಂಕ್ ಖಾತೆಗಳಿಂದ ಹಣ ಅಕ್ರಮವಾಗಿ ವರ್ಗಾವಣೆ ಆಗಿದೆ. ಹಾಗಾಗಿ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತಿದೆ. ಈ ವಿಚಾರ ಕುರಿತು ಮುಂಬೈ ಪೊಲೀಸರು ಕರೆ ಮಾಡಲಿದ್ದು, ಅವರೊಂದಿಗೆ ಚರ್ಚಿಸಿ’ ಎಂದು ಬೆದರಿಸಿ ಕರೆ ಸ್ಥಗಿತಗೊಳಿಸಿದ್ದ’ ಎಂದು ಪೊಲೀಸರು ತಿಳಿಸಿದರು.

ಬಳಿಕ ಮುಂಬೈ ಪೊಲೀಸರ ಹೆಸರಿನಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ವಿಡಿಯೊ ಕರೆ ಮಾಡಿ, ‘ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ಜೆಟ್ ಏರ್‌ವೇಸ್‌ನ ಮಾಜಿ ಮುಖ್ಯಸ್ಥ ನರೇಶ್ ಗೋಯಲ್, ತನ್ನ ಹಣಕಾಸು ವರ್ಗಾವಣೆಗೆ 300 ಬ್ಯಾಂಕ್ ಖಾತೆಗಳನ್ನು ಬಳಸಿದ್ದಾರೆ. ಇದರಲ್ಲಿ ನಿಮ್ಮ ಹೆಸರಿನಲ್ಲಿರುವ ಖಾತೆಗಳೂ ಇದ್ದು, ಕೋಟ್ಯಂತರ ರೂಪಾಯಿ ಹಣ ವರ್ಗಾವಣೆ ನಡೆದಿದೆ. ಹಾಗಾಗಿ ಈ ಪ್ರಕರಣದಲ್ಲಿ ನಿಮ್ಮನ್ನು ಬಂಧಿಸಲಾಗುವುದು’ ಎಂದು ಹೇಳಿದ್ದಾರೆ ಎಂದು ವಿವರಿಸಿದರು.

ಬಂಧನ ಮಾಡಬಾರದು ಎಂದಾದರೆ ತಾನು ಸೂಚಿಸಿದ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡಬೇಕೆಂದು ಬೆದರಿಸಿದ್ದ. ಬಂಧನ ಭೀತಿಯಿಂದ ಸಂತ್ರಸ್ತೆಯು ವಂಚಕ ಕಳುಹಿಸಿದ್ದ ಐದು ಪ್ರತ್ಯೇಕ ಖಾತೆಗಳಿಗೆ ಹಂತ ಹಂತವಾಗಿ ₹84 ಲಕ್ಷ ವರ್ಗಾವಣೆ ಮಾಡಿದ್ದರು. ಮತ್ತಷ್ಟು ಹಣ ವರ್ಗಾವಣೆಗೆ ಬೇಡಿಕೆ ಇಟ್ಟಾಗ ಅನುಮಾನಗೊಂಡು, ಪೊಲೀಸರಿಗೆ ವಿಷಯ ತಿಳಿಸಿದ್ದಾರೆ.

ಹೂಡಿಕೆ ಆ್ಯಪ್: ₹39.95 ಲಕ್ಷ ವಂಚನೆ

ಬೆಂಗಳೂರು: ಐಟಿಐ ಲೇಔಟ್ ನಿವಾಸಿಯೊಬ್ಬರಿಗೆ ₹5 ಕೋಟಿ ಲಾಭಾಂಶ ಗಳಿಸಿರುವುದಾಗಿ ಆ್ಯಪ್‌ನಲ್ಲಿ ನಂಬಿಸಿ, ವಂಚಕರು ₹39.95 ಲಕ್ಷ ಮೋಸ ಮಾಡಿರುವ ಘಟನೆ ನಡೆದಿದೆ.

ಖಾಸಗಿ ಕಂಪನಿಯಲ್ಲಿ ವ್ಯವಸ್ಥಾಪಕರ ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

‘ವಾಟ್ಸ್‌ಆ್ಯಪ್‌ನಲ್ಲಿ ಬಂದ ಲಿಂಕ್ ಮೇಲೆ ಕ್ಲಿಕ್ ಮಾಡಿ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಕೊಂಡಿದ್ದ ದೂರುದಾರ, ಬಳಿಕ ಹಂತ ಹಂತವಾಗಿ ಷೇರುಗಳ ಖರೀದಿ ಮತ್ತು ಮಾರಾಟ ಪ್ರಕ್ರಿಯೆಯಲ್ಲಿ ಹೂಡಿಕೆ ಮಾಡಿದರು. ಫೆಬ್ರುವರಿ 24ರಿಂದ ಏಪ್ರಿಲ್ 12ರ ಅವಧಿಯಲ್ಲಿ ಒಟ್ಟು ₹39.95 ಲಕ್ಷ ಹೂಡಿಕೆ ಮಾಡಿದ್ದರು’ ಎಂದು ಪೊಲೀಸರು ತಿಳಿಸಿದರು.

ಚರ್ಚೆ, ವಿರೋಧಗಳಿಲ್ಲದೇ ಉದ್ದೇಶ ಈಡೇರಿಕೆಗೆ ಪ್ರಯತ್ನ: ಆರೋಪ

ಬೈಲಾ ತಿದ್ದುಪಡಿಗೆ ದೂರದ ಊರು ಏಕೆ?

• ಹರಿಶಂಕರ್ ಆರ್.

ಬಳ್ಳಾರಿ: ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆ (ಬೈಲಾ) ತಿದ್ದುಪಡಿ ಉದ್ದೇಶ ಹೊಂದಿರುವ ಏಪ್ರಿಲ್ 27ರ ಸರ್ವ ಸದಸ್ಯರ ವಿಶೇಷ ಸಾಮಾನ್ಯ ಸಭೆ ಅಲ್ಲದೇ ಅದರ ಸ್ಥಳವೂ ಚರ್ಚೆಗೆ ಗ್ರಾಸವಾಗಿದೆ.

ಬಳ್ಳಾರಿ ಜಿಲ್ಲಾ ಕೇಂದ್ರದಿಂದ 60 ಕಿ.ಮೀ ದೂರವಿರುವ ಸಂಡೂರು ತಾಲ್ಲೂಕಿನ ನಂದಿಹಳ್ಳಿಯಲ್ಲಿರುವ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ಸರ್ವ ಸದಸ್ಯರ ವಿಶೇಷ ಸಭೆ ಆಯೋಜಿಸಲು ಮಾರ್ಚ್ 21ರಂದು ನಡೆದಿದ್ದ ಕಸಾಪ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ.

‘ಬೈಲಾ ತಿದ್ದುಪಡಿಯಂಥ ಪ್ರಮುಖ ತೀರ್ಮಾನ ಆಗುವ ಸರ್ವ ಸದಸ್ಯರ ವಿಶೇಷ ಸಾಮಾನ್ಯ ಸಭೆಯನ್ನು ಹೆಚ್ಚು ಜನ ಸೇರಬಹುದಾದ ಸ್ಥಳದಲ್ಲಿ ಮಾಡುವುದು ಬಿಟ್ಟು ಸಾರಿಗೆ ಸೌಲಭ್ಯ ಹೆಚ್ಚಿಲ್ಲದ, ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಬರಲು ಸಾಧ್ಯವಾಗದ ದೂರದ ಊರಿನಲ್ಲಿ ನಡೆಸುತ್ತಿರುವುದರ ಹಿಂದೆ ಗುಪ್ತ ಕಾರ್ಯಸೂಚಿ ಅಡಗಿದೆ’ ಎಂಬ ಆರೋಪಗಳಿವೆ.

ಮಹೇಶ ಜೋಶಿ ಅವರು ಪರಿಷತ್ತಿನ ಅಧ್ಯಕ್ಷರಾದ ಬಳಿಕ ಎರಡು ಬಾರಿ ಬೈಲಾ ತಿದ್ದುಪಡಿಯಾಗಿದೆ. ಮೊದಲನೇ ತಿದ್ದುಪಡಿಗೆ ಸಭೆಯು 2022ರ ಮೇ ತಿಂಗಳಲ್ಲಿ ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿ ನಡೆದಿತ್ತು. ಎರಡನೇ ತಿದ್ದುಪಡಿಗೆ ಸಭೆಯು 2023ರ ಸೆಪ್ಟೆಂಬರ್‌ನಲ್ಲಿ ಹಾಸನ ಜಿಲ್ಲೆಯ ಹಳೇಬೀಡಿನ ಪುಷ್ಪಗಿರಿ ಮಠದಲ್ಲಿ ನಡೆದಿತ್ತು.

ನಾನಿರುವವರೆಗೆ ಬೆಂಗಳೂರಲ್ಲಿ ಸಭೆ ಇಲ್ಲ: ‘ಯಾವ ಜಿಲ್ಲೆಯಲ್ಲಿ ಸಮ್ಮೇಳನ ಆಗುತ್ತದೋ, ಅಲ್ಲಿ ವಾರ್ಷಿಕ ಸಭೆ ನಡೆಸಲು ತೀರ್ಮಾನಿಸಿದ್ದೇವೆ. ಸಭೆ ಬೆಂಗಳೂರು ಕೇಂದ್ರಿತ ಆಗುವುದು ನಾನು ಒಪ್ಪಲ್ಲ. ನಾನಿರುವವರೆಗೆ ಬೆಂಗಳೂರಿನಲ್ಲಿ ಸಭೆ ಮಾಡಲ್ಲ. ಎಲ್ಲಿ ಸಾಧ್ಯವಿಲ್ಲವೋ, ಅಲ್ಲಿ ಸಾಧ್ಯವಾಗಿಸಬೇಕು ಎಂಬುದಷ್ಟೇ ನನ್ನ ಉದ್ದೇಶ. ಬರಬೇಕಾದವರು ಬರುತ್ತಾರೆ. ಬೆಂಗಳೂರಿನಲ್ಲೇ ಸಭೆ ನಡೆಯಬೇಕು ಎಂಬುದು ಕ್ಷುಲ್ಲಕ ದೃಷ್ಟಿಕೋನ’ ಎಂದು ಮಹೇಶ ಜೋಶಿ ತಿಳಿಸಿದರು.

ಬೈಲಾದಲ್ಲಿ ಏನಿದೆ?

ಸರ್ವ ಸದಸ್ಯರ ಸಭೆ ಬೆಂಗಳೂರಿನಲ್ಲಿ ನಡೆಯಬೇಕು ಎಂದು ಬೈಲಾದಲ್ಲಿದೆ. ಬೇರೆ ಸ್ಥಳಗಳಲ್ಲಿಯೂ ಮಾಡಬಹುದು ಎಂದೂ ಹೇಳಿದೆ. ಆದರೆ, ದೂರದ ಊರುಗಳಲ್ಲಿ ಆಯೋಜಿಸಿ ಎಂದಿಲ್ಲ. ಸರ್ವ ಸದಸ್ಯರ ಸಭೆಯಲ್ಲಿ ವಿಷಯ ಮಂಡಿಸಿದಾಗ 100 ಜನಕ್ಕಿಂತಲೂ ಕಡಿಮೆ ಸದಸ್ಯರಿದ್ದರೆ ಸಭೆಯನ್ನು ಅರ್ಧ ಗಂಟೆ ಮುಂದಕ್ಕೆ ಹಾಕಬೇಕು. ಬಳಿಕ ಸಭೆ ಸೇರಿ, ಹಾಜರಿರುವ ಸದಸ್ಯರ ಪೈಕಿ ನಾಲ್ಕರಲ್ಲಿ ಮೂರನೇ ಭಾಗದಷ್ಟು ಬಹುಮತದೊಂದಿಗೆ ತೀರ್ಮಾನಗಳನ್ನು ಅಂಗೀಕರಿಸಬಹುದು ಎಂದು ಹೇಳಿದೆ.

‘ಹೆಚ್ಚು ಜನ ಸೇರದಂತೆ ಮಾಡುವುದು. ಸಭೆಯಲ್ಲಿ ಹೆಚ್ಚು ಚರ್ಚೆ ಆಗದಂತೆ ನೋಡಿಕೊಳ್ಳುವುದು. ಪ್ರಶ್ನೆಗಳೇ ಏಳದಂತೆ ಮಾಡುವುದು. ಕಡಿಮೆ ಅವಧಿಯಲ್ಲಿ ತಮ್ಮ ಕಾರ್ಯ ಸಾಧನೆ ಮಾಡಿಕೊಳ್ಳುವುದು ದೂರದ ಊರುಗಳಲ್ಲಿ ಸರ್ವ ಸದಸ್ಯರ ವಿಶೇಷ ಸಾಮಾನ್ಯ ಸಭೆ ಆಯೋಜಿಸುವ ಉದ್ದೇಶ’ ಎಂದು ಕಸಾಪ ಜಿಲ್ಲಾ ಘಟಕವೊಂದರ ನಿಕಟಪೂರ್ವ ಅಧ್ಯಕ್ಷರೊಬ್ಬರು ಹೇಳಿದ್ದಾರೆ.

> ನಿಬಂಧನೆ ಬದಲಿಸಬಾರದು ಎಂದು ಹೇಳಲಾಗಿದೆಯೇ? ಕೋರ್ಟ್ ನಿರ್ದೇಶನ ಇದೆಯೇ? ಸಂವಿಧಾನವೇ ತಿದ್ದುಪಡಿ ಆಗಿದೆ. ಕಸಾಪ ನಿಬಂಧನೆ ತಿದ್ದುಪಡಿಗೆ ಯಾಕೆ ವಿರೋಧ?
>
> **ಮಹೇಶ ಜೋಶಿ**
> ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು

ವಕ್ಫ್ ಕಾಯ್ದೆ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕ್ಫ್ ಕಾಯ್ದೆಯನ್ನು ವಿರೋಧಿಸಿ ‘ಹಮ್ ಸಂವಿಧಾನ್ ಕೆ ಲೋಗ್’ ಸಂಘಟನೆಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

‘ವಕ್ಫ್ ಕಾಯ್ದೆಗೆ ತಿದ್ದುಪಡಿ ಮಾಡಿರುವುದು ಸಾಂವಿಧಾನಿಕ ತತ್ವಗಳಿಗೆ ವಿರುದ್ಧವಾಗಿದೆ. ಕೇಂದ್ರ ಸರ್ಕಾರ ಧಾರ್ಮಿಕ ಸ್ವಾಯತ್ತತೆ ಮತ್ತು ಸಾಂಸ್ಕೃತಿಕ ಹಕ್ಕುಗಳಿಗೆ ಬೆದರಿಕೆ ಒಡ್ಡುತ್ತಿದೆ. ಈ ಕಾಯ್ದೆಯನ್ನು ದೇಶದ ಎಲ್ಲ ಸಮುದಾಯಗಳ ಜನರು ತಿರಸ್ಕರಿಸುತ್ತಿದ್ದಾರೆ. ರೈತರು ರೂಪಿಸಿದ ಚಳವಳಿಯ ರೀತಿಯಲ್ಲಿಯೇ, ವಕ್ಫ್ ಕಾಯ್ದೆಯನ್ನು ಹಿಂಪಡೆಯುವರೆಗೆ ನಾವು ಪ್ರತಿಭಟನೆ ಮುಂದುವರೆಸುತ್ತೇವೆ’ ಎಂದು ಪ್ರತಿಭಟನಕಾರರು ಹೇಳಿದರು.

‘ವಕ್ಫ್ ತಿದ್ದುಪಡಿ ಕಾಯ್ದೆ ಸಂವಿಧಾನದ ಆತ್ಮದ ಮೇಲಿನ ದಾಳಿಯಾಗಿದೆ. ಇದು ಭಾರತೀಯ ಮುಸ್ಲಿಮರಿಗೆ ಮಾತ್ರವಲ್ಲ, ಕಾನೂನಿನಲ್ಲಿ ನಂಬಿಕೆ ಇರುವ ಎಲ್ಲ ವ್ಯಕ್ತಿಗಳಿಗೆ ಬೆದರಿಕೆ ಆಗಿದೆ’ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಹಿರಿಯ ವಕೀಲ ಬಿ.ಟಿ. ವೆಂಕಟೇಶ್, ರೇವತಿ ರಾಜ್, ಶಿವಸುಂದರ್, ಹೆಬ್ಬಾಳ ವೆಂಕಟೇಶ್, ಮೌಲಾನಾ ಫಿರ್ದೋಸ್, ಭಾನು ಪ್ರಕಾಶ್, ಮೋಹನ್ ರಾಜು, ಯೂಸುಫ್ ಕನ್ನಿ, ಎ.ಜೆ. ಖಾನ್ ಪಾಲ್ಗೊಂಡಿದ್ದರು.

ಕಾಣೆಯಾಗಿದ್ದಾರೆ



ನರಸಿಂಹಮೂರ್ತಿ B V, 79 ವರ್ಷ ಇವರು ನೀಲಾದ್ರಿ ನಗರ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರಿನಿಂದ ದಿನಾಂಕ: 18-04-2025 ರಿಂದ ಕಾಣೆಯಾಗಿದ್ದಾರೆ ಇವರು Walking Stick ಹಿಡಿದುಕೊಂಡು ನಡೆಯುತ್ತಿದ್ದರು. ದಯವಿಟ್ಟು ಇವರನ್ನು ಕಂಡಲ್ಲಿ ನಮ್ಮ ಮೊಬೈಲ್ ನಂಬರ್‌ಗೆ ಕರೆ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ

90369 59905, 77952 52664, 94481 74036

ನಗರದ ಎಡಿಎ ರಂಗಮಂದಿರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಚಂದನಾ ಎಸ್. ನಾಗ್ ಅವರು ಭರತನಾಟ್ಯ ರಂಗಪ್ರವೇಶ ಮಾಡಿದರು
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಸಂಕ್ಷಿಪ್ತ ಸುದ್ದಿ

ಲಾರಿಗೆ ಕಾರು ಡಿಕ್ಕಿ: ಮಹಿಳೆ ಸಾವು

ಅಶ್ವಿನಿ

ಮಂಡ್ಯ: ಮೈಸೂರು- ಬೆಂಗಳೂರು ಹೆದ್ದಾರಿಯಲ್ಲಿ ಗೆಜ್ಜಲಗೆರೆ ಬಳಿ ಭಾನುವಾರ ಚಲಿಸುತ್ತಿದ್ದ ಕಾರೊಂದು ಮುಂದೆ ಸಾಗುತ್ತಿದ್ದ ಕ್ಯಾಂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮಹಿಳೆ ಸ್ಥಳದಲ್ಲೇ ಮೃತಪಟ್ಟರು.

ಬೆಂಗಳೂರಿನ ಕುಮಾರಸ್ವಾಮಿ ಲೇಔಟ್ ನಿವಾಸಿ, ಸಾಫ್ಟ್‌ವೇರ್ ಎಂಜಿನಿಯರ್ ಅಶ್ವಿನಿ (33) ಮೃತರು. ಅವರ ಪತಿ ಸಾಫ್ಟ್‌ವೇರ್ ಎಂಜಿನಿಯರ್ ಶ್ರೀಕಾಂತ ಭಟ್ (37) ಮತ್ತು 2 ವರ್ಷದ ಮಗುವಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಗ್ರಾ.ಪಂ. ಸದಸ್ಯ ಸೇರಿ ಮೂವರು ಬಂಧನ

ಸೂಲಿಬೆಲೆ (ಹೊಸಕೋಟೆ): ಸರ್ಕಾರಿ ಗೋಮಾಳ ವೀಕ್ಷಣೆಗೆ ತೆರಳಿದ್ದ ತಹಶೀಲ್ದಾರ್ ಸೋಮಶೇಖರ್ ಅವರಿದ್ದ ಸರ್ಕಾರಿ ವಾಹನ ಅಡ್ಡಗಟ್ಟಿ ಹಲ್ಲೆ ಯತ್ನ ಹಾಗೂ ಕೊಲೆ ಬೆದರಿಕೆ ಹಾಕಿದ ಆರೋಪದಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಸೇರಿ ಮೂವರನ್ನು ಶನಿವಾರ ಸೂಲಿಬೆಲೆ ಪೊಲೀಸರು ಬಂಧಿಸಿದ್ದಾರೆ.

ದೊಡ್ಡಹರಳಗೆರೆ ಗ್ರಾಮ ಪಂಚಾಯಿತಿ ಸದಸ್ಯ ಶಶಿಕಿರಣ್, ಮುನಿರಾಜ್ ಹಾಗೂ ಮಂಜುನಾಥ್ ಬಂಧಿತರು. ಮೂವರೂ ತೆನೆಯೂರು ಗ್ರಾಮದ ನಿವಾಸಿಗಳು.

ಬಾಲಕಿ ಮೇಲೆ ವೃದ್ಧನಿಂದ ದೌರ್ಜನ್ಯ

ಮಡಿಕೇರಿ: ಜಿಲ್ಲೆಯ ಗ್ರಾಮವೊಂದರಲ್ಲಿ ಐದೂವರೆ ವರ್ಷದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಲ್ಲಿ 71 ವರ್ಷದ ಹಸ್ಸೈನ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ತನ್ನ ಅಂಗಡಿಗೆ ಚಾಕೋಲೆಟ್ ಕೊಳ್ಳಲು ಬಂದ ಬಾಲಕಿಯ ಮೇಲೆ ಆತ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಆಕೆಯ ತಾಯಿ ದೂರು ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮೈಸೂರಿನ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಕ್ರಮ

ವೆಬ್‌ನಲ್ಲಿ ಸಂಗೀತ 'ಪಾಠ'ದ ವಿಡಿಯೊ

• ಎಂ. ಮಹೇಶ್

ಮೈಸೂರು: ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಸಂಬಂಧಿಸಿದ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಕಲಿಕೆಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ, 'ತರಗತಿ ಪಾಠ'ಗಳನ್ನು ವಿಡಿಯೊ ರೆಕಾರ್ಡ್ ಮಾಡಿ ತನ್ನ ಜಾಲತಾಣದಲ್ಲಿ ಹಾಕಲು ಇಲ್ಲಿನ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ತಯಾರಿ ನಡೆಸಿದೆ. ವಿದ್ವಾಂಸರನ್ನು ಬಳಸಿಕೊಂಡು ವಿಡಿಯೊ ತರಗತಿಗಳನ್ನು ಸಿದ್ಧಪಡಿಸಲಾಗುತ್ತಿದೆ.

ವಿಶ್ವವಿದ್ಯಾಲಯದ https://musicuniversity.ac.in/ ಜಾಲತಾಣದಲ್ಲಿ 'ಡಿಜಿಟಲ್ ಲೈಬ್ರರಿ'ಯನ್ನು ಸಿದ್ಧಪಡಿಸುವ ಭಾಗವಾಗಿ ವಿಡಿಯೊ ರೆಕಾರ್ಡಿಂಗ್ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

ಇಲ್ಲಿ ಬಿಪಿಎ, ಎಂಪಿಎ, ಡಿ.ಲಿಟ್, ಸರ್ಟಿಫಿಕೆಟ್ ಹಾಗೂ ಪಿಜಿ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಇದರೊಂದಿಗೆ, ವಿಶ್ವವಿದ್ಯಾಲಯದಿಂದ ವಿಶೇಷ ಸಂಗೀತ, ನೃತ್ಯ ಹಾಗೂ ತಾಳವಾದ್ಯ ಪರೀಕ್ಷೆಗಳನ್ನೂ ನಡೆಸಲಾಗುತ್ತಿದೆ. ಜೂನಿಯರ್, ಸೀನಿಯರ್, ವಿದ್ವತ್‌ಪೂರ್ವ ಹಾಗೂ ವಿದ್ವತ್ ಪರೀಕ್ಷೆಯನ್ನು ರಾಜ್ಯದಾದ್ಯಂತ ವಿದ್ಯಾರ್ಥಿಗಳು ತೆಗೆದುಕೊಳ್ಳುತ್ತಿದ್ದಾರೆ. ಇವರಿಗೆ ಇರುವಲ್ಲೇ ಪಾಠಗಳು ಲಭ್ಯವಾಗುವಂತೆ ಮಾಡುವ ಉದ್ದೇಶ ಹೊಂದಲಾಗಿದೆ.

ಮೈಸೂರಿನ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ವಿದ್ವಾಂಸರಿಂದ ಬೋಧನೆ: ಈಚೆಗೆ ಮೊದಲ ಹಂತದಲ್ಲಿ ಐದು ದಿನಗಳವರೆಗೆ ರೆಕಾರ್ಡಿಂಗ್ ಕಾರ್ಯ ನಡೆದಿದೆ. 25 ಗಂಟೆಗಳ ಪಾಠವನ್ನು ರೆಕಾರ್ಡ್ ಮಾಡಲಾಗಿದೆ. ವಿದ್ವಾನ್ ಬಳ್ಳಾರಿ ರಾಘವೇಂದ್ರ, ಸಿ.ಎ. ಶ್ರೀಧರ್ ಕರ್ನಾಟಕ ಸಂಗೀತ, ಶೀಲಾ ಶ್ರೀಧರ್ ನೃತ್ಯ, ರಾಮಮೂರ್ತಿರಾವ್ ನೃತ್ಯ, ರಮಾ ವಿ.ಬೆಣ್ಣೂರ್ ಸಂಗೀತದ ವಿಷಯಕ್ಕೆ ಸಂಬಂಧಿಸಿದಂತೆ ಬೋಧಿಸಿದ್ದಾರೆ.

'ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಸಂಬಂಧಿಸಿದಂತೆ ವಿದ್ವಾಂಸರು ಹಾಗೂ ವಿದ್ವಾನರನ್ನು ವಿ.ವಿಗೆ ಆಹ್ವಾನಿಸಿ ಪಾಠ ರೆಕಾರ್ಡ್ ಮಾಡಿಸಲಾಗುವುದು. ಅವರು ಜ್ಞಾನವನ್ನು ಹಂಚಿಕೊಳ್ಳಲಿದ್ದಾರೆ. ಅವುಗಳನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಒಂದೊಂದಾಗಿ ಅಪ್‌ಲೋಡ್ ಮಾಡಲಾಗುವುದು. ಎಲ್ಲ ಚಾಪ್ಟರ್ ಹಾಗೂ ತರಗತಿಗಳ ಪಠ್ಯವನ್ನು ರೆಕಾರ್ಡ್ ಮಾಡಿ ಹಾಕಲಾಗುವುದು. ಈ ಸಂಬಂಧ ಈಚೆಗೆ ನಡೆದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ದೊರೆತಿದೆ' ಎಂದು ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ 'ಪ್ರಜಾವಾಣಿ'ಗೆ ತಿಳಿಸಿದರು.

ಆನ್‌ಲೈನ್‌ನಲ್ಲಿ: 'ಆನ್‌ಲೈನ್‌ನಲ್ಲಿ ಆ ಪಾಠಗಳನ್ನು ಕೇಳಬಹುದು, ನೋಡಬಹುದು. ಇದಕ್ಕಾಗಿ ಸದಸ್ಯತ್ವ ಪಡೆಯಬೇಕು. ಸಂಗೀತ ಹಾಗೂ ನೃತ್ಯಕ್ಕೆ ಸಂಬಂಧಿಸಿದ ಪಾಠಗಳನ್ನು ಶೀಘ್ರದಲ್ಲೇ ಅಪ್‌ಲೋಡ್ ಮಾಡಲಿದ್ದೇವೆ.

ಈಗ ನಮ್ಮಲ್ಲಿ ಪರೀಕ್ಷೆ ತೆಗೆದುಕೊಳ್ಳುವವರಿಗೆ ಮಾತ್ರ ವಿಡಿಯೊಗಳ ವೀಕ್ಷಣೆಗೆ ಅವಕಾಶವಿದೆ. ಎಲ್ಲ ತರಗತಿಗಳ ರೆಕಾರ್ಡಿಂಗ್ ಸಿದ್ಧವಾದ ಬಳಿಕ ಸಂಗೀತ ಆಸಕ್ತರಿಗೂ ನೀಡಲಾಗುವುದು

ಪ್ರೊ.ನಾಗೇಶ್ ವಿ.ಬೆಟ್ಟಕೋಟೆ
ಕುಲಪತಿ, ಸಂಗೀತ ವಿಶ್ವವಿದ್ಯಾಲಯ

ಸೀನಿಯರ್ ವಿದ್ವತ್ತು, ಜೂನಿಯರ್ ವಿದ್ವತ್ತು, ಮಾಸ್ಟರ್ ಡಿಗ್ರಿ ಮಾಡುವವವರಿಗೆ, ಮನೆಯಲ್ಲೇ ಕುಳಿತು ಕಲಿಯುವವರಿಗೆ ಹಾಗೂ ಆಸಕ್ತರಿಗೆ ತಜ್ಞರಿಂದ ಪಾಠ ಮಾಡಿಸಿ ವಿಡಿಯೊ ಮಾಡಿ ಹಾಕಲಾಗುತ್ತದೆ. ಜೂನಿಯರ್, ಸೀನಿಯರ್, ವಿದ್ವತ್‌ಪೂರ್ವ ಹಾಗೂ ವಿದ್ವತ್ ಪರೀಕ್ಷೆ ತೆಗೆದುಕೊಳ್ಳುವವರಿಗೆ ಹೆಚ್ಚು ಅನುಕೂಲ ಆಗಲಿದೆ. ವಿಶ್ವವಿದ್ಯಾಲಯದ ಎಲ್ಲ ಹಂತದ ವಿದ್ಯಾರ್ಥಿಗಳಿಗೂ ಉಪಯೋಗಕ್ಕೆ ಬರುತ್ತದೆ.

ಮುಖ್ಯಾಂಶಗಳು

- 25 ಗಂಟೆಗಳ ಪಾಠ ಸಿದ್ಧ
- ಶೀಘ್ರದಲ್ಲೇ ವೆಬ್‌ಗೆ ಅಪ್‌ಲೋಡ್
- ವಿಶೇಷ ಪರೀಕ್ಷೆ ತೆಗೆದುಕೊಳ್ಳುವವರಿಗೆ ಅನುಕೂಲ

ನಮ್ಮಲ್ಲಿ ವಿದ್ಯಾರ್ಥಿಯಾದವರಿಗೆ ಸದಸ್ಯತ್ವ ನೀಡಲಾಗುವುದು. ಪಾಸ್‌ವರ್ಡ್ ಹಾಗೂ ಯೂಸರ್‌ನೇಮ್ ಬಳಸಿ ಅವರು ವೀಕ್ಷಿಸಬಹುದಾಗಿದೆ' ಎಂದು ಮಾಹಿತಿ ನೀಡಿದರು.

'ಆನ್‌ಲೈನ್‌ನಲ್ಲಿರುವ ಪಾಠ ನೋಡಿಕೊಳ್ಳಿ ಎಂದು ಬೋಧಕರು ಹೇಳುವಂತಿಲ್ಲ. ನಿಯಮದಂತೆ ಭೌತಿಕ ತರಗತಿಗಳನ್ನು ಕಡ್ಡಾಯವಾಗಿ ನಡೆಸಲೇಬೇಕು. ಹೆಚ್ಚುವರಿಯಾಗಿ ಕಲಿಕೆಗೆ ಅವಕಾಶ ಆಗಲೆಂದು ವೆಬ್‌ನಲ್ಲಿ ಮುದ್ರಿತ ಪಾಠ ಹಾಕಲಾಗುತ್ತಿದೆ. ವಿಡಿಯೊಗಳನ್ನು 'ಕ್ಲೌಡ್'ನಲ್ಲಿ ಸಂಗ್ರಹಿಸಲಾಗುವುದು' ಎಂದು ಹೇಳಿದರು.

'ಸಂಗೀತ ಶಿಕ್ಷಣವನ್ನು ಸಾಮಾನ್ಯ ಜನರಿಗೂ ತಲುಪುವಂತೆ ಮಾಡಬೇಕು ಎಂಬುದು ವಿ.ವಿಯ ಮೂಲ ಉದ್ದೇಶವೂ ಆಗಿದೆ. ಇದಕ್ಕಾಗಿ 'ಆರ್ಕೈವ್ಸ್' ಮಾಡಲಾಗುತ್ತಿದೆ' ಎನ್ನುತ್ತಾರೆ ಅವರು.

ಸುದ್ದಿ 2 ನಿಮಿಷ

ಕಸಾಪ ಅಧ್ಯಕ್ಷಗಿರಿ ಪರಮಾಧಿಕಾರ ಹುದ್ದೆಯಲ್ಲ: ವೈ.ಕೆ. ಮುದ್ದುಕೃಷ್ಣ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಗಿರಿ ಎನ್ನುವುದು ಕನ್ನಡ ಪರಿಚಾರಿಕೆಯ ಹುದ್ದೆಯೇ ಹೊರತು, ಪರಮಾಧಿಕಾರ ಅನುಭವಿಸುವ ಹುದ್ದೆಯಲ್ಲ' ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಹೇಳಿದ್ದಾರೆ.

ಕಸಾಪ ಬೈ–ಲಾ ತಿದ್ದುಪಡಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಅವರು, 'ಹಾಲಿ ಕಾರ್ಯಕಾರಿ ಸಮಿತಿಯ ಅವಧಿಯಲ್ಲಿ ಮೂರನೇ ಬಾರಿ ಬೈ–ಲಾ ತಿದ್ದುಪಡಿ ಮಾಡುತ್ತಿರುವುದು ಖಂಡನೀಯ. ಪರಮಾಧಿಕಾರ ಪಡೆದುಕೊಳ್ಳಲು ನಡೆಸಿದ ಹುನ್ನಾರ ಇದಾಗಿದೆ. ತಿದ್ದುಪಡಿ ಅನಿವಾರ್ಯವಾಗಿದ್ದಲ್ಲಿ ಸರ್ವಸದಸ್ಯರ ವಿಶೇಷ ಸಭೆಯನ್ನು ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ನಿಗದಿಪಡಿಸಿ, ಅಲ್ಲಿರುವ ಎಲ್ಲ ಸದಸ್ಯರ ಅಭಿಪ್ರಾಯ ಪಡೆದುಕೊಂಡು ಮುಂದಿನ ಕ್ರಮವಹಿಸಬೇಕು. ಬಳ್ಳಾರಿಯ ಗ್ರಾಮವೊಂದರಲ್ಲಿ ಸರ್ವಸದಸ್ಯರ ವಿಶೇಷ ಸಭೆ ನಿಗದಿಪಡಿಸಿ, ಆತುರದಿಂದ ತಿದ್ದುಪಡಿ ಮಾಡುತ್ತಿರುವುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕಸಾಪ ಅಧ್ಯಕ್ಷರು ಯಾವುದೇ ಕಾರಣಕ್ಕೂ ಪರಮಾಧಿಕಾರ ಹೊಂದಬಾರದು. ಜಿಲ್ಲಾ ಘಟಕದ ಅಧ್ಯಕ್ಷರು ಸೇರಿ ಎಲ್ಲರನ್ನು ಒಳಗೊಂಡು ತೀರ್ಮಾನ ಕೈಗೊಳ್ಳಬೇಕು' ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಪತ್ರದಲ್ಲಿ ಕನ್ನಡ ಕಾಗುಣಿತ ತಪ್ಪು ತಹಶೀಲ್ದಾರ್‌ಗೆ ಡಿ.ಸಿ ನೋಟಿಸ್

ಚಿಂತಾಮಣಿ (ಚಿಕ್ಕಬಳ್ಳಾಪುರ): ತಹಶೀಲ್ದಾರ್ ಕಚೇರಿಯಿಂದ ಬರೆಯಲಾದ ಪತ್ರದಲ್ಲಿ ಹಲವು ಕನ್ನಡ ಕಾಗುಣಿತ ತಪ್ಪುಗಳಿದ್ದ ಕಾರಣ ವಿವರಣೆ ನೀಡುವಂತೆ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಅವರು ಚಿಂತಾಮಣಿ ತಹಶೀಲ್ದಾರ್ ಸುದರ್ಶನ್ ಅವರಿಗೆ ನೋಟಿಸ್ ನೀಡಿದ್ದಾರೆ.

ಚಿಂತಾಮಣಿ ತಾಲ್ಲೂಕು ಕಚೇರಿ ಆವರಣದಲ್ಲಿ ಪೊಲೀಸ್ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಲು ಅನುಮತಿ ಕೋರಿ ಶಂಬೂಕ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಜಿ.ಸೂರ್ಯಕಿರಣ್ ಈಚೆಗೆ ಚಿಂತಾಮಣಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದ್ದರು.

ಇದಕ್ಕೆ ತಹಶೀಲ್ದಾರ್ ಬರೆದ ಪತ್ರದಲ್ಲಿ ಹಲವು ಕನ್ನಡ ಕಾಗುಣಿತ ತಪ್ಪುಗಳಿದ್ದವು. ಇದನ್ನು ಗುರುತಿಸಿದ ಸೂರ್ಯಕಿರಣ್, ಕನ್ನಡ ಕಾಗುಣಿತ ಬಾರದ ತಹಶೀಲ್ದಾರ್ ವಿರುದ್ಧ ಕ್ರಮ ಜರುಗಿಸಬೇಕು ಎಂದು ಜಿಲ್ಲಾಧಿಕಾರಿಗೆ ದೂರು ನೀಡಿದ್ದರು.

ಧರಣಿ ಬರೆಯುವ ಬದಲು ದರಣಿ ಎಂದು, ಸಮಿತಿ ಎಂಬಲ್ಲಿ ಸಮೀತಿ, ಅನುಸರಿಸುತ್ತಿರುವ ಬದಲು ಅನುಸಾರಿಸುತ್ತಿರುವ, ಆದರೆ ಎಂಬಲ್ಲಿ ಆದರೇ, ಕಾಂಪೌಂಡ್ ಬರೆಯುವ ಬದಲು ಕಾಂಪೌಡ್ ಎಂದು ಬರೆದಿದ್ದರು ಎಂಬುದಾಗಿ ದೂರಿನಲ್ಲಿ ತಿಳಿಸಿದ್ದರು.

'ನಂಬಿಕೆ ಕಿತ್ತುಹಾಕುವ ಕೃತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾವಿರಾರು ವರ್ಷಗಳಿಂದ ನಂಬಿಕೊಂಡು ಬಂದ ನಂಬಿಕೆಯನ್ನು ಕಿತ್ತುಹಾಕುವ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ಒಕ್ಕಲಿಗರ ಉಡುದಾರ, ಲಿಂಗಾಯತರ ಶಿವದಾರ ಕತ್ತರಿಸಿದ್ದರು, ಈಗ ಸಿಇಟಿ ಪರೀಕ್ಷೆಯಲ್ಲಿ ಒಬ್ಬ ಬ್ರಾಹ್ಮಣ ವಿದ್ಯಾರ್ಥಿಯ ಜನಿವಾರ ಕತ್ತರಿಸಿ ಬಿಸಾಡಲಾಗಿದೆ. ಸಿಇಟಿ ಪರೀಕ್ಷೆ ವೇಳೆ ತಾಳಿ ಮತ್ತು ಓಲೆಗೂ ಕೈ ಹಾಕಿದ್ದರು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

'ಈ ಹಿಂದೆ ಹಿಜಾಬ್ ಬಗ್ಗೆ ವಿವಾದ ಆಗಿದ್ದಾಗ, ಅದರ ಪರವಾಗಿ ಕಾಂಗ್ರೆಸ್ ನಾಯಕರು ಬೀದಿಗೆ ಇಳಿದಿದ್ದರು. ಹಿಜಾಬ್ ಬೇರೆ, ಜನಿವಾರವೇ ಬೇರೆ. ಬಟ್ಟೆಯೊಳಗೆ ಏನು ಬೇಕಾದರೂ ಬಚ್ಚಿಟ್ಟುಕೊಳ್ಳಬಹುದು, ಜನಿವಾರದಲ್ಲಿ ಏನನ್ನೂ ಅಡಗಿಸಿ ಇರಿಸಿಕೊಳ್ಳಲಾಗುವುದಿಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಆರ್. ಅಶೋಕ

'ಕಾಂಗ್ರೆಸ್‌ನ ಆಡಳಿತದಲ್ಲಿ ಹಿಂದೂಗಳು ಕುಂಕುಮ ಇಟ್ಟುಕೊಳ್ಳಲು, ಜನಿವಾರ ಹಾಕಿಕೊಳ್ಳಲು ಅವಕಾಶವಿಲ್ಲ. ಹಿಜಾಬ್ ಹಾಕಿಕೊಂಡವರನ್ನು ತಪಾಸಣೆ ಮಾಡುವುದಿಲ್ಲ. ಹಿಂದೂಗಳ ಮೇಲೆ ಸಿಎಂ ಸಿದ್ದರಾಮಯ್ಯನವರಿಗೆ ಕೋಪ ಇದೆ. ಈ ಸರ್ಕಾರ ಹಿಂದೂಗಳನ್ನು ದಮನ ಮಾಡುತ್ತಿದೆ. ಈ ಮೂಲಕ ವಿಕೃತ ಸಂತೋಷ ಕಂಡುಕೊಳ್ಳುತ್ತಿದೆ' ಎಂದರು.

'ಜನಿವಾರ ತೆಗೆಯಿಸಿ ಪರೀಕ್ಷೆ ಬರೆಸಿದರು'

ಧಾರವಾಡ: 'ನಗರದ ಹುರಕಡ್ಲಿ ಅಜ್ಜ ಕಾಲೇಜಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಕೇಂದ್ರದಲ್ಲಿ ನನ್ನ ಜನಿವಾರ ತೆಗೆಸಿ ಪರೀಕ್ಷೆ ಬರೆಸಿದರು' ಎಂದು ಜೆಎಸ್‌ಎಸ್ ಆರ್‌ಎಸ್‌ಎಚ್ ಪಿಯು ಕಾಲೇಜು ವಿದ್ಯಾರ್ಥಿ ನಂದನ್ ಏರಿ ದೂರಿದರು.

'ಸಿಇಟಿ ಮೊದಲ ದಿನ (ಏ.16) ಪರೀಕ್ಷಾ ಕೇಂದ್ರಕ್ಕೆ ಹೋದಾಗ ದ್ವಾರದಲ್ಲಿ ಪೊಲೀಸರು ಜನಿವಾರವನ್ನು ತುಂಡರಿಸಿ ತೆಗೆಸಿ, ನಂತರ ಪರೀಕ್ಷಾ ಕೊಠಡಿಗೆ ಕಳಿಸಿದರು. ಮಾರನೇ ದಿನ ಜನಿವಾರ ಧರಿಸದೆ ಹೋಗಿ ಪರೀಕ್ಷೆ ಬರೆದೆ' ಎಂದು ತಿಳಿಸಿದರು.

'ಜನಿವಾರವನ್ನು ತುಂಡರಿಸಿ ತೆಗೆಯಿಸಿ ಮಗನ ಕೈಗೆ ಕೊಟ್ಟಿದ್ದಾರೆ. ಜನಿವಾರವನ್ನು ತೆಗೆಸಿದವರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ನಂದನ್ ತಂದೆ ವಿವೇಕ್ ಏರಿ ಆಗ್ರಹಿಸಿದರು.

'ಜನಿವಾರ ಪ್ರಕರಣಕ್ಕೆ ಸಂಬಂಧಿಸಿದಂತೆ ವರದಿ ನೀಡಲು ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ಸೂಚಿಸಿದ್ದೇನೆ. ಪರಿಶೀಲಿಸಿ ಕ್ರಮ ವಹಿಸಲಾಗುವುದು' ಎಂದು ಜಿಲ್ಲಾಧಿಕಾರಿ ದಿವ್ಯಪ್ರಭು 'ಪ್ರಜಾವಾಣಿ' ಗೆ ತಿಳಿಸಿದರು.

ಮಾಹಿತಿ ಕಣಜದಿಂದ ಸಂಭ್ರಮ

ಎಡ್ಯುವರ್ಸ್: ವಿವಿಧ ಕೋರ್ಸ್‌ಗಳ ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ನೆಹರೂ ಕ್ರೀಡಾಂಗಣದಲ್ಲಿ ಎರಡು ದಿನ ಎಡ್ಯುವರ್ಸ್ ಶೈಕ್ಷಣಿಕ ಮೇಳಕ್ಕೆ ಭೇಟಿ ನೀಡಿದ ವಿದ್ಯಾರ್ಥಿಗಳು ವಿವಿಧ ಕೋರ್ಸ್‌ಗಳ ಬಗ್ಗೆ ಸಮಗ್ರ ಮಾಹಿತಿ ಪಡೆದರು. ಪಾಲಕರು ಮತ್ತು ಸ್ನೇಹಿತರ ಜೊತೆ ಶಿಕ್ಷಣ ಸಂಸ್ಥೆಗಳ ಮಳಿಗೆಗೆ ಭೇಟಿ ನೀಡಿದ ಅವರು, ಕೋರ್ಸ್‌ಗಳ ಪ್ರಯೋಜನ ಮತ್ತು ಅವಕಾಶ ಬಗ್ಗೆ ವಿವರಣೆ ಪಡೆದರು.

ದೇಶದ ವಿವಿಧ ರಾಜ್ಯಗಳಿಂದ ಅಲ್ಲದೇ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಮತ್ತು ಪ್ರತಿನಿಧಿಗಳು ವೈವಿಧ್ಯಮಯ ಕೋರ್ಸ್‌ಗಳ ಬಗ್ಗೆ ಸಮಗ್ರ ಮಾಹಿತಿ ನೀಡುವುದರ ಜೊತೆಗೆ, ಭವಿಷ್ಯದಲ್ಲಿ ಉದ್ಯೋಗಾವಕಾಶ ಮತ್ತು ಆಗುವ ಪ್ರಯೋಜನೆಗಳ ಬಗ್ಗೆ ವಿವರಿಸಿದರು.

ಹಾವೇರಿ, ಬೆಳಗಾವಿ, ಗದಗ, ಕಾರವಾರ ಸೇರಿದಂತೆ ಬೇರೆ ಬೇರೆ ಊರುಗಳಿಂದ ಬಂದಿದ್ದ ವಿದ್ಯಾರ್ಥಿಗಳು, ಮೇಳದಲ್ಲಿ ಆಯೋಜಿಸಲಾಗಿದ್ದ ಮಾದರಿ ನೀಟ್ (NEET) ಪರೀಕ್ಷೆಯಲ್ಲಿ ಪಾಲ್ಗೊಂಡರು. ಮೂರು ಗಂಟೆ ನಡೆದ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಆಕರ್ಷಕ ಬಹುಮಾನ ಕೊಡಲಾಯಿತು.

ತಂತ್ರಜ್ಞಾನದ ಸದ್ಬಳಕೆ ಮತ್ತು ಭವಿಷ್ಯದ ಕುರಿತು ಐಬಿಟಿ ಡೀನ್ ಪ್ರೊ. ಎಸ್.ಎಂ.ಶಿವಪ್ರಸಾದ್ ಅವರು ವಿಶೇಷ ಉಪನ್ಯಾಸ ನೀಡಿದರು. ಕಾಮೆಡ್‌–ಕೆ ಕುರಿತು ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜಿನ ಸಹಾಯಕ ಪ್ರೊಫೆಸರ್ ಶ್ರವಣ ಕುಮಾರ ನಾಯಕ್ ಅವರು ಉಪನ್ಯಾಸ ನೀಡಿದರು. ಶಿಷ್ಯವೇತನದ ಬಗ್ಗೆ ವಿದ್ಯಾ ಪೋಷಕ್‌ನ ರತ್ನಾ ಹಿಪ್ಪರಗಿ ವಿವರಿಸಿದರು.

ಹುಬ್ಬಳ್ಳಿಯಲ್ಲಿ ಭಾನುವಾರ 'ಎಡ್ಯುವರ್ಸ್' ಶೈಕ್ಷಣಿಕ ಮೇಳದಲ್ಲಿ ಧಾರವಾಡದ ಸಾಯಿ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಯ ಪ್ರತಿನಿಧಿಗಳು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ಪುಟಗಳಿಂದ ಮಾದರಿ ಉಡುಪು ಸಿದ್ಧಪಡಿಸಿರುವುದನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

'ಎಡ್ಯುವರ್ಸ್ ಮೇಳಕ್ಕೆ ಎರಡೂ ದಿನ ಭೇಟಿ ನೀಡಿದೆ. ಎಲ್ಲಾ ಮಳಿಗೆಗಳಿಗೆ ಹೋಗಿ, ಮಾಹಿತಿ ಪಡೆದೆ. ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳನ್ನು ಒಂದೇ ಕಡೆ ಭೇಟಿಯಾಗಲು ಮತ್ತು ಕೆಲವಷ್ಟು ಗೊಂದಲಗಳನ್ನು ನಿವಾರಿಸಿಕೊಳ್ಳಲು ಅನುಕೂಲವಾಯಿತು' ಎಂದು ಹಾವೇರಿಯ ಸ್ನೇಹಾ ಕಟ್ಟಿಮನಿ 'ಪ್ರಜಾವಾಣಿ'ಗೆ ತಿಳಿಸಿದರು.

'ಶೈಕ್ಷಣಿಕ ಮೇಳಗಳು ಆಗಾಗ್ಗೆ ನಡೆದರೆ, ಜಗತ್ತು ಯಾವ ಸ್ವರೂಪದಲ್ಲಿ ಬದಲಾಗುತ್ತಿದೆ ಎಂಬುದು ಅರಿವಿಗೆ ಬರುತ್ತದೆ. ಹೆಚ್ಚು ಖರ್ಚಿಲ್ಲದೇ ಮತ್ತು ಊರಿನಿಂದಊರಿಗೆಅಲೆದಾಡದೇ, ಒಂದೇಸ್ಥಳದಲ್ಲಿ ವಿವಿಧ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳಜೊತೆನೇರಮುಖಾಮುಖಿಯಾಗಲು ಅವಕಾಶ ಸಿಗುತ್ತದೆ' ಎಂದು ಬ್ಯಾಂಕ್ ಸಿಬ್ಬಂದಿ ಸುರೇಶ ಹಿರೇಮಠ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಕೋಮಾದಲ್ಲಿದ್ದ ಯುವಕ ಸಾವು

ಗಂಗಾವತಿ (ಕೊಪ್ಪಳ ಜಿಲ್ಲೆ): ಜೂಜಾಟ ವಿಷಯಕ್ಕಾಗಿ ನಡೆದಿದ್ದ ಗುಂಪು ಘರ್ಷಣೆಯಲ್ಲಿ ಗಂಭೀರವಾಗಿ ಗಾಯಗೊಂಡು ಎರಡು ವರ್ಷಗಳಿಂದ ಆಸ್ಪತ್ರೆಯಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಇಲ್ಲಿನ ಅಮರ್ ಭಗತಸಿಂಗ್ ನಗರದ ಮಾರುತಿ ಯಳವರ (26) ಎಂಬ ಯುವಕ ಶನಿವಾರ ಮೃತಪಟ್ಟಿದ್ದಾನೆ.

ಮಾರುತಿ

2023ರ ಮಾ. 9ರಂದು ಗಂಗಾವತಿಯಲ್ಲಿರುವ ಸಿಂಧನೂರ ರಸ್ತೆಯಲ್ಲಿ ಎರಡು ಗುಂಪುಗಳ ನಡುವಿನ ಗಲಾಟೆಯಲ್ಲಿ ಎದುರಾಳಿ ಗುಂಪಿನವರು ಮಾರುತಿ ಮೇಲೆ ಕಲ್ಲು ಎತ್ತಿ ಹಾಕಿದ್ದರಿಂದ ಗಾಯಗೊಂಡಿದ್ದರು.

ಕೊಲೆ ಪ್ರಕರಣ: ಈ ಘಟನೆಗೆ ಸಂಬಂಧಿಸಿದಂತೆ ಆಗ ನಗರ ಪೊಲೀಸ್ ಠಾಣೆಯಲ್ಲಿ 14 ಜನರ ವಿರುದ್ಧ ಮಾರಣಾಂತಿಕ ಹಲ್ಲೆ ಎಂದು ಪ್ರಕರಣ ದಾಖಲಾಗಿತ್ತು. ಈಗ ಮಾರುತಿ ಮೃತಪಟ್ಟಿದ್ದರಿಂದ ಕೊಲೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

9 ಮಂದಿ ಪೊಲೀಸರ ಅಮಾನತು

ಉಡುಪಿ: ಅಕ್ರಮವಾಗಿ ನಡೆಯುತ್ತಿದ್ದ ಕೆಂಪುಕಲ್ಲು ಗಣಿಗಾರಿಕೆ ಬಗ್ಗೆ ಮಾಹಿತಿ ನೀಡದ ಕಾರಣಕ್ಕೆ 9 ಮಂದಿ ಪೊಲೀಸರನ್ನು ಅಮಾನತು ಮಾಡಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ. ಆದೇಶಿಸಿದ್ದಾರೆ.

'ಡೀಮ್ಡ್ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಕೆಂಪುಕಲ್ಲು ಗಣಿಗಾರಿಕೆಯ ಬಗ್ಗೆ ಮಾಹಿತಿ ನೀಡದ್ದಕ್ಕೆ ಗಂಗೊಳ್ಳಿ, ಬೈಂದೂರು ಮತ್ತು ಕೊಲ್ಲೂರು ಪೊಲೀಸ್ ಠಾಣೆಗಳ ತಲಾ ಮೂವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಈ ಮೂರು ಠಾಣೆಗಳ ಸಬ್ ಇನ್‌ಸ್ಪೆಕ್ಟರ್‌ಗಳ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ' ಎಂದು ಎಸ್‌ಪಿ ತಿಳಿಸಿದ್ದಾರೆ.

'ಇವರು ಮಾಹಿತಿ ನೀಡದ ಕಾರಣ ಗಣಿಗಾರಿಕೆ ನಡೆಯುತ್ತಿದ್ದ ಸ್ಥಳಗಳಿಗೆ ಬೇರೆ ವ್ಯಾಪ್ತಿಯ ಪೊಲೀಸರು ದಾಳಿ ನಡೆಸಿದ್ದರು' ಎಂದೂ ಹೇಳಿದ್ದಾರೆ.

ಈಜಲು ಹೋಗಿ ಇಬ್ಬರು ಬಾಲಕರ ಸಾವು

ಬೀದರ್: ಜಿಲ್ಲೆಯ ಹುಲಸೂರ ತಾಲ್ಲೂಕಿನ ಮುಚಳಂಬ ಗ್ರಾಮದಲ್ಲಿ ಸ್ನೇಹಿತರೊಂದಿಗೆ ಬಾವಿಯಲ್ಲಿ ಈಜಲು ಹೋಗಿದ್ದ ಇಬ್ಬರು ಬಾಲಕರು ನೀರಿನಲ್ಲಿ ಮುಳುಗಿ ಭಾನುವಾರ ಮೃತಪಟ್ಟಿದ್ದಾರೆ.

ಮುಚಳಂಬ ಗ್ರಾಮದ ಅವಿನಾಶ್ ಶರಣಪ್ಪ ಮಚಕೂರೆ (16) ಹಾಗೂ ಭಾಲ್ಕಿ ತಾಲ್ಲೂಕಿನ ಕೋಟಗೇರಾ ಗ್ರಾಮದ ಭಾಗೇಶ ಕಮಲಾಕರ ಮಾನೆ (16) ಮೃತ ಬಾಲಕರು.

ಐವರು ಸ್ನೇಹಿತರು ಗ್ರಾಮದ ಬಳಿಯ ಬಾವಿಯೊಂದರಲ್ಲಿ ಈಜಲು ಹೋಗಿದ್ದರು. ಈಜಲು ಬಾರದ ಬಾಲಕನೊಬ್ಬ ನೀರಿಗೆ ಇಳಿದಿದ್ದಾನೆ. ಈಜು ಬಾರದ್ದಕ್ಕೆ ಬಾಲಕ ಮುಳುಗುತ್ತಿರುವುದನ್ನು ಕಂಡು ಆತನನ್ನು ರಕ್ಷಿಸಲು ಇನ್ನೊಬ್ಬ ಬಾಲಕ ಬಾವಿಗೆ ಜಿಗಿದಿದ್ದಾನೆ. ಈ ವೇಳೆ ಇಬ್ಬರು ಬಾಲಕರು ನೀರಿನಲ್ಲಿ ಮುಳುಗಿ ಕೊನೆಯುಸಿರೆಳೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಖಂಡ್ರೆಗೆ ಬ್ರಾಹ್ಮಣ ಮಹಾಸಭಾ ಅಭಿನಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಿವಾರ ತೆಗೆಯದ ಕಾರಣಕ್ಕೆ ಕೆ-ಸಿಇಟಿ ಗಣಿತ ಪರೀಕ್ಷೆ ಬರೆಯಲು ಸಾಧ್ಯವಾಗದ ವಿದ್ಯಾರ್ಥಿ ಸುಚಿವ್ರತ್ ಕುಲಕರ್ಣಿಗೆ ಭಾಲ್ಕಿಯ ಭೀಮಣ್ಣ ಖಂಡ್ರೆ ತಾಂತ್ರಿಕ ವಿದ್ಯಾಲಯದಲ್ಲಿ (ಬಿಕೆಐಟಿ) ಉಚಿತ ಸೀಟು ನೀಡುವುದಾಗಿ ಘೋಷಿಸಿದ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಭಿನಂದನೆ ಸಲ್ಲಿಸಿದೆ.

'ಸಚಿವ ಈಶ್ವರ ಖಂಡ್ರೆ ಅವರು ಸುಚಿವ್ರತ್ ಅವರ ಮನೆಗೆ ಭೇಟಿ ನೀಡಿ ಆತ್ಮಸ್ಥೈರ್ಯ ತುಂಬಿದ್ದಾರೆ. ಉಚಿತ ಸೀಟು ನೀಡುವುದಾಗಿಯೂ ಹೇಳಿದ್ದಾರೆ. ಜತೆಗೆ, ಮುಂದೆ ಇಂತಹ ಘಟನೆ ಮರುಕಳಿಸದ ರೀತಿ ಎಚ್ಚರಿಕೆ ವಹಿಸಿ ಎಂದು ಜಿಲ್ಲಾಧಿಕಾರಿಗೆ ಸೂಚಿಸಿದ್ದಾರೆ. ಅವರಿಗೆ ಅಭಿನಂದನೆ' ಎಂದು ಮಹಾಸಭಾದ ಅಧ್ಯಕ್ಷ ಎಸ್.ರಘುನಾಥ್ ಹೇಳಿದ್ದಾರೆ.

ಜನಿವಾರ ಧರಿಸುವ ಬ್ರಾಹ್ಮಣ, ರಜಪೂತ, ಕಲಾಲ, ಮರಾಠಾ, ವಿಶ್ವಕರ್ಮ ಸೇರಿ ಮತ್ತಿತರೆ ಸಮಾಜಗಳಿಗೆ ಅವಮಾನ ಮಾಡಲಾಗಿದೆ. ಹಿಂದೂ ಭಾವನೆಗಳಿಗೆ ಘಾಸಿ ಗೊಳಿಸಿದವರ ವಿರುದ್ಧ ಸರ್ಕಾರ ತಕ್ಷಣ ಕಾನೂನು ಕ್ರಮ ಜರುಗಿಸಬೇಕು.

ಬಸನಗೌಡ ಪಾಟೀಲ ಯತ್ನಾಳ, ಶಾಸಕ

ಸುಬುಧೇಂದ್ರ ತೀರ್ಥರ ಖಂಡನೆ

ಪ್ರಜಾವಾಣಿ ವಾರ್ತೆ

ರಾಯಚೂರು: ಸಿಇಟಿ ಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣವನ್ನು ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ತೀವ್ರವಾಗಿ ಖಂಡಿಸಿದ್ದಾರೆ.

'ಜನಿವಾರವೆಂಬುದು ಧರ್ಮ, ಸಂಪ್ರದಾಯ ಹಾಗೂ ಬ್ರಾಹ್ಮಣತ್ವದ ಪ್ರತೀಕವಾಗಿದೆ. ಜನಿವಾರ ತೆಗೆಸಿದ್ದರಿಂದ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿದೆ. ಇದು ಸಂವಿಧಾನ ವಿರೋಧಿ ನಡೆಯೂ ಆಗಿದೆ. ಸಂವಿಧಾನದಲ್ಲಿ ಎಲ್ಲ ಧರ್ಮವನ್ನೂ ಆಚರಿಸುವ ಅವಕಾಶ ಕಲ್ಪಿಸಲಾಗಿದೆ. ಆದರೆ ಘಟನೆಯಲ್ಲಿ ಧರ್ಮ ವಿರೋಧಿ ನೀತಿ ಅನುಸರಿಸಲಾಗಿದ್ದು, ಇಂಥ ದ್ವಂದ್ವ ನಿಲುವು ಖಂಡನೀಯ' ಎಂದು ಹೇಳಿದ್ದಾರೆ.

'ಸಚಿವರು ಹಾಗೂ ಶಾಸಕರು ವಿದ್ಯಾರ್ಥಿಗಳನ್ನು ಭೇಟಿ ಮಾಡಿ ತಪ್ಪಾಯಿತು ಎಂದು ಹೇಳುವುದು ಕಣ್ಣೊರೆಸುವ ತಂತ್ರವಾಗಿದೆ. ಮುಂದೆ ಇಂಥ ಘಟನೆ ಪುನರಾವರ್ತನೆಯಾದರೆ ಸರ್ಕಾರದ ವಿರುದ್ಧ ಸಮಸ್ತ ಹಿಂದೂಗಳು ಜಾತಿ ಬೇಧ ಮರೆತು ಹೋರಾಟ ನಡೆಸಬೇಕಾಗುತ್ತದೆ' ಎಂದು ಎಚ್ಚರಿಸಿದ್ದಾರೆ.

ಸುಬುಧೇಂದ್ರ ತೀರ್ಥರು

'ರಾಜ್ಯದಲ್ಲಿ ಧರ್ಮವಿರೋಧಿ ಚಟುವಟಿಕೆ ನಡೆಯಬಾರದು. ಬೇರೆ ಬೇರೆ ಧರ್ಮದವರು ತಮ್ಮ ಧರ್ಮ ಹಾಗೂ ಚಿಹ್ನೆಗಳನ್ನು ಪಾಲಿಸಿಕೊಂಡು ಬಂದಿದ್ದಾರೆ. ಆದರೆ ವಿಪ್ರ ಸಮುದಾಯಕ್ಕೆ ಮಾತ್ರ ಈ ರೀತಿಯಾಗಿ ಅನ್ಯಾಯ ಮಾಡಲಾಗಿದೆ. ಜನಿವಾರ ತೆಗೆಸಿದವರ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಬೇಕು ಹಾಗೂ ವಿದ್ಯಾರ್ಥಿಗೆ ಸೂಕ್ತ ನಷ್ಟ ಪರಿಹಾರ ಕಲ್ಪಿಸಬೇಕು' ಎಂದಿದ್ದಾರೆ.

ಅಡ್ಡಿ ಇಲ್ಲ: ಡಿಸಿಎಂ ಡಿಕೆಶಿ

ಮಂಗಳೂರು: 'ಧರ್ಮದ ಆಚರಣೆಗೆ ಯಾರೂ ಅಡ್ಡಿಪಡಿಸುವಂತಿಲ್ಲ. ವಿದ್ಯಾರ್ಥಿಯ ಜನಿವಾರ ತೆಗೆದ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಲು ಸರ್ಕಾರ ಬದ್ಧ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬೆಳ್ತಂಗಡಿಯಲ್ಲಿ ಹೇಳಿದರು.

'ಆಚರಣೆಗಳನ್ನು ಅನುಸರಿಸಲು ಕಾಂಗ್ರೆಸ್ ಸರ್ಕಾರ ಅವಕಾಶ ನೀಡುತ್ತದೆ. ಧರ್ಮ ಉಳಿಸಲು ಸರ್ಕಾರ ಸದಾ ಬದ್ಧವಾಗಿದ್ದು, ಇದನ್ನು ಶೃಂಗೇರಿ ಶ್ರೀಗಳ ಪಾದಾರವಿಂದಗಳಲ್ಲಿ ಹೇಳುತ್ತಿದ್ದೇನೆ. ಸರ್ಕಾರದ ಪ್ರತಿನಿಧಿಯಾಗಿ ನಾನು ಧರ್ಮರಕ್ಷಣೆಗೆ ತಯಾರಿದ್ದೇನೆ' ಎಂದು ಸಿಇಟಿ ಸಂದರ್ಭ ಜನಿವಾರ ತೆಗೆದಿರಿಸಿದ ಘಟನೆಗೆ ಸಂಬಂಧಿಸಿದಂತೆ ಅವರು ಪ್ರತಿಕ್ರಿಯಿಸಿದರು.

'ಜನಿವಾರ: ತಾಳ್ಮೆ ಪರೀಕ್ಷಿಸಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಯ ಜನಿವಾರ ತೆಗೆಸಿದ ಪ್ರಕರಣದಲ್ಲಿ ತಪ್ಪಿತಸ್ಥರನ್ನು ಶಿಕ್ಷಿಸುವ ಮೂಲಕ ಮತ್ತೆ ಈ ರೀತಿ ಘಟನೆ ಮರುಕಳಿಸದಂತೆ ಸ್ಪಷ್ಟ ಸಂದೇಶ ರವಾನಿಸಬೇಕು' ಎಂದು ಕೆಪಿಸಿಸಿ ವಕ್ತಾರ ಶಂಕರ ಗುಹಾ ದ್ವಾರಕನಾಥ್ ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಶಂಕರ ಗುಹಾ ದ್ವಾರಕನಾಥ್

ಈ ಬಗ್ಗೆ ಅವರು ಬೀದರ್ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ಪತ್ರ ಬರೆದಿದ್ದಾರೆ.

'ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ಬ್ರಾಹ್ಮಣ ವಿದ್ಯಾರ್ಥಿಗೆ ಜನಿವಾರ ತೆಗೆಸುವ ಮೂಲಕ ಇಡೀ ಬ್ರಾಹ್ಮಣ ಸಮುದಾಯಕ್ಕೆ ಅವಮಾನ ಮಾಡಿದ ಘಟನೆ ನಡೆದಿದೆ. ಬ್ರಾಹ್ಮಣರು ಬಹುಜನಪ್ರಿಯರು ಹಾಗೂ ಅಹಿಂಸಾವಾದಿಗಳು. ಆದರೆ, ನಮ್ಮ ಮೇಲೆ ಇಂತಹ ಅವಮಾನಗಳನ್ನು ಮಾಡುತ್ತಲೇ ಇದ್ದಾರೆ. ಆದರೂ ಸಹಿಸಿಕೊಂಡು ಬಂದಿದ್ದೇವೆ. ನಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡಬಾರದು. ಬ್ರಾಹ್ಮಣರಿಗೆ ಯಜ್ಞೋಪವೀತ ಪರಮ ಪವಿತ್ರವಾದಂತಹ ಒಂದು ವಸ್ತು. ಇದನ್ನು ತೆಗೆಸಿ, ಅವಮಾನ ಮಾಡಿರುವುದು ಖಂಡನೀಯ' ಎಂದಿದ್ದಾರೆ.

'ಒಂದು ವೇಳೆ ತಪ್ಪಿತಸ್ಥರಿಗೆ ಶಿಕ್ಷೆ ಆಗದಿದ್ದರೆ, ಮತ್ತೆ ಈ ರೀತಿ ಘಟನೆ ಮರುಕಳಿಸಿದರೆ ಇಡೀ ಬ್ರಾಹ್ಮಣ ಸಮುದಾಯ ಬೀದಿಗೆ ಇಳಿದು ಹೋರಾಟ ನಡೆಸಲಿದೆ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಕೂಡಲೇ ಕ್ರಮಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

'ಹಿಜಾಬ್ ವಿಷಯದಲ್ಲಿ ನಮ್ಮ ಪಕ್ಷ ಸಾಕಷ್ಟು ಮುಂಚೂಣಿಯಲ್ಲಿತ್ತು. ಆದರೆ, ಬ್ರಾಹ್ಮಣರಿಗೆ ಅಪಮಾನವಾದಾಗ ಎಲ್ಲರೂ ಸುಮ್ಮನಿರುವುದು ನನಗೆ ಆಶ್ಚರ್ಯವನ್ನುಂಟು ಮಾಡಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಜನಿವಾರ ತೆಗೆಸಿದ್ದು ಸರಿಯಲ್ಲ'

'ಜನಿವಾರ ಎಂಬುದು ಒಬ್ಬರ ಧಾರ್ಮಿಕ ನಂಬಿಕೆ. ಅದನ್ನು ತೆಗೆಸಿ ಪರೀಕ್ಷೆ ಬರೆಸಬೇಕೆಂಬ ನೀತಿ ಸರಿಯಲ್ಲ. ಯಾವುದೇ ಧರ್ಮವಿರಲಿ ಪ್ರತಿಯೊಬ್ಬರ ಧಾರ್ಮಿಕ ಹಕ್ಕನ್ನು ಗೌರವಿಸಬೇಕಾದದ್ದು ಸಂವಿಧಾನಾತ್ಮಕ ಕರ್ತವ್ಯ' ಎಂದು ಸಮಾಜ ಕಲ್ಯಾಣ ಸಚಿವ ಡಾ. ಎಚ್‌.ಸಿ. ಮಹದೇವಪ್ಪ ತಿಳಿಸಿದ್ದಾರೆ.

'ಸಂವಿಧಾನದ ಆಶಯಗಳನ್ನು ನಾವು ಮರೆಯದೇ ವರ್ತಿಸುವುದೇ ಈ ನೆಲಕ್ಕೆ ಸಲ್ಲಿಸುವ ಮೊದಲ ಗೌರವ. ಹಿಜಾಬ್ ಸಂದರ್ಭದಲ್ಲೂ ನಮ್ಮ ನಿಲುವು ಇದೇ ಆಗಿತ್ತು. ಈಗಲೂ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಚೇರಿ (ತ್ಯಾನೀನಿ–ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009.

ಟೆಂಡರ್‌ಗಾಗಿ ಆಹ್ವಾನ–4ನೇ ಕರೆ
(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಐಎಫ್‌ಟಿ ನಂ: ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ಎಸ್‌ಟಿಪಿ–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/57/2025–26, ದಿನಾಂಕ: 19.04.2025

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ **ಭೀಮನಕಟ್ಟೆ ಕೆರೆಯಿಂದ (ಟ್ಯಾಪಿಂಗ್ ಪಾಯಿಂಟ್) ಉತ್ತರಹಳ್ಳಿ ಕೆರೆಗೆ ಪರಿಸರ–ಸ್ನೇಹಿ ಸಂಸ್ಕರಿಸಿದ ನೀರನ್ನು ಭರ್ತಿ ಮಾಡಲು 450 ಮಿಮೀ ವ್ಯಾಸದ ಡಿಐ ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸುವ ಕಾಮಗಾರಿಗಾಗಿ** ಟೆಂಡರ್‌ಗಳನ್ನು ಆಹ್ವಾನಿಸಿದೆ.

ಟೆಂಡರ್‌ಗಿಟ್ಟ ಮೊತ್ತ : **ರೂ. 402.53 ಲಕ್ಷಗಳು.**

ಇಎಂಡಿ ಮೊತ್ತ: **ರೂ.6.04 ಲಕ್ಷಗಳು.**

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **28.04.2025ರ ಸಂಜೆ 5:00 ಗಂಟೆವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **29.04.2025ರಂದು ಸಂಜೆ 5:30 ಗಂಟೆಗೆ.**

ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು **https://kppp.karnataka.gov.in**ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು
(ತ್ಯಾನೀನಿ–ಪಶ್ಚಿಮ)

DIPR/CP/YC/280/2025-26

ಶಿಸ್ತಿನ ಪಾಠ ಹೇಳಿದ ಅಪ್ಪನ ಕೊಲೆ

ಒಂದನೇ ಪುಟದಿಂದ...

ಕೊಲೆ ಬಳಿಕ ಕಥೆ ಕಟ್ಟಿದ ಪುತ್ರ: ಬೋಲು ಅರಬ್ ಮೃತಪಟ್ಟಿರುವುದು ಖಚಿತವಾದ ಬಳಿಕ ಸಮೀರ್, ಸ್ನೇಹಿತನಿಗೆ ಕರೆ ಮಾಡಿ, ನಾಲ್ಕೈದು ಮಂದಿ ಮನೆಗೆ ನುಗ್ಗಿ ತಂದೆಯನ್ನು ಕೊಲೆ ಮಾಡಿ ಪರಾರಿಯಾದರು ಎಂದು ಹೇಳಿದ್ದಾನೆ. ಮನೆಗೆ ಬಂದ ಸ್ನೇಹಿತ ಶವ ನೋಡಿ 112 ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಘಟನೆ ಬಗ್ಗೆ ಮಾಹಿತಿ ನೀಡಿದ್ದಾನೆ.

ಸ್ಥಳಕ್ಕೆ ಭೇಟಿ ನೀಡಿ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಬಳಿಕ ತಾಯಿ-ಮಗನ ವರ್ತನೆ ಬಗ್ಗೆ ಅನುಮಾನಗೊಂಡು ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಕೊಲೆ ವಿಚಾರ ಗೊತ್ತಾಗಿದೆ. ಬಳಿಕ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಒಳ ಮೀಸಲು: ಮೇನಲ್ಲಿ ಸಮೀಕ್ಷೆ...

ಒಂದನೇ ಪುಟದಿಂದ...

ಈ ಎರಡೂ ಹಂತಗಳಲ್ಲಿ ಮಾಹಿತಿ ನೀಡಲು ಸಾಧ್ಯವಾಗದವರಿಗೆ ಆನ್‌ಲೈನ್ ವ್ಯವಸ್ಥೆಯೂ ಇದೆ. ಹೀಗೆ ಮೂರು ಹಂತಗಳಲ್ಲಿ ದತ್ತಾಂಶ ಶೇಖರಿಸಲು ಆಯೋಗ ಮುಂದಾಗಿದೆ.

ಈ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿದ ನ್ಯಾಯಮೂರ್ತಿ ಎಚ್. ಎನ್. ನಾಗಮೋಹನ್‌ದಾಸ್, 'ಸಮೀಕ್ಷೆ ನಡೆಸಿ ಎರಡು ತಿಂಗಳ ಒಳಗೆ ವರದಿ ನೀಡುವಂತೆ ಸರ್ಕಾರ ಸೂಚನೆ ನೀಡಿದೆ. ಅಧಿಕಾರಿಗಳ ಜೊತೆ ಸರಣಿ ಸಭೆ ನಡೆಸಿದ್ದೇನೆ. ಸಮೀಕ್ಷೆಗೆ ಅಗತ್ಯವಾದ ಪ್ರಶ್ನಾವಳಿ ಅಂತಿಮಗೊಂಡಿದೆ. ದತ್ತಾಂಶ ಸಂಗ್ರಹಿಸಲು ಮೊಬೈಲ್ ಆ್ಯಪ್ ಸಿದ್ಧಪಡಿಸಲಾಗಿದೆ. ಈ ಆ್ಯಪ್ ಹೇಗೆ ಬಳಸಬೇಕೆಂಬ ಮಾಹಿತಿ ಇರುವ ಕೈಪಿಡಿಯೂ ಸಿದ್ಧವಾಗಿದೆ. ಸಮೀಕ್ಷೆಗಾಗಿ ಶಿಕ್ಷಣ ಇಲಾಖೆ ಮೂಲಕ ಸುಮಾರು 55 ಸಾವಿರ ಸಿಬ್ಬಂದಿಯನ್ನು ಗುರುತಿಸಿದ್ದೇವೆ' ಎಂದರು.

'ಸಮೀಕ್ಷೆಗೆ ಸಂಬಂಧಿಸಿದಂತೆ ಮುಂದಿನ ವಾರ ತರಬೇತಿ ಕೊಡಲಾಗುವುದು. ಮೊದಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ, ಅವರಿಂದ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ, ಅವರು ಗಣತಿದಾರರಿಗೆ ತರಬೇತಿ ನೀಡಲಿದ್ದಾರೆ. ಎಲ್ಲವೂ ಅಂದುಕೊಂಡಂತೆ ನಡೆದರೆ ಮೇ ಮೊದಲ ವಾರದಲ್ಲಿ ಮನೆ ಮನೆ ಸಮೀಕ್ಷೆ ಆರಂಭವಾಗಲಿದೆ. ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಮನೆಗಳ ಸಂಖ್ಯೆಗೆ ಅನುಗುಣವಾಗಿ ಸಮೀಕ್ಷೆ ನಡೆಯಲಿದೆ. ಈ ವೇಳೆ ಮಾಹಿತಿ ನೀಡಲು ಸಾಧ್ಯವಾಗದವರು ಅಥವಾ ಲಭ್ಯರಾಗದವರಿಗೆ ಅವಕಾಶ ಮಾಡಿಕೊಡಲು ಪಂಚಾಯಿತಿ ಮಟ್ಟದಲ್ಲಿ ಒಬ್ಬ ಅಧಿಕಾರಿ ನಾಲ್ಕೈದು ದಿನ ಕ್ಯಾಂಪ್ ಮಾಡಲಿದ್ದಾರೆ. ಈ ಎರಡೂ ಅವಕಾಶಗಳನ್ನು ಬಳಸಿಕೊಳ್ಳಲು ಸಾಧ್ಯವಾಗದೇ ಇದ್ದವರು ಆನ್‌ಲೈನ್ ಮೂಲಕ ಸಮೀಕ್ಷೆಯಲ್ಲಿ ಭಾಗವಹಿಸಬಹುದು. ಗಣತಿಯಿಂದ ಯಾರೊಬ್ಬರೂ ಬಿಟ್ಟು ಹೋಗಬಾರದು ಎನ್ನುವುದು ನಮ್ಮ ಉದ್ದೇಶ' ಎಂದರು.

ಸದ್ಯ ಯಾವುದೇ ದತ್ತಾಂಶ ಲಭ್ಯ ಇಲ್ಲ: 'ಒಳ ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನಾನು ಮಧ್ಯಂತರ ವರದಿ ಕೊಡುವ ವೇಳೆಗೆ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ಸಮೀಕ್ಷೆಯ ವರದಿ ಲಭ್ಯ ಇರಲಿಲ್ಲ. ಅಲ್ಲದೆ, ಸರ್ಕಾರ ಆ ವರದಿಯನ್ನು ಅಂಗೀಕರಿಸದೇ ಇರುವುದರಿಂದ ಇನ್ನೂ ಅದು ಲಭ್ಯ ಇಲ್ಲ. ಅದರಲ್ಲೂ ಆದಿ ಆಂಧ್ರ (ಎಎ), ಆದಿ ಕರ್ನಾಟಕ (ಎಕೆ), ಆದಿ ದ್ರಾವಿಡ (ಎಡಿ) ಎಂದು 29 ಲಕ್ಷ ಜನ ಬರೆಸಿಕೊಂಡಿದ್ದಾರೆಂಬ ಮಾಹಿತಿಯಿದೆ. 2011ರಲ್ಲಿ ನಡೆದ ಜನಗಣತಿ, ಒಳ ಮೀಸಲಾತಿಗೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಎ.ಜಿ. ಸದಾಶಿವ ಆಯೋಗ ಹಿಂದೆ ನೀಡಿದ್ದ ವರದಿ ಹೀಗೆ ಎಲ್ಲದರಲ್ಲೂ ಈ ಗೊಂದಲ ಮುಂದುವರಿದಿದೆ. ಹೀಗಾಗಿ, ಸುಪ್ರೀಂ ಕೋರ್ಟ್ ನೀಡಿರುವ ಮಾರ್ಗದರ್ಶನ ಪ್ರಕಾರ ಒಳ ಮೀಸಲಾತಿ ಹಂಚಿಕೆ ಮಾಡಲು ನಮಗೆ ಸದ್ಯ ಯಾವುದೇ ದತ್ತಾಂಶ ಲಭ್ಯ ಇಲ್ಲ. ಈ ಕಾರಣಕ್ಕೆ ಹೊಸ ಸಮೀಕ್ಷೆ ಆಗಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡಿದ್ದೆ' ಎಂದರು.

'ನಾನು ಒಳ ಮೀಸಲಾತಿ ಪರ. ಹಿಂದಿನ ಸರ್ಕಾರ 2019–20ರಲ್ಲಿ ಪರಿಶಿಷ್ಟರ ಮೀಸಲಾತಿ ಹೆಚ್ಚಿಸಲು ನನ್ನ ನೇತೃತ್ವದಲ್ಲಿ ಆಯೋಗ ಮಾಡಿತ್ತು. ಆ ವರದಿಯಲ್ಲಿ ಒಳ ಮೀಸಲಾತಿಗೆ ನಾನು ಶಿಫಾರಸು ಮಾಡಿದ್ದೇನೆ. ಆದರೆ, ಒಳ ಮೀಸಲಾತಿ ಹಂಚಿಕೆಗೆ ಕಾನೂನು ತೊಡಕು ಎದುರಾಗಬಹುದಾದ ಕಾರಣ ಸಮಗ್ರ ದತ್ತಾಂಶ ಸಂಗ್ರಹಿಸಿ, ಅಧ್ಯಯನ ಮಾಡುವ ಅಗತ್ಯ ಇದೆಯೆಂದು ಹೇಳಿದ್ದೆ. ಈ ವಿಚಾರದಲ್ಲಿ ಆಗ ಅಸಹಾಯಕನಾಗಿದ್ದೆ. ಒಳ ಮೀಸಲಾತಿ ವಿಚಾರದಲ್ಲಿ ಆ ವರದಿಯಲ್ಲಿ ನಾನು ಹೇಳಿದ್ದನ್ನು ನಾಲ್ಕು ವರ್ಷಗಳ ಬಳಿಕ ಸುಪ್ರೀಂ ಕೋರ್ಟ್ ಹೇಳಿದೆ' ಎಂದರು.

'ಸಮೀಕ್ಷೆಯ ಸಂದರ್ಭದಲ್ಲಿ ಪರಿಶಿಷ್ಟರ ಒಟ್ಟು 101 ಜಾತಿಗಳಲ್ಲಿ 98 ಜಾತಿಗಳ ದತ್ತಾಂಶ ಸಂಗ್ರಹ ಸಮಸ್ಯೆಯಲ್ಲ. 'ಜಾತಿಗಳ ಗುಂಪು' ಆಗಿರುವ ಎಎ, ಎಕೆ, ಎಡಿ ಎಂದು ನಮೂದಿಸುವುದು ಸಮಸ್ಯೆ. ಆ ರೀತಿ ಬರೆಸಬೇಡಿ ಎಂದು ಹೇಳುವುದಿಲ್ಲ. ಅದರ ಜೊತೆಗೆ, ಉಪ ಜಾತಿ/ಮೂಲ ಜಾತಿ ಕಡ್ಡಾಯವಾಗಿ ನಮೂದಿಸಬೇಕು. ಈ ಕುರಿತು ಜಾಗೃತಿ ಮೂಡಿಸಲು ದಲಿತ ಮುಖಂಡರ ಜೊತೆ ನಾನು ಈಗಾಗಲೇ ಸಭೆ ಮಾಡಿದ್ದೇನೆ' ಎಂದೂ ತಿಳಿಸಿದರು.

'ಒಳ ಮೀಸಲಾತಿ ಜಾರಿ ನನ್ನ ಕನಸು'

ಒಳ ಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ಮಧ್ಯಂತರ ವರದಿಯಲ್ಲಿ, 'ಆರಂಭದಿಂದಲೂ ಒಳ ಮೀಸಲಾತಿ ಜಾರಿಗೆ ಬರಬೇಕೆಂಬುವುದು ನನ್ನ ಕನಸು. ಆ ಅವಕಾಶ ನನಗೆ ಸಿಕ್ಕಿದ್ದರೂ ದತ್ತಾಂಶ ಲಭ್ಯ ಇಲ್ಲದೇ ಇರುವ ಕಾರಣ ಶಿಫಾರಸು ಕೊಡಲು ನನ್ನಿಂದ ಆಗಿಲ್ಲ. ಈ ಪರಿಸ್ಥಿತಿ ನನಗೆ ತುಂಬಾ ಅಸಮಾಧಾನ ತಂದಿದೆ. ಆಯೋಗದ ಅಧ್ಯಕ್ಷನಾಗಿ ಸರ್ಕಾರದಿಂದ ನಾನು ಯಾವುದೇ ಗೌರವಧನ, ಸಂಭಾವನೆ, ವಾಹನ, ಇತರೆ ಸೌಲಭ್ಯಗಳನ್ನು ಪಡೆಯದಿರಲು ತೀರ್ಮಾನಿಸಿದ್ದೇನೆ.

ಎಚ್‌.ಎನ್‌. ನಾಗಮೋಹನ್‌ದಾಸ್, ನಿವೃತ್ತ ನ್ಯಾಯಮೂರ್ತಿ

ಸಮೀಕ್ಷೆಯ ಉಸ್ತುವಾರಿಗೆ ಸಮನ್ವಯ ಸಮಿತಿ

ಒಂದನೇ ಪುಟದಿಂದ...

ಜಿಲ್ಲಾ ಮತ್ತು ತಾಲ್ಲೂಕುಮಟ್ಟದ ಸಮಿತಿಗಳು ಪರಿಶಿಷ್ಟ ಜಾತಿಯ ಕುಟುಂಬಗಳ ಸಮೀಕ್ಷೆಯನ್ನು ಯಾವುದೇ ಲೋಪ ಇಲ್ಲದೆ ನಡೆಸಲು ಮೇಲುಸ್ತುವಾರಿ ವಹಿಸಿಕೊಂಡು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು. ಸಮೀಕ್ಷೆಯ ಮೇಲ್ವಿಚಾರಣೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮುಖ್ಯ ಶಿಕ್ಷಕರು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ನೇಮಿಸಲು ತೀರ್ಮಾನಿಸಲಾಗಿದೆ.

ಶಿಕ್ಷಣ

ವಿದ್ಯಾರ್ಥಿ ವೇತನ ಕೈಪಿಡಿ

ಇಂಟರ್‌ನ್ಯಾಷನಲ್ ಸ್ಕಾಲರ್‌ಶಿಪ್

ಎಜುಕೇಷನ್ ಫ್ಯೂಚರ್ ಇಂಟರ್‌ನ್ಯಾಷನಲ್ ಸ್ಕಾಲರ್‌ಶಿಪ್, ಜಗತ್ತಿನ ಯಾವುದೇ ಉನ್ನತ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವ ಭಾರತೀಯ ವಿದ್ಯಾರ್ಥಿಗಳಿಗೆ ಎಜುಕೇಷನ್ ಫ್ಯೂಚರ್ ಸಂಸ್ಥೆಯು ನೀಡುವ ಅವಕಾಶವಾಗಿದೆ.

ಅರ್ಹತೆ: ಅರ್ಜಿದಾರರು ಭಾರತದಿಂದ ಹೊರಗೆ, ಮಾನ್ಯತೆ ಇರುವ ಯಾವುದೇ ಸಂಸ್ಥೆಯಲ್ಲಿ ಪದವಿ/ ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಮಾಡುತ್ತಿರಬೇಕು. 10 ,12ನೇ ತರಗತಿಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು.

ಆರ್ಥಿಕ ಸಹಾಯ: ₹2 ರಿಂದ ₹10ಲಕ್ಷದವರೆಗಿನ ವಿದ್ಯಾರ್ಥಿವೇತನ.

ಅರ್ಜಿ ಸಲ್ಲಿಸಲು ಕೊನೆ ದಿನ: ವರ್ಷಪೂರ್ತಿ.

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: www.b4s.in/pjvi/EFIS5

ಸಿಡ್ನಿ ಸ್ಕಾಲರ್ಸ್ ಇಂಡಿಯಾ

ಸಿಡ್ನಿಯಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಅಧ್ಯಯನವನ್ನು ನಡೆಸಲು ಬಯಸುವ ಭಾರತೀಯ ವಿದ್ಯಾರ್ಥಿಗಳಿಗಾಗಿ ಯುನಿವರ್ಸಿಟಿ ಆಫ್ ಸಿಡ್ನಿ ನೀಡುವ ಅವಕಾಶವಾಗಿದೆ.

ಅರ್ಹತೆ: ಭಾರತೀಯ ನಾಗರಿಕರಿಗೆ ಲಭ್ಯವಿರುತ್ತದೆ. ಅರ್ಜಿದಾರರು ಯುನಿವರ್ಸಿಟಿ ಆಫ್ ಸಿಡ್ನಿಯಲ್ಲಿ ಪದವಿ ಅಥವಾ ಸ್ನಾತಕೋತ್ತರ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಿರಬೇಕು. ತಮ್ಮ ಅಧ್ಯಯನವು ಇನ್ನೂ ಆರಂಭಗೊಂಡಿರಬಾರದು.

ಅರ್ಹತೆ: ಶೇ100ರಷ್ಟು ಬೋಧನಾಶುಲ್ಕ.

ಅರ್ಜಿ ಸಲ್ಲಿಸಲು ಕೊನೆ ದಿನ: 25-05-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಮಾಹಿತಿಗೆ: Short Url: www.b4s.in/pjvi/SSIS4

ಎಸ್ಸೆಸ್ಸೆಲ್ಸಿ ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಸಮಾಜ ವಿಜ್ಞಾನ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

ಬಹುಆಯ್ಕೆ ಪ್ರಶ್ನೆಗಳು

I) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) 1453ರಲ್ಲಿ ಆಟೋಮಾನ್ ಟರ್ಕರು .... ನಗರವನ್ನು ವಶಪಡಿಸಿಕೊಂಡರು

ಎ) ಕಾನ್‌ಸ್ಟಾಂಟಿನೋಪಲ್ ಬಿ) ರೋಮ್
ಸಿ) ಕಾಬೂಲ್ ಡಿ) ಕರಾಚಿ

ಉತ್ತರ:– (ಎ) ಕಾನ್‌ಸ್ಟಾಂಟಿನೋಪಲ್

2) 1510ರಲ್ಲಿ ವಿಜಯಪುರದ ಸುಲ್ತಾನನಿಂದ ಗೋವಾ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಮಾಡಿಕೊಂಡವನು ಯಾರು?

ಎ) ವಾಸ್ಕೋಡಗಾಮ ಬಿ) ಆಲ್ಫನ್ಸೋ ಅಲ್ಬುಕರ್ಕ್
ಸಿ) ಫ್ರಾನ್ಸಿಸ್ಕೋ ಡಿ ಅಲ್ಮೇಡ ಡಿ) ಮೇಲಿನ ಯಾರೂ ಅಲ್ಲ

ಉತ್ತರ:– (ಬಿ)ಆಲ್ಫನ್ಸೋ ಅಲ್ಬುಕರ್ಕ್

3) ಪ್ರಾಚೀನ ಕಾಲದಿಂದಲೂ ಭಾರತ ಹಾಗೂ ಯುರೋಪಿನ ನಡುವೆ ವಾಣಿಜ್ಯ ಸಂಬಂಧಗಳು ಬೆಸೆದುಕೊಂಡಿದ್ದವು. ಪ್ರಮುಖವಾಗಿ ಭಾರತದ .... ವಸ್ತುಗಳಿಗೆ ಯೂರೋಪಿನಲ್ಲಿ ತುಂಬಾ ಬೇಡಿಕೆಯಿತ್ತು.

ಎ) ಸಾಂಬಾರು ಪದಾರ್ಥದ ಬಿ) ಎಣ್ಣೆ ಪದಾರ್ಥದ
ಸಿ) ಚಿನ್ನದ ಪದಾರ್ಥದ ಡಿ) ಬಟ್ಟೆಯ ಪದಾರ್ಥದ

ಉತ್ತರ:– (ಎ) ಸಾಂಬಾರು ಪದಾರ್ಥದ

4) ....ಅಂತಾರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗುವ ಮೂಲಕ 'ಯೂರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ' ಪರಿಗಣಿಸಲ್ಪಟ್ಟಿತು.

ಎ) ಕಾನ್‌ಸ್ಟಾಂಟಿನೋಪಲ್ ಬಿ) ಲಂಡನ್
ಸಿ) ಪ್ಯಾರಿಸ್ ಡಿ) ಬರ್ಲಿನ್

ಉತ್ತರ:– (ಎ) ಕಾನ್‌ಸ್ಟಾಂಟಿನೋಪಲ್

5) ಭಾರತದಲ್ಲಿ ಫ್ರೆಂಚ್‌ರು ತಮ್ಮ ಮೊದಲ ಮಳಿಗೆಯನ್ನು ಎಲ್ಲಿ ತೆರೆದರು?

ಎ) ಮಸಲಿ ಪಟ್ಟಣಂ ಬಿ) ಸೂರತ್
ಸಿ) ವಿಶಾಖ ಪಟ್ಟಣಂ ಡಿ) ಕೊಚ್ಚಿನ್

ಉತ್ತರ:– (ಬಿ) ಸೂರತ್

6) ಪೋರ್ಚುಗೀಸರ ನಾವಿಕ ವಾಸ್ಕೊಡಗಾಮನು ಭಾರತದ ಪಶ್ಚಿಮ ಕಲ್ಲಿಕೋಟೆಗೆ ಮೊತ್ತ ಮೊದಲ ಬಾರಿ ವ್ಯಾಪಾರದ ಉದ್ದೇಶಕ್ಕಾಗಿ ಬಂದಿಳಿದನು. ಅವನು ಭಾರತಕ್ಕೆ ಬಂದ ವರ್ಷ ಯಾವುದು?

ಎ) 1398 ಬಿ) 1488
ಸಿ) 1598 ಡಿ) 1498

ಉತ್ತರ:–(ಡಿ) 1498

7) ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ನಾಟಿಕ್ ಪ್ರದೇಶದ ನವಾಬ ....ನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡರು.

ಎ) ಅರ್ಜುನದೇವ ಬಿ) ಫರೂಕ್ ಸಿಯಾರ್
ಸಿ) ಅಕ್ಬರ್–2 ಡಿ) ಅನ್ವರುದ್ಧೀನ

ಉತ್ತರ:– (ಡಿ) ಅನ್ವರುದ್ಧೀನ

8) 1729 ರಿಂದ 1758ರ ವರೆಗೆ ವೈನಾಡನ್ನು ಆಳಿದ ಮಾರ್ತಾಂಡ ವರ್ಮ ತನ್ನ ಸುತ್ತಮುತ್ತಲಿನ ಸಂಸ್ಥಾನಗಳನ್ನು ಯಾರಿಂದ ರಕ್ಷಿಸಿದ್ದ?

ಎ) ಡಚ್ಚರು ಬಿ) ಇಂಗ್ಲಿಷರು
ಸಿ) ಫ್ರೆಂಚ್‌ರು ಡಿ) ಸ್ಪೇನ್

ಉತ್ತರ:– (ಎ) ಡಚ್ಚರು

9) ಬ್ರಿಟಿಷ್ ಭಾರತದ ಸೃಷ್ಟಿಗೆ ಕಾರಣನಾದ ಪ್ರಥಮ ಅಧಿಕಾರಿ ರಾಬರ್ಟ್‌ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ....ನಾಗಿ ಸೇವೆಗೆ ಸೇರಿದ್ದನು.

ಎ) ಸೇನಾಧಿಕಾರಿಯಾಗಿ ಬಿ) ಕಾರುಕೂನ
ಸಿ) ದಿವಾನ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಬಿ) ಕಾರುಕೂನ

10) ಬಂಗಾಲದಲ್ಲಿ ದ್ವಿ ಸರ್ಕಾರ ಪದ್ಧತಿ ಜಾರಿಗೆ ತಂದವನು ಯಾರು?

,ಎ) ರಾಬರ್ಟ್ ಕ್ಲೈವ್ ಬಿ) ಡೂಪ್ಲೆ
ಸಿ) ವಾಸ್ಕೋಡಿಗಾಮ ಡಿ) ಮೇಲಿನ ಯಾರೂ ಅಲ್ಲ

ಉತ್ತರ:–(ಎ) ರಾಬರ್ಟ್ ಕ್ಲೈವ್

11) ಬಕ್ಸಾರ್ ಕದನದಲ್ಲಿ ಮೊಘಲ್ ಚಕ್ರವರ್ತಿ ಷಾ ಅಲಂ, ಔಧ್‌ನ ನವಾಬ ಷೂಜ ಉದ್ದೌಲ ಮತ್ತು ಮೀರ್ ಖಾಸಿಮರ ತ್ರಿಮೈತ್ರಿಕೂಟದ ಸೈನ್ಯವು ಇಂಗ್ಲಿಷರ ವಿರುದ್ಧ ಹೋರಾಡಿ ಸೋತಿತು. ಈ ಘಟನೆ ನಡೆದ ವರ್ಷ ಯಾವುದು?

ಎ) 1734 ಬಿ) 1526
ಸಿ) 1764 ಡಿ) 1943

ಉತ್ತರ:–(ಸಿ) 1764

12) ಡೂಪ್ಲೆಯು 1746ರ ಮದ್ರಾಸ್ ಕದನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿ ಯಶಸ್ವಿಯಾಗಿದ್ದನು. ಫ್ರೆಂಚರು ಮತ್ತು ....ನಡುವಿನ ಸಂಘರ್ಷವು 1754ರವರೆಗೆ ನಡೆಯಿತು.

ಎ) ಡಚ್ಚರ ,ಬಿ) ಬ್ರಿಟಿಷರ
ಸಿ) ಪೋರ್ಚುಗೀಸರ ಡಿ) ಡ್ಯಾನಿಷರು

ಉತ್ತರ: (ಬಿ) ಬ್ರಿಟಿಷರ

13) 1453ರಲ್ಲಿ ಆಟೋಮಾನ್ ಟರ್ಕರು .... ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು.

ಎ) ವೆನ್ನಿಸ್ ಬಿ) ವ್ಯಾಟಿಕನ್
ಸಿ) ಕಾನ್‌ಸ್ಟಾಂಟಿನೋಪಲ್ ಡಿ) ಕಾಬೂಲ್

ಉತ್ತರ:–(ಸಿ) ಕಾನ್‌ಸ್ಟಾಂಟಿನೋಪಲ್

14) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಎಲ್ಲಿಗೆ ಬಂದು ತಲುಪಿದನು.?

ಎ) ತಿರುವನಂತಪುರ ಬಿ) ಕಾಪ್ಪಡ್
ಸಿ) ಕೊಚ್ಚಿನ್ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಬಿ) ಕಾಪ್ಪಡ್

15) ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' (Blue Water Policy)ಯನ್ನು ಯಾರು ಜಾರಿಗೆ ತಂದನು?

ಎ) ವಾಸ್ಕೊಡಗಾಮ ಬಿ) ಆಲ್ಫೋನ್ಸೊ–ಡಿ–ಅಲ್ಬುಕರ್ಕ್
ಸಿ) ಡೂಪ್ಲೆ ಡಿ) ಫ್ರಾನ್ಸಿಸ್ಕೊ ಡಿ ಆಲ್ಮೇಡ

ಉತ್ತರ:– (ಡಿ) ಫ್ರಾನ್ಸಿಸ್ಕೊ ಡಿ ಆಲ್ಮೇಡ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

PUC: MATHS

MATRICES

1. Write a brief note on matrix.

Ans:- A matrix is an ordered rectangular array of numbers or functions called elements, enclosed within brackets. They are denoted by capital letters A, B, C etc.,

For ex: $A=\begin{bmatrix}1 & 2 & 3\\ 4 & 5 & 6\end{bmatrix}$ is a matrix of 2 rows i.e., the horizontally arranged numbers and 3 columns i.e., the vertically arranged numbers.

The rows are denoted by 'm' and the columns are denoted by 'n', then the order of the matrix is said to be 'm x n' read as m cross n (or) m by n.

Therefore the order of the above matrix is 2 x 3.

In general the matrix is briefly denoted as $\left[a_{ij}\right]$; $i=1,2,\ldots\ldots m$ and $j=1,2,\ldots\ldots n$

Where 'i' represents the number of rows and 'j' represents the number of columns.

2. What is a unit matrix?

Ans:- The matrix of the form $\begin{bmatrix}1 & 0\\ 0 & 1\end{bmatrix}$ is called a unit matrix and is denoted by I.

3. What is a Row matrix?

Ans:- A matrix having only one row is called row matrix.

Eg: $[1 \;\; 2 \;\; 3]$ is a row matrix of order 1 x 3.

In general, $B=\left[b_{ij}\right]_{1\times n}$ is a row matrix of the order 1 x n.

4. What is a Column matrix?

Ans:- A matrix having only one column is called column matrix.

Eg: $\begin{bmatrix}1\\ 2\\ 3\end{bmatrix}$ is a column matrix of order 3 x 1.

In general, $A=\left[a_{ij}\right]_{m\times 1}$ is a column matrix of the order m x 1.

5. What is a Zero or Null matrix?

Ans:- A matrix in which all the elements are zeros is zero or null matrix and denoted by O.

Eg: $0=\begin{bmatrix}0 & 0 & 0\\ 0 & 0 & 0\end{bmatrix}$ is zero matrix of order 2 x 3

Problems:-

1. In the matrix $\begin{bmatrix}2 & 5 & 19 & -7\\ 35 & -2 & \frac{5}{2} & 12\\ \sqrt{3} & 1 & -5 & 17\end{bmatrix}$

Write: (a) the order of the matrix
(b) the number of elements
(c) write the elements a_{13}, a_{21}, a_{33}, a_{24}, a_{23}

Soln:- Given matrix is

$$\begin{bmatrix}2 & 5 & 19 & -7\\ 35 & -2 & \frac{5}{2} & 12\\ \sqrt{3} & 1 & -5 & 17\end{bmatrix}$$

Number of rows is 3; number of columns is 4;
Hence, the order of the matrix is 3 x 4.
The number of elements is 12.
The elements a_{13} is 19; a_{21} is 35; a_{33} is -5; a_{24} is 12; a_{23} is $\frac{5}{2}$

Answer the following:-

1. What is a rectangular matrix?

Ans:- A matrix in which the number of rows is not equal to the number of columns is called the rectangular matrix.

Eg:- **(1)** $A=\begin{bmatrix}a & h & g\\ -h & g & f\end{bmatrix}_{2\times 3}$

(2) $\begin{bmatrix}2 & 4\\ 5 & 6\\ 1 & 8\end{bmatrix}_{3\times 2}$

2. What is a Square matrix?

Ans:- A matrix in which the number of rows and the number of columns are equal is called Square matrix.

Eg:- $\begin{bmatrix}1 & 2 & 3\\ 4 & 5 & 6\\ 7 & 8 & 9\end{bmatrix}$ is the matrix of order 3.

3. What is a Diagonal matrix?

Ans:- A square matrix in which all the non – diagonal elements are equal to zero is said to be a diagonal matrix.

Eg:- $\begin{bmatrix}a & 0 & 0\\ 0 & b & 0\\ 0 & 0 & c\end{bmatrix}$ is a diagonal matrix

4. What is a scalar matrix?

Ans:- A diagonal matrix in which all the diagonal elements are equal is called a scalar matrix.

Eg:- $\begin{bmatrix}a & 0 & 0\\ 0 & a & 0\\ 0 & 0 & a\end{bmatrix}$ is a scalar matrix

5. Write a note on the Equality of matrices.

Ans:- The two matrices $A=\left[a_{ij}\right]$ and $B=\left[b_{ij}\right]$ are said to be equal if

(i) They are of the same order.
(ii) Each element of A is equal to the corresponding element of B, that is $a_{ij}=b_{ij}$ for all i and j.

$$\text{Eg}:-\; A=\begin{bmatrix}a & b\\ c & d\end{bmatrix} \text{ and } B=\begin{bmatrix}5 & 6\\ 8 & 2\end{bmatrix}$$

A = B only if $a=5, b=6, c=8$ & $d=2$

i.e., $a_{ij}=b_{ij}$ for each i and j

6. Write a brief note on the addition of two matrices.

Ans:- If A and B are matrices of the same order then A + B is defined to be a matrix obtained by adding the corresponding elements of A and B.

If A and B are matrices of the order m x n then A + B is also of the order m x n.

If $A=\left[a_{ij}\right]$; $B=\left[b_{ij}\right]$;

Wherein, i = 1, 2, 3.......m & j = 1, 2, 3........n then $A+B=\left[a_{ij}+b_{ij}\right]$;

$$\text{Eg}:-\text{If } A=\begin{bmatrix}2 & 5\\ 7 & 9\end{bmatrix} \;\&\; B=\begin{bmatrix}5 & 6\\ 8 & 2\end{bmatrix}$$

then A + B=?

$$\text{Soln}:-A+B=\begin{bmatrix}2+5 & 5+6\\ 7+8 & 9+2\end{bmatrix}=\begin{bmatrix}7 & 11\\ 15 & 11\end{bmatrix}$$

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

B. M. S. EDUCATIONAL TRUST, BENGALURU
"BUILD A BRIGHT FUTURE WITH US"

B.M.S. COLLEGE FOR WOMEN
Autonomous institution affiliated to Bengaluru City University,
NAAC Accredited thrice with 'A' Grade,
Recognised under 2 (f) & 12 (B) of the UGC act 1956

Late B.M. Sreenivasaiah
Founder, BMSCE

Late B.S. Narayana
Founder, BMSCW

LEGACY OF 61 YEARS

ADMISSIONS OPEN

UNDER GRADUATE PROGRAMS

COMMERCE & MANAGEMENT
• B.Com., Regular
• B.Com., Accounting & Finance
• B.Com., Business Data Analytics
• B.B.A. Regular

NATURAL & APPLIED SCIENCE
• B.C.A. Regular
• B.Voc. Information Technology
• B.Sc. PCM (Physics, Chemistry, Mathematics)
• B.Sc. PMCs (Physics, Mathematics, Computer Science)
• B.Sc. CZMb (Chemistry, Zoology, Microbiology)
• B.Sc. CBBt (Chemistry, Botany, Biotechnology)
• B.Sc. Clinical Nutrition & Dietetics

HUMANITIES & SOCIAL SCIENCES
• B.A. (HES) History, Economics, Sociology
• B.A. (PES) Psychology, Economics, Sociology
• B.A. (JPE) Journalism, Psychology, Optional English

POST GRADUATE PROGRAMS
• M.Com., Regular
• M.Sc., Mathematics
• M.Sc., Organic Chemistry

Application can be obtained from the respective colleges on all days (including all holidays) or downloaded from college website

B. M. S. PRE UNIVERSITY COLLEGE FOR WOMEN
'A' Grade Awarded by PU Board

COURSES OFFERED

SCIENCE
• P.C.M.B. (Physics, Chemistry, Mathematics, Biology)
• P.C.M.E. (Physics, Chemistry, Mathematics, Electronics)
• P.C.M.Cs.(Physics, Chemistry, Mathematics, Computer Science)

COMMERCE
• H.E.B.A. (History, Economics, Business Studies, Accountancy)
• S.E.B.A.(Statistics, Economics, Business Studies, Accountancy)
• M.E.B.A. (Basic Maths, Economics, Business Studies, Accountancy)
• M.S.B.A. (Basic Maths, Statistics, Business Studies, Accountancy)
• C.S.B.A. (Computer Science, Statistics, Business Studies, Accountancy)

ARTS
• H.E.P.S. (History, Economics, Political Science, Sociology)
• H.E.P.P. (History, Economics, Political Science, Psychology)

TOPPERS OF II PUC ANNUAL EXAMINATION MARCH - 2025

Ms. Anvita R
MSBA (591 / 600)
State 9th Rank

No of Distinctions : 131
Total No of Centrrums: 40
Pass Percentage : 90 %

Ms. Siri Manjunath Hebbar
SEBA (591 / 600)
State 9th Rank

Ms. Rushika G Adiga
HEPP (588 / 600)
State 10th Rank

CONTACT

BUGLE ROCK ROAD, BASAVANAGUDI, BENGALURU 560 004

+91-80-26601836/+91-80-26676729 / +919481237930 / +919481237933
enquiry@bmscw.edu.in,principal@bmscw.edu.in
www.bmscw.edu.in

91-80-26607833 | 7338367755 | 7338247755 | 9538137661
principalbmspucollege@gmail.com
www.bmspucw.com

CMR UNIVERSITY
BENGALURU | RECOGNISED BY UGC

APPLY NOW!

ADMISSIONS OPEN FOR AY 2025-26

Create the Future

LIMITED SEATS ON CONCESSIONAL FEE

SCHOOL OF ARCHITECTURE
B.Arch.

SCHOOL OF ENGINEERING & TECHNOLOGY
B.Tech.
• CSE • CSE(AI& ML) • CSE(Data Science)
• Computer Engg.* • CST* (With specialisation in AI & ML, Internet of Things)
• IT • ECE
M.Tech. (For Regular and Professionals)
• CSE • AI
Ph.D. CSE (AI & ML, Networking and Cloud Computing, Analytics, Cyber Security, Data Science & Internet of Things) • ECE • Mechanical Engineering

SCHOOL OF DESIGN
B.Des.
• Communication Design • Product Design
• Fashion Design • Interior Design
B.Sc.
• Sound Engineering
• Visual Effects & Animation

SCHOOL OF LIBERAL STUDIES
B.A. (Major + Minor)
B.Sc. | Psychology
M.Sc. | Psychology
• Clinical • Counselling • Human Resource Development and Management
Ph.D.
• Psychology

SCHOOL OF ECONOMICS & COMMERCE
B.Com.
• International Accounting & Finance (ACCA, UK)
• Professional - CA Integrated • Data Science
• Certified Management Accountant (US CMA)
Ph.D.
• Economics • Commerce

SCHOOL OF LEGAL STUDIES
B.A., LL.B. (Hons.)
B.B.A., LL.B. (Hons.)
LL.B.
LL.M. | Constitutional Law • Commercial Law
• Criminal Law

SCHOOL OF SCIENCE & COMPUTER STUDIES
BCA
• Cloud Computing • Data Science
• Game Development • AI & ML NEW
B.Sc. • IT
M.Sc. • IT in Data Science
MCA
Ph.D. | Computer Application

SCHOOL OF MANAGEMENT
BBA
• Digital Marketing • Business Analytics
• Fintech NEW • Data Science NEW
• Logistics & Supply Chain Management NEW
• Tourism & Hospitality Management NEW
MBA with Dual Specialisation
MBA | Business Analytics & Business Intelligence
MBA | Technology Management NEW
Executive MBA | Product Leadership
Ph.D. | Management

• Up to 100% scholarship on tuition fee*
• Semester wise payment option
• Interest free education loan (EMI option*)
• Hostel facility for boys & girls
• Transport facility*
*T&C apply

We honour JEE, COMEDK, CUET, KCET and other state / National-level tests. Direct admission for CUET students

PROVIDING OPPORTUNITIES TO GET SCHOLARSHIPS WORTH ₹12 CRORES*

93429 00666
admissions@cmr.edu.in
www.cmr.edu.in

Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043

❦ ಸುಭಾಷಿತ ❦

ಹೇಳುವವರಿಗಿಂತ ಹೇಳಿದಂತೆ ನಡೆಯುವವರ ಯೋಗ್ಯತೆ ಹೆಚ್ಚಿನದು. –ಗಳಗನಾಥ

ನ್ಯಾಯಾಂಗದ ಬಗ್ಗೆ ಧನಕರ್ ಮಾತು ಸಂಘಟಿತ ರಾಜಕೀಯ ಆಕ್ರಮಣವೇ?

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ದೇಶದ ನ್ಯಾಯಾಂಗವನ್ನು ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿರುವುದು ಯಾವ ರೀತಿಯಿಂದಲೂ ಸರಿಯಲ್ಲ. ಅದು ಅವರು ಹೊಂದಿರುವ ಸಾಂವಿಧಾನಿಕ ಹುದ್ದೆಗೆ ಇರುವ ಜವಾಬ್ದಾರಿಗಳನ್ನು ಉಲ್ಲಂಘಿಸುವುದಕ್ಕೆ ಸಮನಾಗಿದೆ. ಶಾಸಕಾಂಗ ಹಾಗೂ ಕಾರ್ಯಾಂಗದ ಪಾತ್ರವನ್ನು ನ್ಯಾಯಾಂಗವು ಬಲಪ್ರಯೋಗದ ಮೂಲಕ ತಾನೇ ನಿರ್ವಹಿಸುತ್ತಿದೆ ಎಂದು ಅವರು ಆರೋಪಿಸಿದ್ದಾರೆ. ರಾಜ್ಯಪಾಲರು ರಾಷ್ಟ್ರಪತಿಯವರ ಪರಿಶೀಲನೆಗೆ ಕಳುಹಿಸುವ ಮಸೂದೆಗಳ ವಿಚಾರವಾಗಿ ರಾಷ್ಟ್ರಪತಿಯವರು ಕಾಲಮಿತಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಈಚೆಗೆ ನೀಡಿರುವ ತೀರ್ಪು ಅವರ ಈಗಿನ ಮಾತುಗಳಿಗೆ ಕಾರಣವಾಗಿ ಒದಗಿಬಂದಿದೆ. ಧನಕರ್ ಅವರ ಪ್ರಕಾರ, ನ್ಯಾಯಾಂಗವು ರಾಷ್ಟ್ರಪತಿಯವರಿಗೆ ನಿರ್ದೇಶನ ನೀಡುವಂತಿಲ್ಲ, 'ಸಂಸತ್ತಿಗೂ ಮಿಗಿಲಾಗಿ' ವರ್ತಿಸುವಂತೆ ಇಲ್ಲ. ನ್ಯಾಯಾಂಗಕ್ಕೆ ಉತ್ತರದಾಯಿತ್ವ ಇಲ್ಲ, ಏಕೆಂದರೆ ದೇಶದ ಕಾನೂನು ಅದಕ್ಕೆ ಅನ್ವಯವಾಗುತ್ತಿಲ್ಲ ಎಂದು ಕೂಡ ಅವರು ಆರೋಪಿಸಿದ್ದಾರೆ. ಇವೆಲ್ಲ ಬಹಳ ಕಟುವಾದ ಮಾತುಗಳು. ದೇಶದ ವ್ಯವಸ್ಥೆಯಲ್ಲಿ ಬಹಳ ಉನ್ನತವಾದ ಸ್ಥಾನವನ್ನು ಹೊಂದಿರುವ ವ್ಯಕ್ತಿ ಈ ಮಾತು ಆಡಿರುವ ಕಾರಣಕ್ಕೆ, ಮಾತುಗಳು ಬಹಳ ಪ್ರಮುಖವಾಗುತ್ತವೆ.



ಧನಕರ್ ಅವರು ತಾವು ಹೊಂದಿರುವ ಸ್ಥಾನಕ್ಕೆ ಇರುವ ಅಧಿಕಾರ ವ್ಯಾಪ್ತಿಯನ್ನು ಮೀರಿ ವರ್ತಿಸಿದ್ದಾರೆ. ಅವರಿಂದ ಇತರ ಕೆಲವರು ಪ್ರೇರಣೆ ಪಡೆದಂತಿದೆ

ಧನಕರ್ ಅವರು ನ್ಯಾಯಾಂಗವನ್ನು ಉದ್ದೇಶಿಸಿ ಆಡಿರುವ ಮಾತುಗಳಲ್ಲಿ ಬಹಳ ಆಘಾತಕಾರಿ ಆಗಿರುವಂಥದ್ದು, ಸಂವಿಧಾನದ 142ನೇ ವಿಧಿಯ ಕುರಿತಾಗಿ ಆಡಿದ ಮಾತು. ಈ ವಿಧಿಯ ಅಡಿಯಲ್ಲಿ ತನಗೆ ಇರುವ ಅಧಿಕಾರವನ್ನು ಬಳಸಿರುವ ಸುಪ್ರೀಂ ಕೋರ್ಟ್, ರಾಷ್ಟ್ರಪತಿ ಮತ್ತು ರಾಜ್ಯಪಾಲರಿಗೆ ಮಸೂದೆಗಳ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರವಾಗಿ ಕಾಲಮಿತಿ ನಿಗದಿ ಮಾಡಿದೆ. ಈ ವಿಧಿಯು 'ಪ್ರಜಾತಾಂತ್ರಿಕ ಶಕ್ತಿಗಳ ವಿರುದ್ಧದ ಅಣ್ವಸ್ತ್ರ ಕ್ಷಿಪಣಿ' ಎಂದು ಅವರು ವ್ಯಾಖ್ಯಾನಿಸಿದ್ದಾರೆ. ಧನಕರ್ ಅವರು 'ಸಂವಿಧಾನಕ್ಕೆ ಬದ್ಧವಾಗಿ ಇರುವುದಾಗಿ' ಪ್ರಮಾಣ ಮಾಡಿ ಉಪರಾಷ್ಟ್ರಪತಿ ಹುದ್ದೆಗೆ ಬಂದಿದ್ದಾರೆ. ಆದರೆ, ಸಂವಿಧಾನದ ಭಾಗವೇ ಆಗಿರುವ 142ನೇ ವಿಧಿಯನ್ನು ಈ ಪರಿಯಲ್ಲಿ, ಅತ್ಯಂತ ಕಟುವಾದ ಪದಗಳನ್ನು ಬಳಸಿ ಟೀಕಿಸಿರುವುದು ಅವರು ಸ್ವೀಕರಿಸಿದ ಪ್ರತಿಜ್ಞೆಯ ಉಲ್ಲಂಘನೆಯಂತೆ ಇದೆ. ಕಾನೂನಿನ ಮಹತ್ವದ ಪ್ರಶ್ನೆಗಳನ್ನು ಇತ್ಯರ್ಥಪಡಿಸುವ ಸುಪ್ರೀಂ ಕೋರ್ಟ್‌ನ ಪೀಠದಲ್ಲಿ ಯಾರಿರಬೇಕು ಎಂಬುದನ್ನು ಹೇಳುವ 145(3)ನೇ ವಿಧಿಗೆ ತಿದ್ದುಪಡಿ ಆಗಬೇಕು ಎಂದೂ ಅವರು ಹೇಳಿದ್ದಾರೆ. ಸುಪ್ರೀಂ ಕೋರ್ಟ್ ಹೇಗೆ ಕಾರ್ಯನಿರ್ವಹಿಸಬೇಕು ಎಂದು ಸಂವಿಧಾನದಲ್ಲಿ ಹೇಳಿರುವುದನ್ನು ಅವರು ಟೀಕಿಸುತ್ತಿರುವುದು ಆಶ್ಚರ್ಯ ಮೂಡಿಸುವಂತಿದೆ. ಸಂವಿಧಾನವು ದೇಶದ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಕ್ಕೆ ನಿರ್ದಿಷ್ಟ ಹೊಣೆಗಾರಿಕೆಯನ್ನು ವಹಿಸಿದೆ. ಕಾರ್ಯಾಂಗ ಮತ್ತು ಶಾಸಕಾಂಗದ ಕೆಲಸಗಳನ್ನು ಪರಿಶೀಲನೆಗೆ ಒಳಪಡಿಸುವ ಅಧಿಕಾರವನ್ನು ಅದು ನ್ಯಾಯಾಂಗಕ್ಕೆ ನೀಡಿದೆ. ರಾಷ್ಟ್ರಪತಿ ಕೂಡ ಸಂವಿಧಾನಕ್ಕೆ ಅತೀತರಲ್ಲ. ನ್ಯಾಯಾಲಯವು ಸಂವಿಧಾನ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸಿದೆ, ಅಷ್ಟೇ. ಈ ಅಧಿಕಾರ ಚಲಾಯಿಸಿದ್ದನ್ನು ಧನಕರ್ ಅವರು ಪ್ರಶ್ನಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ತೀರ್ಪುಗಳನ್ನು ಟೀಕಿಸುವುದು, ಅದರ ಬಗ್ಗೆ ಅಭಿಪ್ರಾಯ ಹೇಳುವುದು ತಪ್ಪಲ್ಲ. ಆದರೆ ಸಾಂವಿಧಾನಿಕವಾಗಿ ಬಹಳ ಉನ್ನತವಾದ ಸ್ಥಾನ ಹೊಂದಿರುವ ವ್ಯಕ್ತಿಯೊಬ್ಬರು ಸಾರ್ವಜನಿಕವಾಗಿ ಇಷ್ಟೊಂದು ಕಟುವಾದ ಪದಗಳನ್ನು ಬಳಸಿ ನ್ಯಾಯಾಂಗದ ಕೆಲಸಗಳನ್ನು ವಿಮರ್ಶೆಗೆ ಗುರಿಪಡಿಸಬೇಕೇ ಎಂಬುದು ಚರ್ಚಾರ್ಹ. ವಿಮರ್ಶೆಯ ಹಂತವನ್ನೂ ದಾಟಿರುವ ಧನಕರ್ ಅವರು ನ್ಯಾಯಾಂಗದ ಪ್ರಕ್ರಿಯೆಗಳನ್ನು, ಸಂವಿಧಾನವನ್ನು ಕೂಡ ಟೀಕಿಸಿದ್ದಾರೆ.

ಧನಕರ್ ಅವರು ಮತ್ತೆ ಮತ್ತೆ ತಪ್ಪು ಮಾಡುತ್ತಿರುವ ವ್ಯಕ್ತಿ. ಹಿಂದೆ ಅವರು, ಸಂಸತ್ತು ರೂಪಿಸಿದ ಕಾನೂನನ್ನು ಅಸಿಂಧುಗೊಳಿಸುವ ನ್ಯಾಯಾಂಗದ ಅಧಿಕಾರವನ್ನು ಪ್ರಶ್ನಿಸಿದ್ದರು. ಸಂವಿಧಾನದ ಮೂಲ ಸ್ವರೂಪದ ತಾತ್ವಿಕತೆಯ ಬಗ್ಗೆಯೂ ಅವರು ಅನುಮಾನಗಳನ್ನು ವ್ಯಕ್ತಪಡಿಸಿದ್ದರು. ಅವರು ತಾವು ಹೊಂದಿರುವ ಸ್ಥಾನಕ್ಕೆ ಇರುವ ಅಧಿಕಾರ ವ್ಯಾಪ್ತಿಯನ್ನು ಮೀರಿ ವರ್ತಿಸಿದ್ದಾರೆ. ಅವರಿಂದ ಇತರ ಕೆಲವರು ಪ್ರೇರಣೆ ಪಡೆದಂತಿದೆ. ಹಾಗೆ ಪ್ರೇರಣೆ ಪಡೆದವರ ಮಾತುಗಳು ದೇಶದ ನ್ಯಾಯಾಂಗದ ಮೇಲಿನ ಸಂಘಟಿತ ರಾಜಕೀಯ ಆಕ್ರಮಣದ ರೂಪ ಪಡೆಯುತ್ತಿವೆ.

ದಿನದ ಟ್ವೀಟ್

ಮಾನವೀಯತೆಗೆ ಸಿಕ್ಕ ಜಯ

ನಿನ್ನ ಧೈರ್ಯದ ಕಾರ್ಯ ನಿಜಕ್ಕೂ ಶ್ಲಾಘನೀಯ ಸಹೋದರ. ಅಂತಹ ನಿರ್ಣಾಯಕ ಕ್ಷಣಗಳಲ್ಲಿ ಬಹುತೇಕರಿಗೆ ಏನು ಮಾಡಬೇಕೆಂದು ತೋಚದೆ, ಅವರ ಮನಸ್ಸು ಸಂಪೂರ್ಣ ಸ್ತಬ್ಧವಾಗಿಹೋಗಿರುತ್ತದೆ. ಆದರೆ ನೀನು ಆ ಮಗುವನ್ನು ಕಾಪಾಡುವ ಮೂಲಕ ನಿಜವಾದ ಸಾಹಸ ಮತ್ತು ಮಾನವೀಯತೆ ಮೆರೆದಿದ್ದೀಯೆ... ಮತ್ತೊಂದು ಅಮಾಯಕ ಜೀವ ಬಲಿಯಾಗುವುದಕ್ಕೆ ಮುನ್ನ, ವಿದ್ಯುತ್ ಮಂಡಳಿ ಮತ್ತು ನಗರಪಾಲಿಕೆಯ ಅಂತಹ ಅಪಾಯಕಾರಿ ನಿರ್ಲಕ್ಷ್ಯದ ವಿರುದ್ಧ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಲಿ... #RealHero

(ಚೆನ್ನೈನಲ್ಲಿ ನಿಂತಿದ್ದ ಮಳೆ ನೀರಿನಡಿ, ಭೂಗತ ಕೇಬಲ್‌ನಿಂದ ಪ್ರವಹಿಸುತ್ತಿದ್ದ ವಿದ್ಯುತ್ ಸಂಪರ್ಕಕ್ಕೆ ಬಂದಿದ್ದ ಶಾಲಾ ಬಾಲಕನ ರಕ್ಷಣೆಗೆ ಧಾವಿಸಿ, ಆತನನ್ನು ಕಾಪಾಡಿದ ಯುವಕ ಕಣ್ಣನ್ ತಮಿಳ್‌ಸೆಲ್ವನ್ ಕೃತ್ಯಕ್ಕೆ ಶ್ಲಾಘನೆ)

ಮಂಚು

ಕಿಡಿನುಡಿ

ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳಿಗಾಗಿ ನಾವು ಹೋರಾಡುತ್ತೇವೆ. ಆದರೆ ನಾವು ಹೋರಾಡಬೇಕಾಗಿರುವುದು ಮೂಲ ಸೌಕರ್ಯ, ಆರೋಗ್ಯ ಸೇವೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ.

ಸಂತೋಷ್ ಠಾಕೂರ್

25 ವರ್ಷಗಳ ಹಿಂದೆ

ಶುಕ್ರವಾರ, 21-4-2000

• ತಮಿಳು ಮಾಧ್ಯಮ ಕಡ್ಡಾಯ ಆದೇಶ ಅಸಿಂಧು: ಹೈಕೋರ್ಟ್

ಚೆನ್ನೈ, ಏ. 20 (ಪಿಟಿಐ)– ತಮಿಳುನಾಡಿನ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ತಮಿಳು ಭಾಷೆಯಲ್ಲೇ ಬೋಧನೆ ನಡೆಸಬೇಕು ಎಂದು ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಮದ್ರಾಸ್ ಹೈಕೋರ್ಟ್ ಇಂದು ತಳ್ಳಿಹಾಕಿದೆ.

ತಮಿಳುನಾಡು ಸರ್ಕಾರವು 1999ರ ನವೆಂಬರ್ 19ರಂದು ಈ ಆದೇಶ ಹೊರಡಿಸಿತ್ತು. 2000–2001ನೇ ಶೈಕ್ಷಣಿಕ ವರ್ಷದಿಂದ ಹಂತಹಂತವಾಗಿ ಒಂದರಿಂದ ಐದನೇ ತರಗತಿತನಕ ತಮಿಳು ಮಾಧ್ಯಮ ಕಡ್ಡಾಯ ಎಂದು ಈ ಆದೇಶದಲ್ಲಿ ತಿಳಿಸಲಾಗಿತ್ತು. 'ಆದೇಶವು ಅವಿವೇಕ, ಅಸ್ಪಷ್ಟ, ಏಕಪಕ್ಷೀಯ ಹಾಗೂ ಸಂವಿಧಾನ ವಿರೋಧಿ' ಎಂದು ಹೈಕೋರ್ಟ್ ಹೇಳಿ ಆದೇಶವನ್ನು ತಳ್ಳಿಹಾಕಿತು.

• ಶಾಲಾ ವಂತಿಗೆ: ನಿಲ್ಲದ ಹಗಲುದರೋಡೆ ಸರ್ಕಾರಿ ಆಜ್ಞೆ ಕಡತದಲ್ಲಿ

ಬೆಂಗಳೂರು, ಏ. 20– ಸರ್ಕಾರಿ ಆಜ್ಞೆಗೆ ಕವಡೆ ಕಾಸಿನ ಬೆಲೆಯನ್ನೂ ನೀಡದ ನಗರದ ಬಹುತೇಕ ಖಾಸಗಿ ಶಿಕ್ಷಣ ಸಂಸ್ಥೆಗಳು, ಎಂದಿನಂತೆ ಈ ವರ್ಷವೂ ಪಾಲಕರಿಂದ ಮಿತಿಮೀರಿದ ವಂತಿಗೆ ಸ್ವೀಕರಿಸುವುದನ್ನು ಮುಂದುವರಿಸಿವೆ.

ಜತೆಗೆ, ಏಪ್ರಿಲ್‌ಗೆ ಮೊದಲೇ ಪ್ರಾಥಮಿಕ ಹಂತದ ಪ್ರವೇಶ ಪ್ರಕ್ರಿಯೆ ಮುಗಿಸಬಾರದು ಎಂಬ ಆಜ್ಞೆಯನ್ನೂ ಗಾಳಿಗೆ ತೂರಿರುವ ಬಹುಪಾಲು ಖಾಸಗಿ ಶಾಲಾ ಆಡಳಿತ ಮಂಡಳಿಗಳು, ಏಪ್ರಿಲ್‌ಗೆ ಮೊದಲೇ ಎಲ್‌ಕೆಜಿ ಮತ್ತು ಯುಕೆಜಿ ಪ್ರವೇಶ ಮುಗಿಸಿವೆ.

ಹೀಗಾಗಿ, ಮಾರ್ಚ್– ಏಪ್ರಿಲ್ ತಿಂಗಳಲ್ಲಿ ವರ್ಗವಾಗಿ ಇಲ್ಲಿಗೆ ಬಂದಿರುವ ಪಾಲಕರು ಕಂಗಾಲಾಗುವ ಸ್ಥಿತಿ ನಿರ್ಮಾಣವಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 21-4-1975

• ಭೂಸುಧಾರಣೆ ಶಾಸನದ ವಿರುದ್ಧ ಮಹಿಳೆಯರ ನಿರಶನ ಅಂತ್ಯ

ಬೆಂಗಳೂರು, ಏ. 20– ರಾಜ್ಯದ ಮಹಿಳಾ ಭೂ ರಕ್ಷಣಾ ಕ್ರಿಯಾ ಸಮಿತಿಯವರು ವಿಧಾನಸೌಧದ ಬಳಿ ನಡೆಸುತ್ತಿದ್ದ ಉಪವಾಸ ಸತ್ಯಾಗ್ರಹವು ನಾಲ್ಕನೇ ದಿನವಾದ ಇಂದು ಮುಕ್ತಾಯವಾಯಿತು.

ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳಿಗೆ, ಅವಿವಾಹಿತ ಮಹಿಳೆಯರಿಗೆ ಹಾಗೂ ವಿಧವೆಯರಿಗೆ ಭೂಸುಧಾರಣಾ ಕಾಯ್ದೆಯಲ್ಲಿ ನ್ಯಾಯ ದೊರಕಿಸಿಕೊಡುವಂತೆ ಅವರು ಕಳೆದ ಗುರುವಾರದಿಂದ ಸತ್ಯಾಗ್ರಹ ಹೂಡಿದ್ದರು.

ಅಖಿಲ ಭಾರತ ಮಹಿಳಾ ಕಾನ್ಫರೆನ್ಸ್, ಕರ್ನಾಟಕ ರೈತ ಹಾಗೂ ರೈತಕಾರ್ಮಿಕ ಸಂಘಗಳು ಮಹಿಳೆಯರ ಹೋರಾಟಕ್ಕೆ ಬೆಂಬಲ ನೀಡಿ, ಚಳವಳಿಯನ್ನು ತಾವು ಮುಂದುವರಿಸುವುದಾಗಿ ಹೇಳಿ ನಿರಶನ ಕೈಬಿಡಲು ಸತ್ಯಾಗ್ರಹಿಗಳಿಗೆ ಮನವಿ ಮಾಡಿದ್ದವು.

• ಘಾತಕ ಶಕ್ತಿಗಳ ವಿರುದ್ಧ ಮಾತ್ರ 'ಮಿಸಾ'

ನವದೆಹಲಿ, ಏ. 20– ಸಮಾಜಘಾತಕ ಮತ್ತು ರಾಷ್ಟ್ರಘಾತಕ ಶಕ್ತಿಗಳ ವಿರುದ್ಧ ಮಾತ್ರವೇ 'ಮಿಸಾ'ವನ್ನು ಬಳಸಬೇಕು ಹೊರತು, ನ್ಯಾಯಬದ್ಧ ರಾಜಕೀಯ ಚಟುವಟಿಕೆಗಳ ವಿರುದ್ಧ ಅಲ್ಲ ಎಂಬುದನ್ನು ಖಚಿತಪಡಿಸುವ ದೃಷ್ಟಿಯಿಂದ, ಕೇಂದ್ರ ಸರ್ಕಾರವು ರಾಜ್ಯಗಳ ಜತೆ ಇಷ್ಟರಲ್ಲೇ ಚರ್ಚೆ ಆರಂಭಿಸಲಿದೆ.

'ಉಪವಾಸವನ್ನು ನಿಲ್ಲಿಸುವ ಮುನ್ನ ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷ ಮೊರಾರ್ಜಿ ದೇಸಾಯಿ ಅವರಿಗೆ ಮಿಸಾವನ್ನು ಸರಿಯಾಗಿ ಬಳಸುವ ಬಗ್ಗೆ ನೀಡಿದ ಆಶ್ವಾಸನೆಯ ಅನುಸಾರ ಏನು ಕ್ರಮ ಕೈಗೊಳ್ಳಲಾಗಿದೆ' ಎಂದು ಗೃಹ ಸಚಿವ ಕೆ. ಬ್ರಹ್ಮಾನಂದ ರೆಡ್ಡಿ ಸುದ್ದಿಗಾರರಿಗೆ ತಿಳಿಸಿದರು.

ದೌರ್ಬಲ್ಯ– ಪ್ರಾಬಲ್ಯದ ನಡುವೆ ಸಿಲುಕಿದ ಜಾತಿ ಜನಗಣತಿ ಫಲಿತಾಂಶ

ಆತ್ಮಶೋಧನೆಗೆ ಹಿಂದುಳಿದವರಿಗೆ ಅವಕಾಶ

ಅನುರಣನ

ನಾರಾಯಣ ಎ.

ವಿರೋಧಾಭಾಸ ಎಂದರೆ ಇದು. ಕರ್ನಾಟಕದಲ್ಲಿ ಹತ್ತು ವರ್ಷಗಳ ಹಿಂದೆ ನಡೆದ ಜಾತಿ ಜನಗಣತಿಯ ಉದ್ದೇಶವು ಹಿಂದುಳಿದ ವರ್ಗಕ್ಕೆ ಸೇರಿದ ಜಾತಿಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯು ಇನ್ನುಳಿದ ಜಾತಿಗಳಿಗೆ ಹೋಲಿಸಿದರೆ ಯಾವ ಮಟ್ಟದಲ್ಲಿದೆ ಎಂದು ಕಂಡುಕೊಳ್ಳುವುದಾಗಿತ್ತು. ರಾಜ್ಯದ ಶೇಕಡ 90ರಷ್ಟು ಜನರಿಂದ ಸಂಗ್ರಹಿಸಿದ ಈ ವಿವರಗಳು ಸೋರಿಕೆಯಾದ ನಂತರ ಈಗ ನಡೆಯುತ್ತಿರುವುದು ಮುಂದುವರಿದಿರುವ ಜಾತಿಗಳ ಜನಸಂಖ್ಯೆಯ ನಿಖರತೆಯ ಕುರಿತಾದ ಅಬ್ಬರದ ಚರ್ಚೆ!

ಯಾವ ಹಿಂದುಳಿದ ವರ್ಗಗಳ ಸಲುವಾಗಿ ಈ ಗಣತಿ ನಡೆಸಲಾಯಿತೋ ಅವರು ಕೂಡ ಕರ್ನಾಟಕದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಪ್ರಗತಿಯಲ್ಲಿ ತಮಗೆ ದಕ್ಕಿದ್ದೆಷ್ಟು, ತಮ್ಮಿಂದ ವಂಚಿಸಲ್ಪಟ್ಟದ್ದೆಷ್ಟು ಎನ್ನುವುದನ್ನು ಅರಿಯುವ ಕುತೂಹಲ ತೋರುವ ಬದಲಿಗೆ, ಪ್ರಬಲರ ಸಂಖ್ಯಾ ಚದುರಂಗದಾಟದಲ್ಲಿ ಕಳೆದುಹೋಗುತ್ತಿದ್ದಾರೆ.

ಕರ್ನಾಟಕ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ನಡೆಸಿದ ಜಾತಿ ಜನಗಣತಿಯ ವರದಿಯ ಸುತ್ತ ಮೂರು ವಿಷಯಗಳಿವೆ. ಒಂದು, ವಿವಿಧ ಜಾತಿಗಳಲ್ಲಿ ಇರುವ ಜನರ ಸಂಖ್ಯೆ. ಎರಡನೆಯದು, ವಿವಿಧ ಜಾತಿಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಹೇಗಿದೆ ಎನ್ನುವ ಬಹುಮುಖ್ಯ ವಿವರ. ಮೂರನೆಯದು, ಈ ಎರಡು ಅಂಶಗಳನ್ನು ಆಧರಿಸಿ ಪರಿಷ್ಕರಿಸಲಾದ ಮೀಸಲಾತಿ ಪ್ರಮಾಣದ ಪ್ರಸ್ತಾವ. ಈ ಮೂರರ ಪೈಕಿ ಮುಖ್ಯ ವಿಚಾರ, ಅಂದರೆ ಹಿಂದುಳಿದ ವರ್ಗಗಳ ಸ್ಥಿತಿಗತಿ ಮತ್ತು ಮೀಸಲಾತಿಗೆ ಸಂಬಂಧಿಸಿದ ಶಿಫಾರಸು ಕುರಿತ ವಿಚಾರ ಬದಿಗೆ ಸರಿದಿದೆ. ಜಾತಿವಾರು ಅಂಕಿ ಅಂಶಗಳ ವೈಜ್ಞಾನಿಕತೆಯ ಪ್ರಶ್ನೆಯೇ ದೊಡ್ಡದಾಗಿ ಬಿಟ್ಟಿದೆ. ಹಾಗಾಗಿ, ಈ ಪ್ರಶ್ನೆಗೆ ಉತ್ತರಿಸಿಯೇ ಮುಂದುವರಿಯುವುದು ಕ್ಷೇಮ.

ಅಷ್ಟಕ್ಕೂ ವೈಜ್ಞಾನಿಕ ಎಂದರೆ ಏನು? ಯಾವುದೇ ವಿಧಾನವನ್ನು ಬಳಸಿ ಮರುಪರಿಶೀಲನೆಗೆ ಒಳಪಡಿಸಿದರೂ ಬದಲಾಗದೇ ಉಳಿಯುವ ಸತ್ಯವನ್ನು ಮಾತ್ರ ಸತ್ಯ ಅಂತ ಒಪ್ಪಿಕೊಳ್ಳುವುದನ್ನೇ ವೈಜ್ಞಾನಿಕ ಎನ್ನುವುದು. ಹಾಗಾಗಿ, ಸರ್ಕಾರದ ಬಳಿ ಈಗ ಇರುವ ಮಾಹಿತಿಯನ್ನು ಹಳ್ಳಿಹಳ್ಳಿಗಳಲ್ಲಿ, ವಾರ್ಡ್‌ವಾರ್ಡ್‌ಗಳಲ್ಲಿ ಪಾರದರ್ಶಕವಾಗಿ, ಪ್ರಶ್ನೆ ಎತ್ತಿದವರ ಸಮ್ಮುಖದಲ್ಲೇ ವಾಸ್ತವ ಸ್ಥಿತಿಗೆ ತಾಳೆ ಮಾಡಿ ಪರಿಶೀಲಿಸುವುದು ವೈಜ್ಞಾನಿಕತೆಯ ಬಗ್ಗೆ ಎದ್ದಿರುವ ಗುಮಾನಿಗೆ ಉತ್ತರವಾಗಬಹುದೇನೊ.

ಇನ್ನು, ಗಣತಿ ಎಲ್ಲರನ್ನೂ ಒಳಗೊಂಡಿಲ್ಲ ಎನ್ನುವ ತಕರಾರು. ಗಣತಿ ಎಂದಮೇಲೆ ಒಂದಷ್ಟು ಭಾಗ ಹೊರಗುಳಿಯುವುದು ಸಹಜ. ಭಾರತ ಸರ್ಕಾರ ನಡೆಸಿದ 2011ರ ಜನಗಣತಿಯಲ್ಲೇ ಪ್ರತಿ ಸಾವಿರ ಜನಸಂಖ್ಯೆಯಲ್ಲಿ 23 ಮಂದಿ ಹೊರಗುಳಿದಿದ್ದಾರೆ ಅಂತ ಅಧಿಕೃತ ದಾಖಲೆಗಳು ಸ್ಪಷ್ಟವಾಗಿ ಹೇಳುತ್ತವೆ. ಹಾಗಾಗಿ, ಈ ತಕರಾರನ್ನು ಗಂಭೀರ ಅಂತ ಪರಿಗಣಿಸಬೇಕಿಲ್ಲ.

ಇವೆಲ್ಲವುಗಳಾಚೆಗೆ ಒಂದು ಗಂಭೀರ ಪ್ರಶ್ನೆ ಇದೆ. ಕರ್ನಾಟಕ ಈ ಗಣತಿ ನಡೆಸಿದ ಬಹಳ ಸಮಯದ ಬಳಿಕ, ಅಂದರೆ 2022ರಲ್ಲಿ ಬಿಹಾರ ಈ ಪ್ರಕ್ರಿಯೆಯನ್ನು ಪ್ರಾರಂಭಿಸಿ 2023ರಲ್ಲಿ ವರದಿ ಪ್ರಕಟಿಸಿತು. ಪಕ್ಕದ ತೆಲಂಗಾಣ 2024ರ ನವೆಂಬರ್‌ನಲ್ಲಿ ಪ್ರಾರಂಭಿಸಿ 2025ರ ಫೆಬ್ರುವರಿಯಲ್ಲಿ ವಿವರಗಳನ್ನು ಪ್ರಕಟಿಸಿತು. ಕರ್ನಾಟಕ ಹತ್ತು ವರ್ಷಗಳ ನಂತರವೂ ತಡವರಿಸುತ್ತಿರುವುದೇಕೆ? ಅಪೂರ್ಣತೆಯ ಮತ್ತು ಅವೈಜ್ಞಾನಿಕತೆಯ ಆಪಾದನೆಗಳು ಆ ರಾಜ್ಯಗಳಲ್ಲಿಯೂ ಇದ್ದವು. ಅಲ್ಲಿ ಸಾಧ್ಯವಾದದ್ದು ಕರ್ನಾಟಕದಲ್ಲಿ ಇಷ್ಟೊಂದು ಕಷ್ಟವಾಗುತ್ತಿರುವುದೇಕೆ? ಬಿಹಾರ ಮತ್ತು ತೆಲಂಗಾಣಕ್ಕಿಂತಲೂ ಕರ್ನಾಟಕದಲ್ಲಿ ಸರ್ಕಾರದ ಮೇಲೆ ಮತ್ತು ಸಮಾಜದ ಮೇಲೆ ಪ್ರಬಲ ಜಾತಿಗಳ ಹಿಡಿತ ಇನ್ನಷ್ಟು ಬಿಗುವಾಗಿದೆ ಎಂದು ಇದರ ಅರ್ಥವೇ? ಅಥವಾ ಹಿಂದುಳಿದ ಜಾತಿಗಳು ಇಲ್ಲಿ ದುರ್ಬಲವಾಗಿವೆಯೇ?

ಕರ್ನಾಟಕದಲ್ಲಿ ಹಿಂದುಳಿದ ಜಾತಿಗಳಿಗೆ ನ್ಯಾಯ ಒದಗಿಸುವ ಪ್ರತಿ ಪ್ರಯತ್ನವೂ ಇಂತಹ ಅಡೆತಡೆಗಳನ್ನು ಎದುರಿಸಿದೆ. ಕೊನೆಗೆ ಆಯಾ ಸಂದರ್ಭದಲ್ಲಿ ಅಧಿಕಾರದಲ್ಲಿದ್ದವರು ಪ್ರಬಲ ಜಾತಿಗಳನ್ನು ಓಲೈಸಿದ ನಂತರವೇ ಹಿಂದುಳಿದ ಜಾತಿಗಳ ಪರವಾಗಿ ಸಾಮಾಜಿಕ ನ್ಯಾಯದ ತಕ್ಕಡಿಯನ್ನು ಒಂದಷ್ಟು ಸರಿದೂಗಿಸಲು ಸಾಧ್ಯವಾಗಿದ್ದು. ಹಾವನೂರು ಆಯೋಗವು (1975) ಒಂದು ಪ್ರಬಲ ಜಾತಿಯನ್ನು ಮೀಸಲಾತಿಯಿಂದ ಹೊರಗಿಟ್ಟ ಕಾರಣಕ್ಕೆ ಹುಟ್ಟಿಕೊಂಡ ಪ್ರತಿರೋಧವು ಬಲಿಷ್ಠ ಮುಖ್ಯಮಂತ್ರಿ ದೇವರಾಜ ಅರಸು ಅವರನ್ನೇ ಅಲುಗಾಡಿಸಿತು. ಪರಿಣಾಮವಾಗಿ, ಮೀಸಲಾತಿ ಪಟ್ಟಿಯಿಂದ ಹೊರಗಿಟ್ಟವರನ್ನು ಮತ್ತೆ ಸೇರಿಸಿಕೊಳ್ಳಬೇಕಾಯಿತು. ಹಿಂದುಳಿದ ವರ್ಗಗಳ ಎರಡನೆಯ ಆಯೋಗ ಅಥವಾ ವೆಂಕಟಸ್ವಾಮಿ ಆಯೋಗವು (1986) ಈಗ ನಡೆಸಿದಂತೆ ಶೇ 90ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಒಳಗೊಂಡ ವಿಸ್ತೃತ ಅಧ್ಯಯನ ನಡೆಸಿ ವರದಿ ನೀಡಿದ್ದನ್ನು ಪ್ರಬಲ ಜಾತಿಗಳ ಒತ್ತಡದ ಕಾರಣಕ್ಕೆ ಸಂಪೂರ್ಣ ತಿರಸ್ಕರಿಸಬೇಕಾಯಿತು. ಹಿಂದುಳಿದ ವರ್ಗಗಳ ಮೂರನೇ ಆಯೋಗ ಅಥವಾ ಚಿನ್ನಪ್ಪ ರೆಡ್ಡಿ ಆಯೋಗವು ಹೊರಗಿಟ್ಟ ಜಾತಿಗಳನ್ನು ಮೀಸಲಾತಿ ಪಟ್ಟಿಗೆ ಮತ್ತೆ ಸೇರಿಸಿಕೊಳ್ಳುವಂತೆ ಮಾಡಿದ ಅಂದಿನ ಸರ್ಕಾರದ ರಾಜಿ ರಾಜಕೀಯಕ್ಕೆ ಹಿಂದುಳಿದ ವರ್ಗಗಳ ಹಿತಾಸಕ್ತಿ ಮತ್ತೆ ಬಲಿಯಾಯಿತು. ಈ ಮೂರು ಸಂದರ್ಭಗಳಲ್ಲೂ ಪ್ರಬಲ ಜಾತಿಗಳ ಪ್ರತಿರೋಧ ಹುಟ್ಟಿಕೊಂಡದ್ದು ಅವರನ್ನು ಮೀಸಲಾತಿಯಿಂದ ಕೈಬಿಟ್ಟದ್ದಕ್ಕೆ. ಈ ಬಾರಿ ಹಾಗಲ್ಲ. ಪ್ರಬಲ ಜಾತಿಗಳ ಜನಸಂಖ್ಯೆ ಅವರು ಊಹಿಸಿದ್ದಕ್ಕಿಂತ ಕಡಿಮೆ ಇದೆ ಎನ್ನುವ ಕಾರಣಕ್ಕೆ ಪ್ರತಿರೋಧ ಹುಟ್ಟಿಕೊಂಡಿದೆ.



ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳಿಗೆ ಸಂಖ್ಯಾಬಲ ಇದ್ದರೂ ಅವರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಪುರೋಗತಿಗಾಗಿ ಒಂದು ಸಣ್ಣ ಹೆಜ್ಜೆ ಇಡುವುದಕ್ಕೂ ಇಷ್ಟೊಂದು ಕಷ್ಟವಾಗುತ್ತಿರುವುದೇಕೆ? ರಾಜ್ಯದ ಹಿಂದುಳಿದ ವರ್ಗಗಳಿಗೆ ಸೇರಿದ ಜನ ಯೋಚಿಸಬೇಕಾದ ವಿಷಯ ಇದು. ಹೀಗಾಗುತ್ತಿರುವುದಕ್ಕೆ ಕಾರಣ ಮುಂದುವರಿದ ಜಾತಿಗಳ ಪ್ರಾಬಲ್ಯ ಎನ್ನುವುದಕ್ಕಿಂತ ಹೆಚ್ಚಾಗಿ ಹಿಂದುಳಿದ ವರ್ಗದಲ್ಲಿರುವ ದೌರ್ಬಲ್ಯ.

ಹಿಂದುಳಿದ ವರ್ಗದಡಿ ಬರುವ ಹಲವು ಜಾತಿಗಳ ಪೈಕಿ ಸ್ವಲ್ಪ ಮುಂದುವರಿದ ಜಾತಿಗಳು ಇತರ ಜಾತಿಗಳ ಹಿತಾಸಕ್ತಿ ಕಡೆಗಣಿಸುತ್ತಿರುವುದು ಈ ವರ್ಗದಲ್ಲಿ ಒಂದು ಆಂತರಿಕ ಸಂಘರ್ಷವನ್ನು ಜೀವಂತವಾಗಿಟ್ಟಿದೆ. ಹಿಂದುಳಿದ ಜಾತಿಗಳು ಒಂದು ರಾಜಕೀಯ ಶಕ್ತಿಯಾಗಿ ಸೆಟೆದು ನಿಲ್ಲುವ ಸಾಧ್ಯತೆಯನ್ನು ಈ ಸಂಘರ್ಷ ಕ್ಷೀಣವಾಗಿಸಿದೆ.

ಚಾರಿತ್ರಿಕವಾಗಿ ಹಿಂದುಳಿದವರ ಪ್ರಜ್ಞೆಯನ್ನು ವಿಸ್ತರಿಸಿದ ಕೇರಳದ ನಾರಾಯಣ ಗುರುಗಳಂತಹವರು, ಮಹಾರಾಷ್ಟ್ರದ ಮಹಾತ್ಮ ಫುಲೆ ಅಂತಹವರು ಮತ್ತು ತಮಿಳುನಾಡಿನ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಅಂತಹವರು ಕರ್ನಾಟಕದಲ್ಲಿ ಹುಟ್ಟಿಬರಲಿಲ್ಲ ಎನ್ನುವ ಕೊರತೆ ಈಗಲೂ ಈ ವರ್ಗವನ್ನು ಇಲ್ಲಿ ಕಾಡುತ್ತಿದೆ. ಕರ್ನಾಟಕದಲ್ಲಿ ಈ ಕೊರತೆ ಎದುರಿಸಿರುವ ಹಿಂದುಳಿದವರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಬೇಕು. ಇದರರ್ಥ, ಹಿಂದುಳಿದ ವರ್ಗದಲ್ಲಿ ಇರುವ ಬಲಿಷ್ಠ ಜಾತಿಗಳು ಇನ್ನೂ ತೀರಾ ದುರ್ಬಲವಾಗಿಯೇ ಉಳಿದಿರುವ ಜಾತಿಗಳಿಗಾಗಿ ಸ್ವಲ್ಪ ತ್ಯಾಗ ಮಾಡದೇಹೋದರೆ ಹಿಂದುಳಿದ ವರ್ಗ ಒಂದು ಶಕ್ತಿಯಾಗಿ ಹೊರಹೊಮ್ಮಲು ಬೇಕಾದ ಒಗ್ಗಟ್ಟು ಕರ್ನಾಟಕದಲ್ಲಿ ಮರೀಚಿಕೆಯಾಗಿಯೇ ಉಳಿದೀತು. ಪಕ್ಷಗಳು ಯಾವುದೇ ಇದ್ದರೂ, ಸಂಖ್ಯಾಬಲ ಕಡಿಮೆ ಇದ್ದರೂ ಪ್ರಬಲ ಜಾತಿಗಳ ಪ್ರಾಬಲ್ಯ ಯಥಾಪ್ರಕಾರ ಮುಂದುವರಿದೀತು.

ಜಾತಿ ಜನಗಣತಿಯ ವಿಚಾರಕ್ಕೆ ಮತ್ತೆ ಬರುವುದಾದರೆ, ಎಲ್ಲ ಮಿತಿಗಳಾಚೆಗೆ ಈ ಗಣತಿಯ ಮೂಲಕ ಕರ್ನಾಟಕದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ನಿಜಚಿತ್ರಣವೊಂದು ಈಗ ಹೊರಬರುತ್ತಿದೆ. ಇದು ಹತ್ತು ವರ್ಷದ ಹಳೆಯ ಚಿತ್ರಣ. ಆದರೆ ಲಭ್ಯವಿರುವ ಅತ್ಯಂತ ಈಚೆಗಿನ ಚಿತ್ರಣ. ರಾಜ್ಯದ ಜನಸಂಖ್ಯೆಯಲ್ಲಿ ಬಹುಪಾಲು ಹೊಂದಿದ್ದರೂ ತಮ್ಮ ಅಸ್ಮಿತೆಯನ್ನೂ ಶಕ್ತಿಯನ್ನೂ ಸಂಸ್ಕೃತಿಯನ್ನೂ ಮರೆತು ಹಿಂದುಳಿದಿರುವಿಕೆಯ ಶಾಪವನ್ನು ಶಾಶ್ವತವಾಗಿ ಅಂಟಿಸಿಕೊಂಡಿರುವ ಸಮುದಾಯಗಳಿಗೆ ಇಲ್ಲೊಂದು ಸಂದೇಶವಿದೆ. ಹಿಂದುಳಿದವರು ತಮ್ಮಂತೆ ಅಥವಾ ತಮಗಿಂತಲೂ ಹಿಂದುಳಿದಿರುವವರ ಜತೆ ಸೇರಿ ತಮ್ಮ ಏಳಿಗೆಯನ್ನು ಕಂಡುಕೊಳ್ಳಬೇಕೆನ್ನುವ ಸೂಚನೆ ಇದೆ. ಹಿಂದುಳಿದಿರುವವರ ಹಿತಾಸಕ್ತಿಯ ವಿಷಯ ಬಂದಾಗಲೆಲ್ಲ ಕಾಲು ಕೆದರಿ ಜಗಳಕ್ಕೆ ನಿಲ್ಲುವ ವರ್ಗಗಳ ದಾಳಗಳಾಗಬೇಡಿ ಎನ್ನುವ ಎಚ್ಚರಿಕೆ ಇದೆ.

ಹಿಂದುಳಿದ ವರ್ಗಗಳ ಏಳಿಗೆ ಎಂದರೆ ಅದು ಕೆಲವೇ ಕೆಲವು ಜಾತಿಗಳ ಏಳಿಗೆಯ ಪ್ರಶ್ನೆಯಷ್ಟೇ ಅಲ್ಲ. ಅದು ಇಡೀ ರಾಜ್ಯದ ಹಿತಾಸಕ್ತಿಯ ಪ್ರಶ್ನೆ. ರಾಜ್ಯದಲ್ಲಿ ಆರ್ಥಿಕ ಅಭಿವೃದ್ಧಿಯು ಆರ್ಥಿಕ ಸಮಾನತೆಯನ್ನೂ ತರಬೇಕು ಎಂದಾದರೆ, ಜನಸಂಖ್ಯೆಯಲ್ಲಿ ಬಹುಸಂಖ್ಯಾತರಾಗಿರುವ ಹಿಂದುಳಿದ ಜಾತಿಗಳಿಗೆ ಸಂಪತ್ತು ಮತ್ತು ಅಧಿಕಾರ ಎರಡೂ ಪ್ರವಹಿಸಲೇಬೇಕು. ಇದು ಸಾಧ್ಯವಾಗಬೇಕಾದರೆ, ಹಿಂದುಳಿದ ಜಾತಿಗಳು ತಮ್ಮನ್ನು ಆವರಿಸಿಕೊಂಡಿರುವ ವಿಸ್ಮೃತಿಯಿಂದ ಮೊದಲು ಹೊರಬರಬೇಕು.

ಚುರುಮುರಿ

ಬೇಸ್ತುಬಿದ್ದ ಇ.ಡಿ.

• ಸುಮಂಗಲಾ

ಬೆಕ್ಕಣ್ಣ ಸುದ್ದಿ ಓದುತ್ತ ಹೊಟ್ಟೆ ಹಿಡಿದುಕೊಂಡು ಪಕಪಕನೆ ನಗುತ್ತಿತ್ತು. 'ಜೋಕ್ಸ್ ಓದಾಕೆ ಹತ್ತೀಯೇನ್? ನನಗೂ ಹೇಳಲಾ' ಎಂದೆ.

'ಇದೊಂಥರಾ ಜೋಕ್... ಒಂದು ನಾಯಿ ಇ.ಡಿಯವರನ್ನೇ ಬೇಸ್ತು ಬೀಳಿಸೈತೆ!' ಎಂದು ನಕ್ಕಿತು. 'ಹೌದಾ... ಯಾರೋ ವಿರೋಧ ಪಕ್ಷದವರ ನಾಯಿನೇ ಇರಬಕು' ಎಂದೆ.

'ಇಲ್ಲೇ ನಮ್ಮ ಬೆಂಗಳೂರಿನ ಜೆ.ಪಿ. ನಗರದಾಗೆ ಒಬ್ಬರು 50 ಕೋಟಿ ರೂಪಾಯಿ ಬೆಲೆ ಬಾಳೊ ವುಲ್ಫ್‌ಡಾಗನ್ನು ವಿದೇಶದಿಂದ ತರಿಸಿಕೊಂಡಾರೆ. ಅಷ್ಟಕೊಂದು ರೊಕ್ಕ ಕೈಕೈ ಬದಲಾಗೈತಿ ಅಂದ್ರ ಇದು ಹವಾಲಾ ದಂಧೆ ಇರಬಕು ಅಂತ ಯಾರೋ ದೂರು ಕೊಟ್ಟಿದ್ದರಂತೆ. ಇ.ಡಿ. ತಂಡದವ್ರು ದಾಳಿ ಮಾಡಿದರಂತೆ. ಆಮೇಲೆ ನೋಡಿದರೆ ಅದು ಸಾದಾ ಕಕೇಷಿಯನ್ ನಾಯಿ ಅಂತೆ' ಬೆಕ್ಕಣ್ಣ ಸುದ್ದಿ ವಿವರಿಸಿತು.

'ಅಂತೂ ಇ.ಡಿಗೂ ಮಂಗ್ಯಾ ಮಾಡ್ಯಾರಲ್ಲ' ಎಂದು ನಾನೂ ನಕ್ಕೆ.

'50 ಕೋಟಿ ರೂಪಾಯಿಯ ನಾಯಿ ಅಂತ ಸುಳ್ಳೆಪಳ್ಳೆ ಸೋಶಿಯಲ್ ಮೀಡಿಯಾದಾಗೆ ಹಾಕಿದ ನಾಯಿ ಮಾಲೀಕನದೇ ತಪ್ಪು' ಎಂದು ಬೆಕ್ಕಣ್ಣ ವಾದಿಸಿತು.

'ಸುದ್ದಿಯನ್ನು ಸರಿಯಾಗಿ ಪರಿಶೀಲಿಸದೇ ಹೋಗಿ ರೈಡ್ ಮಾಡಿದ ಇ.ಡಿಯವರದ್ದೂ ತಪ್ಪೇ' ಎಂದು ನಾನು ಪ್ರತಿವಾದಿಸಿದೆ.

'ನೀ ಇ.ಡಿ ಬಗ್ಗೆ ಹಗುರಾಗಿ ಮಾತಾಡಬ್ಯಾಡ. ಈ ಹತ್ತು ವರ್ಷದಾಗೆ ಇ.ಡಿಯವ್ರು 7,264 ದಾಳಿ ಮಾಡ್ಯಾರಂತೆ. 86 ಪಟ್ಟು ದಾಳಿ ಹೆಚ್ಚಾಗೈತಿ. ಅರೆಸ್ಟ್ ಮಾಡಿರಾದು 26 ಪಟ್ಟು ಹೆಚ್ಚಾಗೈತಿ. ಒಟ್ಟು 1,21,618 ಕೋಟಿ ರೂಪಾಯಿ ಆಸ್ತಿ ಮುಟ್ಟುಗೋಲು ಹಾಕಿಕೊಂಡಾರೆ. ಗೊತ್ತೈತೇನ್?' ಬೆಕ್ಕಣ್ಣ ಪಕ್ಕಾ ಲೆಕ್ಕ ಕೊಟ್ಟಿತು.

'ಆದರೆ ಈ ದಾಳಿಗಳಲ್ಲಿ 121 ರಾಜಕೀಯ ನಾಯಕರಂತೆ. ಇವ್ರಲ್ಲಿ 115 ಅಂದ್ರೆ 95 % ವಿರೋಧ ಪಕ್ಷಗಳ ನಾಯಕರು' ಎಂದೆ.

'ಮಿಕ್ಕಿದ 7,000ಕ್ಕೂ ಹೆಚ್ಚಿನ ದಾಳಿ ಉದ್ದಿಮೆದಾರರು, ಸರ್ಕಾರಿ ಅಧಿಕಾರಿಗಳು, ಹವಾಲಾ ದಂಧಾದವ್ರು ಇನ್ನಿತರರ ಮೇಲೆ ನಡೆದೈತಿ. ಅಂದ್ರೆ ಭ್ರಷ್ಟಾಚಾರ, ಅಕ್ರಮ ಹಣಕಾಸು ವಹಿವಾಟು ಎಲ್ಲ ಕಡಿಮೆಯಾಗೈತಿ' ಎಂದು ಬೆಕ್ಕಣ್ಣ ನನ್ನ ಬಾಯಿ ಮುಚ್ಚಿಸಿತು!

ಸಂಗತ

ಕಾಪಿಡಬೇಕಿದೆ ಸರ್ಕಾರಿ ಕಾಲೇಜು

ಶಿಕ್ಷಣ ಹಕ್ಕನ್ನು ಸಾಕಾರಗೊಳಿಸುವ ಅಕ್ಷಯಪಾತ್ರೆಗಳಂತಿರುವ ಸರ್ಕಾರಿ ಕಾಲೇಜುಗಳನ್ನು ಕಾಪಿಡುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕು

• ರೇವಣ್ಣ ಎಂ.ಜಿ.

ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡ ದಿನ, ಸರ್ಕಾರಿ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಯೊಬ್ಬ ಕರೆ ಮಾಡಿ 'ಸರ್, ಮುಂದಿನ ವರ್ಷ ಕಾಲೇಜು ಬದಲಾವಣೆ ಮಾಡಬೇಕೆಂದುಕೊಂಡಿದ್ದೇನೆ. ದ್ವಿತೀಯ ಪಿಯುಸಿ ಫಲಿತಾಂಶ ಸರ್ಕಾರಿ ಕಾಲೇಜುಗಳಲ್ಲಿ ಕಳಪೆಯಂತೆ, ಅದಕ್ಕಾಗಿ ಪೋಷಕರು ಯಾವುದಾದರೂ ಖಾಸಗಿ ಕಾಲೇಜಿಗೆ ಸೇರಿಕೊಳ್ಳಲು ಒತ್ತಾಯ ಮಾಡುತ್ತಿದ್ದಾರೆ' ಎಂದು ಹೇಳಿದ. ಇದನ್ನು ಕೇಳಿ ದಿಗಿಲಾಯಿತು. ಹಾಗೆಯೇ ಪರೀಕ್ಷಾ ಫಲಿತಾಂಶದ ಅಂಕಿ ಅಂಶಗಳ ಕಡೆಗೊಮ್ಮೆ ಕಣ್ಣಾಡಿಸಿದೆ.

ಸರ್ಕಾರಿ ಕಾಲೇಜುಗಳ ಫಲಿತಾಂಶ ಶೇ 57.11ರಷ್ಟು ಇದ್ದರೆ, ಅನುದಾನರಹಿತ ಕಾಲೇಜುಗಳ ಫಲಿತಾಂಶ ಶೇ 82.66ರಷ್ಟು ಇತ್ತು. ಸರ್ಕಾರಿ ಕಾಲೇಜುಗಳ 61,951 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರೆ, ಅನುದಾನರಹಿತ ಕಾಲೇಜುಗಳ 57,302 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರು. ಶೂನ್ಯ ಫಲಿತಾಂಶ ದಾಖಲಾದ ಕಾಲೇಜುಗಳಲ್ಲಿ 8 ಸರ್ಕಾರಿ ಕಾಲೇಜುಗಳಿದ್ದರೆ, 90 ಅನುದಾನರಹಿತ ಕಾಲೇಜುಗಳೂ ಇದ್ದವು. ಅಂಕಿ ಅಂಶಗಳನ್ನು ಹೋಲಿಸುವಾಗ ಕಾಲೇಜುಗಳ ದಾಖಲಾತಿ ಮಾನದಂಡ, ವಿದ್ಯಾರ್ಥಿಗಳ ಹಿನ್ನೆಲೆಯನ್ನೊಮ್ಮೆ ಕಣ್ಮುಂದೆ ತಂದುಕೊಂಡರೆ, ಕಳಪೆ, ಉತ್ತಮ ಎಂಬ ಪ್ರಶ್ನೆಯೇ ಬರುವುದಿಲ್ಲ. ಮೊಲದ ವೇಗದಲ್ಲಿ ಆಮೆ ಓಡಲಾರದೆಂದ ಮಾತ್ರಕ್ಕೆ ಆಮೆಗೆ ಕಳಪೆ ಹಣೆಪಟ್ಟಿ ಕಟ್ಟಬಹುದೇ? ಹಾಗೆಂದು, ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳು ಮಾತ್ರ ಸರ್ಕಾರಿ ಕಾಲೇಜುಗಳಿಗೆ ಸೇರುವುದರಿಂದ ಫಲಿತಾಂಶದಲ್ಲಿ ಈ ರೀತಿಯ ವ್ಯತ್ಯಾಸವಿದೆ ಎಂದು ಹೇಳಿ, ಸರ್ಕಾರಿ ಕಾಲೇಜುಗಳಲ್ಲಿ ಎಲ್ಲವೂ ಸರಿಯಿದೆಯೆಂದು ಜವಾಬ್ದಾರಿಯಿಂದ ನುಣುಚಿಕೊಳ್ಳುವುದೂ ಸರಿಯಲ್ಲ.

ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಗ್ರಾಮೀಣ ಭಾಗದ ಬಹಳಷ್ಟು ಪಿಯು ಕಾಲೇಜುಗಳು ಮುಚ್ಚಿವೆ. ನಗರದ ಕೆಲವು ಕಾಲೇಜುಗಳೂ ಮುಚ್ಚುವ ಹಂತಕ್ಕೆ ಬಂದಿವೆ. ಇಂತಹ ಹೊತ್ತಿನಲ್ಲಿ ಕೊರತೆಗಳ ನೆಪವೊಡ್ಡಿ ಸರ್ಕಾರಿ ಕಾಲೇಜುಗಳನ್ನು ದೂರೀಕರಿಸುವುದೆಂದರೆ ನೆಗಡಿಗೆ ಮೂಗನ್ನು ದೂಷಿಸಿದಂತೆ!

ಖಾಸಗಿ ಶಾಲೆಗೆ ಮಕ್ಕಳನ್ನು ಸೇರಿಸಲಿಲ್ಲವೆಂಬ ಕಾರಣಕ್ಕೆ ಮೂವರು ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವನ್ನು ಮಾಧ್ಯಮಗಳಲ್ಲಿ ನೋಡಿದಾಗ, ಸರ್ಕಾರಿ ಶಾಲೆಗಳ ಬಗ್ಗೆ ಸಾರ್ವಜನಿಕರಲ್ಲಿ ಈಗಾಗಲೇ ನಕಾರಾತ್ಮಕ ಧೋರಣೆ ಮನೆ ಮಾಡಿದೆ ಎಂಬುದು ಅರಿವಿಗೆ ಬರುತ್ತದೆ. ಸರ್ಕಾರಿ ಕಾಲೇಜುಗಳಲ್ಲಿ ಓದುತ್ತಿದ್ದೇವೆ ಎಂದು ಹೇಳಿಕೊಳ್ಳಲು ಮಕ್ಕಳು ಹಿಂಜರಿಯುವ ಪರಿಸ್ಥಿತಿ ಬಂದೊದಗಿರುವುದು ಆಘಾತಕಾರಿ. ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಂಡ ದಿನ ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣಳಾಗಿದ್ದ ಸರ್ಕಾರಿ ಕಾಲೇಜಿನ ವಿದ್ಯಾರ್ಥಿನಿ ಕರೆ ಮಾಡಿ 'ಸರ್, ಒಂದು ವಿಷಯದಲ್ಲಿ ಅಂಕ ಕಡಿಮೆಯಾಗಿದೆ' ಎಂದಳು. 'ಅಷ್ಟು ಆತ್ಮವಿಶ್ವಾಸವಿದ್ದರೆ ಉತ್ತರಪತ್ರಿಕೆಯ ಪ್ರತಿ ತರಿಸಿಕೊಂಡು ಸಂಬಂಧಪಟ್ಟ ಉಪನ್ಯಾಸಕರಿಗೆ ತೋರಿಸಿ, ಮರುಮೌಲ್ಯಮಾಪನಕ್ಕೆ ಅರ್ಜಿ ಹಾಕು' ಎಂದೆ. 'ಅಯ್ಯೋ ಸರ್, ಪ್ರತಿ ಪಡೆಯಲು 530 ರೂಪಾಯಿಯೇ ಇಲ್ಲದಿರುವಾಗ ಮರುಮೌಲ್ಯಮಾಪನಕ್ಕೆ ಹಾಕಲು 1,670 ರೂಪಾಯಿಯನ್ನು ಎಲ್ಲಿಂದ ತರುವುದು? ಬೇಡ ಬಿಡಿ ಸರ್, ಹೇಗೋ ಪಿಯುಸಿ ಉತ್ತೀರ್ಣಳಾಗಿದ್ದೇನೆ. ಪದವಿ ಮುಗಿಸಿಕೊಂಡು ಯಾವುದಾದರೂ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಒಂದು ಉದ್ಯೋಗ ಪಡೆದುಕೊಳ್ಳುತ್ತೇನೆ. ಸರ್ಕಾರಿ ಕಾಲೇಜು ಇಲ್ಲದಿದ್ದರೆ ಪೋಷಕರು ಪಿಯುಸಿಗೆ ಖಂಡಿತವಾಗಿಯೂ ನನ್ನನ್ನು ಕಳುಹಿಸುತ್ತಿರಲಿಲ್ಲ' ಎಂಬ ಆಕೆಯ ನೋವಿನ ಮಾತುಗಳನ್ನು ಕೇಳಿದಾಗ ಗಂಟಲು ಕಟ್ಟಿತು.



ಹೀಗೆಯೇ ಕೆಲ ವರ್ಷಗಳ ಹಿಂದೆ ಪ್ರಥಮ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಅನುತ್ತೀರ್ಣನಾದ ವಿದ್ಯಾರ್ಥಿಯೊಬ್ಬ, ಪುನಃ ಪ್ರಥಮ ಪಿಯುಸಿಯಿಂದ ಕಾಂಬಿನೇಷನ್ ಬದಲಿಸಿಕೊಂಡು ಓದು ಮುಂದುವರಿಸಲೇಬೇಕು ಎಂಬ ಹಟದಿಂದ, ಹತ್ತಿರದ ಎಲ್ಲಾ ಖಾಸಗಿ ಕಾಲೇಜುಗಳನ್ನು ಕೇಳಿದರೂ ಯಾರೂ ದಾಖಲು ಮಾಡಿಕೊಳ್ಳಲಿಲ್ಲ. ಅನಿವಾರ್ಯವಾಗಿ ಸರ್ಕಾರಿ ಕಾಲೇಜಿಗೆ ಸೇರಿದ ಆತ ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ ಅತಿಹೆಚ್ಚು ಅಂಕ ಗಳಿಸಿ ಗ್ರಾಮ ಲೆಕ್ಕಾಧಿಕಾರಿಯಾಗಿ ಆಯ್ಕೆಯಾದ.

ಇತ್ತೀಚೆಗೆ ನಡೆದ ಉಪನ್ಯಾಸಕರ ಸಮ್ಮೇಳನವೊಂದರಲ್ಲಿ 'ಸರ್ಕಾರಿ ಕಾಲೇಜುಗಳಲ್ಲಿ ಸದ್ದಿಲ್ಲದೆ ಪವಾಡಗಳು ಜರುಗುತ್ತವೆ' ಎಂದು ಲೇಖಕಿಯೊಬ್ಬರು ಹೇಳಿದ ಮಾತು ಇಂತಹ ಸಂಗತಿಗಳನ್ನು ಕಂಡಾಗ ಸತ್ಯ ಎಂದೆನಿಸುತ್ತದೆ. ಸರ್ಕಾರಿ ಕಾಲೇಜುಗಳು ಇಲ್ಲದಿದ್ದರೆ ಇಂತಹ ಮಕ್ಕಳಿಗೆ ಶಿಕ್ಷಣ ಸಾಧ್ಯವಾಗುತ್ತಿತ್ತೇ? 'ಕೆಲವು ಪ್ರಕಾಶಮಾನವಾದ ಮನಸ್ಸುಗಳನ್ನು ತರಗತಿಯ ಕೊನೆಯ ಬೆಂಚುಗಳಲ್ಲಿ ಕಾಣಬಹುದು' ಎಂಬ ಅಬ್ದುಲ್ ಕಲಾಂ ಅವರ ಮಾತುಗಳನ್ನು ಈ ಬಗೆಯ ಮಕ್ಕಳಿಗೂ ಅನ್ವಯಿಸಬಹುದಲ್ಲವೇ?

ಹಳ್ಳಿಗಳನ್ನು ಕುರಿತು ಕುವೆಂಪು 'ನಿನ್ನನೀ ಕೀಳ್ಗತಿಗೆ ತಂದವರಾರು? ನಿನ್ನವರ ಕೈಬೆರಳ ಕಡಿದವರಾರು?' ಎಂದ ಮಾತನ್ನು ಇಂದು ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಕೇಳುವ ಪರಿಸ್ಥಿತಿ ಬಂದೊದಗಿದೆ. ಶಿಕ್ಷಣವು ಮುಂದೊಂದು ದಿನ ಉಳ್ಳವರ ಸ್ವತ್ತಾಗಬಾರದೆಂದರೆ, ಶಿಕ್ಷಣ ಹಕ್ಕನ್ನು ಸಾಕಾರಗೊಳಿಸುವ ಅಕ್ಷಯಪಾತ್ರೆಗಳಂತೆ ಇರುವ ಸರ್ಕಾರಿ ಕಾಲೇಜುಗಳನ್ನು ಕಾಪಿಡುವುದು ನಮ್ಮೆಲ್ಲರ ಹೊಣೆಯಾಗಬೇಕು. ಸಮ ಸಮಾಜದ ಕನಸು ಹೊತ್ತ ಎಲ್ಲರೂ ಇದಕ್ಕಾಗಿ ಒಮ್ಮನಸ್ಸಿನಿಂದ ಸಂಕಲ್ಪ ತೊಡಬೇಕು.

ಲೇಖಕ: ಉಪನ್ಯಾಸಕ, ಸರ್ಕಾರಿ ಪದವಿಪೂರ್ವ ಕಾಲೇಜು ಕೃಷ್ಣರಾಜಪೇಟೆ

ವಾಚಕರ ವಾಣಿ

ಶಿಕ್ಷಕರು ಪರೀಕ್ಷಾ ಗೋಪ್ಯತೆ ಕಾಪಾಡಲಿ

ರಾಜ್ಯದ ಎಲ್ಲೆಡೆ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಈ ಬಾರಿಯ ಎಸ್‌ಎಸ್‌ಎಲ್‌ಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ನಡೆಯುತ್ತಿದೆ. ಉತ್ತರ ಪತ್ರಿಕೆಯೊಂದರಲ್ಲಿ ಒಬ್ಬ ವಿದ್ಯಾರ್ಥಿಯು 'ಪಾಸ್ ಮಾಡಿ ಲವ್ ಉಳಿಸಿ' ಎಂಬ ವಿಚಿತ್ರ ಬೇಡಿಕೆ ಮುಂದಿಟ್ಟಿದ್ದಾನಂತೆ. ಇನ್ನೊಬ್ಬ ವಿದ್ಯಾರ್ಥಿಯು 500 ರೂಪಾಯಿ ನೋಟನ್ನು ಉತ್ತರಪತ್ರಿಕೆಯಲ್ಲಿ ಇಟ್ಟು 'ಸರ್ ದಯವಿಟ್ಟು ನನ್ನನ್ನು ಪಾಸ್ ಮಾಡಿ. ಇಲ್ಲದಿದ್ದರೆ ಮನೆಯಲ್ಲಿ ತಂದೆ– ತಾಯಿ ಬೈಯುತ್ತಾರೆ' ಎಂದು ಬರೆದಿದ್ದಾನಂತೆ. ಈ ವಿಚಾರಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ಮೌಲ್ಯಮಾಪಕರಾದವರು ಈ ವಿಷಯಗಳನ್ನು ಬಹಿರಂಗಪಡಿಸುವ ಅವಶ್ಯಕತೆ ಏನಿತ್ತು? ಈ ಮೂಲಕ ಪರೀಕ್ಷಾ ನಿಯಮಗಳನ್ನು ಅವರು ಗಾಳಿಗೆ ತೂರಿದಂತೆ ಆಗುವುದಿಲ್ಲವೇ? ಮೌಲ್ಯಮಾಪಕರು ಇಂತಹ ವಿಷಯಗಳನ್ನು ಬಹಿರಂಗಗೊಳಿಸಿರುವುದರಿಂದ ಹೀಗೆ ಬರೆದ ವಿದ್ಯಾರ್ಥಿಗಳು ಖಿನ್ನತೆಗೆ ಒಳಗಾಗಬಹುದು. ಮೌಲ್ಯಮಾಪನ ಕರ್ತವ್ಯವನ್ನು ನಿರ್ವಹಿಸುವ ಶಿಕ್ಷಕರು ಇನ್ನಾದರೂ ಎಚ್ಚೆತ್ತುಕೊಂಡು ಪರೀಕ್ಷಾ ನಿಯಮಗಳಿಗೆ ಬದ್ಧರಾಗಿರಬೇಕು. ಗೋಪ್ಯತೆ ಕಾಯ್ದುಕೊಳ್ಳಬೇಕು.

ಎ.ವೈ.ಸೋನ್ಯಾಗೋಳ, ಪಾಶ್ಚಾಪುರ

ಕಸಾಪ: ತಿದ್ದುಪಡಿಯಿಂದ ಸಾಧಿಸುವುದೇನು?

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷರಿಗೆ ಪರಮಾಧಿಕಾರ ನೀಡುವ, ಅಧ್ಯಕ್ಷರ ಕೈ ಬಲಪಡಿಸುವುದಕ್ಕೆ ಅನುವಾಗಿಸುವ ಉದ್ದೇಶದಿಂದ ಬೈಲಾಗೆ ತಿದ್ದುಪಡಿ ತರಲು ಮುಂದಾಗಿರುವುದಕ್ಕೆ ಸಂಬಂಧಿಸಿದ ವರದಿ ಓದಿ ಆಶ್ಚರ್ಯವಾಯಿತು. ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿ ಕುರಿತು ಚಿಂತನೆಗಳು ಹಿಂದೆ ಸರಿದು ಅದೊಂದು ಅಧಿಕಾರ, ಅಂತಸ್ತು, ವೈಯಕ್ತಿಕ ಮೇಲಾಟದ ಕಣವಾಗಿ, ಅದಕ್ಕೆ ಪಕ್ಷ ರಾಜಕಾರಣದ ನಂಟೂ ಅಂಟಿದ ಮೇಲೆ ಇಂತಹ ಬೆಳವಣಿಗೆಗಳೆಲ್ಲ ನಿರೀಕ್ಷಿತವೆ. ಈಗ ಪ್ರಸ್ತಾಪಿಸಲಾಗುತ್ತಿರುವ ಬೈಲಾ ತಿದ್ದುಪಡಿಗಳು ಜಾರಿಯಾದರೆ ಕಸಾಪದ ಯಾವುದೇ ಸ್ಥಾನಕ್ಕೆ ಸ್ವಲ್ಪ ಸ್ವಾಭಿಮಾನ ಇರುವ ಯಾವುದೇ ವ್ಯಕ್ತಿ ಅಥವಾ ಸಾಹಿತಿ ಸದಸ್ಯನಾಗಲು ಅಥವಾ ನಾಮನಿರ್ದೇಶನಗೊಳ್ಳಲು ಅಪೇಕ್ಷಿಸಲಾರ. ಇನ್ನು ಜಿಲ್ಲಾಡಳಿತವನ್ನು ಉದ್ದೇಶಿಸಿ ಮಾಡಲಾಗುವ ತಿದ್ದುಪಡಿಗಳು ಜಿಲ್ಲಾಡಳಿತಕ್ಕೆ ಯಾವುದೇ ರೀತಿಯ ಬಂಧನಕಾರಿ ಆಗಲಾರವು.

ಸಾಹಿತ್ಯ ಪರಿಷತ್ತಿನ ಪೂರ್ವಸೂರಿಗಳು ಕನ್ನಡ ನಾಡು– ನುಡಿಗೆ ನಿಷ್ಕಾಮ ಸೇವೆ ಸಲ್ಲಿಸಿ ಯಾವುದೇ ಅಧಿಕಾರ, ಅಂತಸ್ತಿನ ಹಂಬಲ, ಬೆಂಬಲವಿಲ್ಲದೆ ಸರಿದುಹೋಗಿದ್ದಾರೆ. ಜಿಲ್ಲಾಡಳಿತ, ಜಿಲ್ಲೆಯ ಸಾಹಿತಿಗಳು, ರಾಜಕೀಯ ವ್ಯಕ್ತಿಗಳ ಸಹಯೋಗದೊಂದಿಗೆ ಸಾಹಿತ್ಯ ಸಮ್ಮೇಳನವನ್ನು ನಡೆಸುವುದು ಬಿಟ್ಟರೆ ಕಸಾಪದಿಂದ ಯಾವುದೇ ಅರ್ಥವತ್ತಾದ ಕಾರ್ಯಕ್ರಮಗಳು ಈಗ ಜರುಗುತ್ತಿಲ್ಲ. ಸಭೆ, ಸಮ್ಮೇಳನಗಳಿಂದ ಕನ್ನಡ ನುಡಿಗೆ ಯಾವುದೇ ಪ್ರಯೋಜನವಾಗುತ್ತಿಲ್ಲ. ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಕಲಿಕೆ ನೇಪಥ್ಯಕ್ಕೆ ಸರಿದು ಇಂಗ್ಲಿಷ್ ಮಾಧ್ಯಮ ಮುನ್ನೆಲೆಗೆ ಬರುತ್ತಿರುವಾಗ ಮತ್ತು ನಮ್ಮ ನುಡಿ ಆತಂಕದ ಪರಿಸ್ಥಿತಿ ಎದುರಿಸುತ್ತಿರುವಾಗ ಕಸಾಪದಂತಹ ಸಂಸ್ಥೆ ಆ ಕಡೆ ಗಮನ ನೀಡದೇ ಅಧಿಕಾರ ಕೇಂದ್ರೀಕರಣದತ್ತ ಗಮನಹರಿಸುತ್ತಿರುವುದು ನಾಡ– ನುಡಿಯ ಹಿತಸಾಧನೆಗಂತೂ ಅಲ್ಲ. ಕಸಾಪದಂತಹ ಸಂಸ್ಥೆಗಳೇ ಅಪ್ರಸ್ತುತವಾಗುವಂತಹ ಕಾಲಘಟ್ಟದಲ್ಲಿ ನಾವು ಈಗ ಇರುವಾಗ, ಬೈಲಾ ತಿದ್ದುಪಡಿಯಂತಹ ಕ್ರಮಗಳಿಂದ ಸಾಧಿಸುವುದಾದರೂ ಏನು?

ವೆಂಕಟೇಶ ಮಾಚಕನೂರ, ಧಾರವಾಡ

ಸರ್ಕಾರದ ವಿಶ್ವಾಸಾರ್ಹತೆ ಒರೆಗಲ್ಲಿಗೆ

ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿ (ಜಾತಿ ಜನಗಣತಿ) ಕುರಿತು ಯಾವುದೇ ನಿರ್ಣಯ ಕೈಗೊಳ್ಳದೇ ಸಮಾಪ್ತಿಗೊಂಡ ಸಚಿವ ಸಂಪುಟ ಸಭೆ, ಈ ವಿಷಯವನ್ನು ಮೇ 2ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಮತ್ತೆ ಚರ್ಚೆಗೆ ಕೈಗೆತ್ತಿಕೊಳ್ಳಲು ತೀರ್ಮಾನಿಸಿರುವುದಾಗಿ ವರದಿಯಾಗಿದೆ. ಇದರಿಂದ ಅಲ್ಲಿಯವರೆಗೆ ಮಂತ್ರಿಮಂಡಲ ಬಚಾವ್ ಆದಂತಾಗಿದೆ. ಇಂಗ್ಲಿಷಿನ 'ಬೈಟ್ ದ ಬುಲೆಟ್' ಎಂಬ ಪ್ರಯೋಗ ಈಗಿನ ಪರಿಸ್ಥಿತಿಗೆ ಹೊಂದುತ್ತದೆ. ಕಷ್ಟದ ತೀರ್ಮಾನವೊಂದನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಹಿಂದೆಮುಂದೆ ನೋಡುವುದು, ಮುಂದೂಡುವುದು ಇನ್ನು ನಡೆಯದು. ಆ ನಿರ್ಧಾರದಿಂದ ಉದ್ಭವಿಸುವ ತೊಂದರೆಗಳಿಗೆ ಸಿದ್ಧವೂ ಆಗಿರಬೇಕಾಗುತ್ತದೆ. 'ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳಲಾಗುವುದು' ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾತು 'ಅಂದರಿಕೀ ಮಂಚಿವಾಡು ಅನಂತಯ್ಯ' ಎಂಬ ನಾಣ್ಣುಡಿಯನ್ನು ನೆನಪಿಸುತ್ತದೆ. ಎಲ್ಲರನ್ನೂ ಮೆಚ್ಚಿಸಲು ಹೋಗಿ ಕೊನೆಗೆ ಯಾರೊಬ್ಬರಿಗೂ ಇಷ್ಟವಾಗದೇ ಹೋಗುವ ಸಾಧ್ಯತೆ ಇರುತ್ತದೆ.

'ಜಾತಿ ದತ್ತಾಂಶಕ್ಕೆ ವಿರೋಧ ಏಕೆ?' ಎಂದು ಒಂದು ಲೇಖನ (ಪ್ರ.ವಾ., ಏ. 17) ಪ್ರಶ್ನಿಸಿದರೆ, ಇನ್ನೊಂದು ಲೇಖನ, 'ಏರಬೇಕಾಗಿದೆ ಮೀಸಲಾತಿ ಪ್ರಮಾಣ' (ಪ್ರ.ವಾ., ಏ. 19) ಎಂದಿದೆ. ಎರಡು ಮೂಲಭೂತ ಅಂಶಗಳನ್ನು ಇಲ್ಲಿ ಪರಿಗಣಿಸಬೇಕಾಗಿದೆ. ಸಾಮಾಜಿಕ ನ್ಯಾಯ ಎಂದರೆ ಪ್ರಮಾಣವಾರು ಪ್ರಾತಿನಿಧ್ಯ (ಪ್ರೊಪೋಷನಲ್ ರೆಪ್ರೆಸೆಂಟೇಷನ್) ಎಂದು ಸಮೀಕರಿಸಬಹುದೇ? ಜನಸಂಖ್ಯೆಯು ಪ್ರತಿಕ್ಷಣ ಬೆಳೆಯುತ್ತಿರುವಾಗ, ಗಣತಿ ಹತ್ತು ವರ್ಷಗಳಿಗೊಮ್ಮೆ ನಡೆದು, ಆ ಸಂಖ್ಯೆ ಕೆಲ ಕಾಲದ ನಂತರ ತಿಳಿದುಬರುತ್ತದೆ (2021ರದು ಮುಂದೆಂದು ತಿಳಿಯುತ್ತದೋ ಗೊತ್ತಿಲ್ಲ). ಹೀಗಿರುವಾಗ 'ನಮ್ಮ ಸಂಖ್ಯೆ ಎಷ್ಟೋ ಹೆಚ್ಚು ಇದೆ, ಲಕ್ಷಾಂತರ ಮಂದಿಯನ್ನು ಸಮೀಕ್ಷೆಯಲ್ಲಿ ಪರಿಗಣಿಸಿಲ್ಲ' ಎಂಬ ಮಾತು ಸರಿಯೇ? ಒಟ್ಟಿನಲ್ಲಿ, ರಾಜ್ಯ ಸರ್ಕಾರದ ವಿಶ್ವಾಸಾರ್ಹತೆಯ ಒರೆಗಲ್ಲಿನ ಸನ್ನಿವೇಶ ಇದು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

'ಪಾದ ಪರಿಶೀಲನೆ'ಯಿಂದ ತಿಳಿದದ್ದೆಂದರೆ...

ನಾಳೆಯ ಸದೃಢ ಸಮಾಜಕ್ಕೆ ಅವಶ್ಯವಿರುವ ವೈಜ್ಞಾನಿಕ ಮನೋಭಾವದ ಕುರಿತು ಮಲ್ಲಿಕಾರ್ಜುನ ಹೆಗ್ಗಳಗಿ ಚೆನ್ನಾಗಿ ವಿಶ್ಲೇಷಿಸಿದ್ದಾರೆ (ಸಂಗತ, ಏ. 18). ಪ್ರತಿದಿನವೂ ಕರಿದಾರ ಕಟ್ಟಿಕೊಂಡ ಲಲನೆಯರ ಪಾದ ನೋಡುವ ಹವ್ಯಾಸವನ್ನು 65ರ ವೃದ್ಧನಾದ ನಾನು ಬೆಳೆಸಿಕೊಂಡೆ. ಕೆಲವರು ನನ್ನ ಈ ವಿಚಿತ್ರ 'ಪಾದ ಪರಿಶೀಲನೆ'ಯನ್ನು ಅಪಾರ್ಥ ಮಾಡಿಕೊಂಡು ಅಪಹಾಸ್ಯ ಕೂಡ ಮಾಡುತ್ತಿದ್ದರು. ಆದರೂ ಹಲವರನ್ನು ಕರಿದಾರ ಧರಿಸಿದ್ದಕ್ಕೆ ಕಾರಣ ಕೇಳುತ್ತಲೇ ಬಂದಾಗ ಸಿಕ್ಕ ಉತ್ತರ 'ನಮ್ಮ ಹಿರಿಯರು ಹೇಳಿದರು, ಶುಭವಾಗುವುದಾದರೆ ಆಗಲಿ, ನಾವು ಕಳೆದುಕೊಳ್ಳುವುದೇನಿದೆ?' ಒಟ್ಟಿನಲ್ಲಿ, ಈ ರೀತಿ ಅಪ್ಪ ಹಾಕಿದ ಆಲದ ಮರಕ್ಕೆ ನೇಣಿಗೆ ಶರಣು ಹೋಗುವ ಸಂಸ್ಕೃತಿ ಮುಂದುವರಿದರೆ ಆರೋಗ್ಯಪೂರ್ಣ ಸಮಾಜದ ನಿರ್ಮಿತಿ ಕನಸಾಗಿಯೇ ಉಳಿಯುವುದೇನೋ ಎಂಬ ಅನುಮಾನ ಮೂಡುತ್ತದೆ.

ಅನಿಲಕುಮಾರ ಮುಗಳಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೆಂಗಳೂರು ಮಹಿಳೆಯರಿಗೆ ಸುರಕ್ಷಿತವೇ?

ದೊಡ್ಡ ದೊಡ್ಡ ನಗರಗಳಲ್ಲಿ ಅಲ್ಲೊಂದು ಇಲ್ಲೊಂದು ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣಗಳು ನಡೆಯುತ್ತಲೇ ಇರುತ್ತವೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿದ್ದು ವಿವಾದವಾಗಿತ್ತು. ನಂತರ ತಮ್ಮ ಹೇಳಿಕೆಯನ್ನು ತಪ್ಪಾಗಿ ಅರ್ಥಮಾಡಿಕೊಳ್ಳಲಾಗಿದೆ, ಹೇಳಿಕೆಯಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುವುದಾಗಿ ಹೇಳಿದ್ದರು. ಅವರು ಈ ಹೇಳಿಕೆ ನೀಡಲು ಕಾರಣವಾಗಿದ್ದು, ರಾಜಧಾನಿ ಬೆಂಗಳೂರಿನಲ್ಲಿ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣ. ರಾತ್ರಿ ವೇಳೆ ಮಹಿಳೆಯರನ್ನು ಅಡ್ಡಗಟ್ಟಿ ಅವರ ಮೇಲೆ ಲೈಂಗಿಕ ದೌರ್ಜನ್ಯ, ಅತ್ಯಾಚಾರದಂತಹ ಕೃತ್ಯಗಳನ್ನು ಕಾಮುಕರು ಎಸಗುತ್ತಿದ್ದಾರೆ. ಮಹಿಳೆಯರಿಗೆ ಬೆಂಗಳೂರು ಎಷ್ಟು ಸುರಕ್ಷಿತ ಎಂಬ ಪ್ರಶ್ನೆಯನ್ನು ಇದು ಹುಟ್ಟುಹಾಕಿದೆ

• ಆದಿತ್ಯ ಕೆ.ಎ.

ಘಟನೆ 1: ಬಿಹಾರದ ಯುವತಿ, ಕೇರಳದಲ್ಲಿ ಏಲಕ್ಕಿ ಬಿಡಿಸುವ ಕೆಲಸಕ್ಕೆ ಸೇರಿಕೊಂಡಿದ್ದರು. ಕೆಲಸ ಇಷ್ಟವಿಲ್ಲದೇ ವಾಪಸ್ ಊರಿಗೆ ಹೋಗಲು ನಿರ್ಧರಿಸಿದ್ದರು. ಕೇರಳದ ಎರ್ನಾಕುಲಂನಿಂದ ಬಿಹಾರದ ಬಾಕಾಕ್ಕೆ ನೇರ ರೈಲು ಸಂಪರ್ಕ ಇರಲಿಲ್ಲ. ಬೆಂಗಳೂರಿಗೆ ಬಂದು, ತನ್ನ ಸ್ವಂತ ಗ್ರಾಮಕ್ಕೆ ಹೋಗಲು ಮುಂದಾಗಿದ್ದರು. ನಗರದಲ್ಲಿದ್ದ ದೊಡ್ಡಮ್ಮನ ಮಗನಿಗೆ ಮಾಹಿತಿ ನೀಡಿದ್ದರು. ಏಪ್ರಿಲ್ 2ರ ರಾತ್ರಿ ತಂಗಿಗಾಗಿ ರೈಲು ನಿಲ್ದಾಣದಲ್ಲಿ ಸಹೋದರ ಕಾದು ಕುಳಿತಿದ್ದ. ರೈಲು ಮಧ್ಯರಾತ್ರಿ ನಿಲ್ದಾಣ ತಲುಪಿತ್ತು. ಹಸಿವಿನಿಂದ ಬಳಲುತ್ತಿದ್ದ ಇಬ್ಬರೂ ಊಟ ಹುಡುಕಿಕೊಂಡು ಕೆ.ಆರ್. ಪುರ ಮಾರ್ಗದ ರಸ್ತೆಯಲ್ಲಿ ತೆರಳುತ್ತಿದ್ದರು. ಆಗ ಆಟೊ ಚಾಲಕರಿಬ್ಬರು ಸಹೋದರನಿಗೆ ಥಳಿಸಿ ಯುವತಿಯನ್ನು ಎಳೆದೊಯ್ದು ಅತ್ಯಾಚಾರ ಎಸಗಿದ್ದರು.

ಘಟನೆ 2: ಏಪ್ರಿಲ್ 3ರಂದು ಸುದ್ದಗುಂಟೆಪಾಳ್ಯದ ಭಾರತಿ ಲೇಔಟ್‌ನ ಒಂದನೇ ಕ್ರಾಸ್‌ನ ಅಡ್ಡರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಯುವತಿಯನ್ನು ತಬ್ಬಿಕೊಂಡು ಲೈಂಗಿಕ ಕಿರುಕುಳ ನೀಡಿದ್ದ ಆರೋಪಿ ಪರಾರಿ ಆಗಿದ್ದ. ಇದು ಸಾರ್ವಜನಿಕ ವಲಯದಲ್ಲಿ ಆಕ್ರೋಶಕ್ಕೆ ಕಾರಣವಾಗಿತ್ತು.

ಘಟನೆ 3: ದೆಹಲಿ ಮೂಲದ ಮಹಿಳೆಯೊಬ್ಬರು ಬೆಂಗಳೂರಿನ ವ್ಯಕ್ತಿಯೊಬ್ಬರನ್ನು ಮದುವೆಯಾಗಿ ಕೋರಮಂಗಲದಲ್ಲಿ ನೆಲಸಿದ್ದರು. ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ಆಕೆ ಕೆಲಸ ಮಾಡುತ್ತಿದ್ದರು. ಫೆಬ್ರುವರಿ 20ರಂದು ಕೆಲಸ ಮುಗಿಸಿಕೊಂಡು ಮನೆಗೆ ನಡೆದು ತೆರಳುತ್ತಿದ್ದರು. ಗೃಹಿಣಿಯನ್ನು ಅಡ್ಡಗಟ್ಟಿದ ನಾಲ್ವರು ಆರೋಪಿಗಳು ಬಾಗಿಲು ಮುಚ್ಚಿದ್ದ ಹೋಟೆಲ್ ಕಟ್ಟಡದ ಮಹಡಿಗೆ ಕರೆದೊಯ್ದು ಸಾಮೂಹಿಕ ಅತ್ಯಾಚಾರ ನಡೆಸಿದ್ದರು. ಈ ಘಟನೆಯೂ ನಗರದ ನಿವಾಸಿಗಳನ್ನು ಬೆಚ್ಚಿ ಬೀಳಿಸಿತ್ತು.

ಈ ಮೂರು ಪ್ರಕರಣಗಳೂ ಎರಡು ತಿಂಗಳ ಅಂತರದಲ್ಲಿ ನಡೆದಿವೆ. ಆರೋಪಿಗಳನ್ನು ಬಂಧಿಸಲಾಗಿದೆ. ಆದರೆ, ಈ ಘಟನೆಗಳು ರಾಜಧಾನಿಯಲ್ಲಿ ಮಹಿಳೆಯರ ಸುರಕ್ಷತೆಯ ಬಗ್ಗೆ ಕಳವಳ ಸೃಷ್ಟಿಸಿವೆ. ರಾತ್ರಿ ವೇಳೆ ಹೆಣ್ಣು ಮಕ್ಕಳ ಓಡಾಟಕ್ಕೆ ನಗರ ಎಷ್ಟು ಸುರಕ್ಷಿತ ಎಂಬ ಪ್ರಶ್ನೆಯನ್ನೂ ಹುಟ್ಟುಹಾಕಿದೆ.

ಬೀಳದ ಕಡಿವಾಣ: ರಾಜಧಾನಿ ಬೆಂಗಳೂರಿನಲ್ಲಿ ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಬಿದ್ದಿಲ್ಲ. ಮನೆಗಳ್ಳತನ, ವಾಹನ ಕಳ್ಳತನ ಪ್ರಕರಣಗಳು ನಿತ್ಯ ವರದಿ ಆಗುತ್ತಲೇ ಇವೆ. ರೌಡಿಗಳ ಚಟುವಟಿಕೆಗಳ ನಿಯಂತ್ರಣವೂ ಸಾಧ್ಯವಾಗುತ್ತಿಲ್ಲ. ಅತ್ಯಾಚಾರ ಪ್ರಕರಣಗಳು, ಲೈಂಗಿಕ ದೌರ್ಜನ್ಯ ಪ್ರಕರಣಗಳು ಆಗಾಗ್ಗೆ ಸದ್ದು ಮಾಡುತ್ತಲೇ ಇವೆ. ಕಳೆದೆರಡು ತಿಂಗಳಲ್ಲಿ ಈ ರೀತಿಯ ಐದು ಪ್ರಕರಣಗಳು ರಾಜಧಾನಿಯಲ್ಲಿ ವರದಿ ಆಗಿವೆ.

ಹೆಣ್ಣುಮಕ್ಕಳ ಸುರಕ್ಷತೆಗಾಗಿ ಮೂರು ವರ್ಷಗಳ ಹಿಂದೆ ನಗರದಲ್ಲಿ 'ಸೇಫ್ ಸಿಟಿ' ಯೋಜನೆ ಜಾರಿಗೆ ತರಲಾಗಿತ್ತು. ಯೋಜನೆ ಅಡಿ ಹಲವು ಸೌಲಭ್ಯಗಳೂ ನಗರಕ್ಕೆ ಸಿಕ್ಕಿವೆ. ಯೋಜನೆ ಅಡಿ ಸುರಕ್ಷತಾ ಕೇಂದ್ರಗಳನ್ನು (ಸೇಫ್ಟಿ ಐಲ್ಯಾಂಡ್) ಸ್ಥಾಪಿಸಲಾಗಿದೆ. ತಂತ್ರಜ್ಞಾನ ಬಳಸಿಕೊಂಡು ಆರೋಪಿಗಳ ಪತ್ತೆ ಕಾರ್ಯ ಪ್ರಗತಿಯಲ್ಲಿದೆ. ವಾರಾಂತ್ಯದಲ್ಲಿ ಜನ ದಟ್ಟಣೆ ಹೆಚ್ಚಿರುವ ಮಹಾತ್ಮ ಗಾಂಧಿ ರಸ್ತೆ, ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆಗಳಲ್ಲಿ ಅಶ್ವಾರೋಹಿ ದಳ ಗಸ್ತು ನಡೆಸುತ್ತಿರುತ್ತದೆ. ಆದರೂ ಲೈಂಗಿಕ ದೌರ್ಜನ್ಯ ಪ್ರಕರಣಗಳು ವರದಿ ಆಗುತ್ತಲೇ ಇವೆ. ರಾತ್ರಿ ಪಾಳಿಯ ಕೆಲಸ, ಸಮಾರಂಭ, ಪಾರ್ಟಿ ಮುಗಿಸಿಕೊಂಡು ಮನೆಗೆ ತೆರಳುವ ಯುವತಿಯರನ್ನು ಅಡ್ಡಗಟ್ಟಿ ಅವರ ಮೇಲೆ ದೌರ್ಜನ್ಯ ಎಸಗಲಾಗುತ್ತಿದೆ.

ರಾತ್ರಿ ವೇಳೆ ಒಂಟಿಯಾಗಿ ತೆರಳುವ ಸಂದರ್ಭಗಳಲ್ಲಿ ದುಷ್ಕರ್ಮಿಗಳು ಕೆಟ್ಟ ದೃಷ್ಟಿಯಿಂದ ನೋಡುವುದು, ಹತ್ತಿರ ಬಂದು ಕಿರುಕುಳ ನೀಡುವುದು ಮಾಡಿದ್ದಾರೆ ಎಂದು ನೊಂದ ಯುವತಿಯರು ನೋವು ತೋಡಿಕೊಂಡಿದ್ದಾರೆ.

ಶೇ 9ರಷ್ಟು ಏರಿಕೆ: ಕಳೆದ ವರ್ಷವೂ (2024) ನಗರದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ, ಕಿರುಕುಳ ಪ್ರಕರಣಗಳು ಹೆಚ್ಚಾಗಿದ್ದವು. 2023ಕ್ಕೆ ಹೋಲಿಸಿದರೆ, 2024ರಲ್ಲಿ ಪ್ರಕರಣಗಳು ಶೇ 9ರಷ್ಟು ಏರಿಕೆಯಾಗಿದ್ದವು. 2023ರಲ್ಲಿ 1,139 ಲೈಂಗಿಕ ದೌರ್ಜನ್ಯ ಪ್ರಕರಣಗಳು ದಾಖಲಾಗಿ, 1,040 ಆರೋಪಿಗಳನ್ನು ಬಂಧಿಸಲಾಗಿತ್ತು. 2024ರಲ್ಲಿ 1,247 ಪ್ರಕರಣಗಳು ವರದಿ ಆಗಿದ್ದವು. 1,085 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು.

'ಸದ್ಯ ಬೆಂಗಳೂರಿನ ಜನಸಂಖ್ಯೆ 1.40 ಕೋಟಿಯಿದೆ. ಅದಕ್ಕೆ ತಕ್ಕಂತೆ ಪೊಲೀಸ್ ಸಿಬ್ಬಂದಿ ಇಲ್ಲ' ಎಂದು ಮೂಲಗಳು ಹೇಳಿವೆ.

'ಸೂಕ್ಷ್ಮ ಪ್ರದೇಶಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ. ಮಹಿಳೆಯರು, ಮಕ್ಕಳ ಸುರಕ್ಷತೆಗೆ ಮತ್ತಷ್ಟು ಕ್ಯಾಮೆರಾ ಅಳವಡಿಕೆ ಮಾಡುವಂತೆ ಬಿಬಿಎಂಪಿಗೆ ಪ್ರಸ್ತಾವ ಸಲ್ಲಿಸಲಾಗಿದೆ. ಜಾಗವನ್ನೂ ಗುರುತಿಸಲಾಗಿದೆ. ಪ್ರಖರವಾದ ಬೆಳಕು ಹೊರಸೂಸುವ ಬೀದಿ ದೀಪಗಳನ್ನು ಅಳವಡಿಸುವಂತೆಯೂ ಕೋರಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸೇಫ್ ಸಿಟಿ' ಯೋಜನೆಯಡಿ ಏನೇನು ಸೌಲಭ್ಯ?

- **7,500** ಬೆಂಗಳೂರಿನಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳ ಸಂಖ್ಯೆ
- **800** ವಿವಿಧೆಡೆ ಅಳವಡಿಸಿರುವ ಜೂಮ್ ಕ್ಯಾಮೆರಾಗಳು
- **400** ಹೈ-ರೆಸಲ್ಯೂಷನ್ ಕ್ಯಾಮೆರಾಗಳು
- **50** ಸುರಕ್ಷಾ ದ್ವೀಪಗಳು (ಸೇಫ್ಟಿ ಐಲ್ಯಾಂಡ್)
- **50** ಮಹಿಳಾ ಹೊರ ಠಾಣೆಗಳ ಸಂಖ್ಯೆ



ಶೀಘ್ರ ಸಭೆ

ಬೆಂಗಳೂರಿನಲ್ಲಿರುವ ವಲಸೆ ಕಾರ್ಮಿಕರು ಅಪರಾಧ ಕೃತ್ಯಗಳಲ್ಲಿ ಭಾಗಿ ಆಗುತ್ತಿದ್ದಾರೆ ಎಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ. ಕಾರ್ಮಿಕ ಇಲಾಖೆಯ ಜತೆಗೆ ಶೀಘ್ರದಲ್ಲೇ ಸಭೆ ನಡೆಸಲಾಗುವುದು

ಜಿ.ಪರಮೇಶ್ವರ, ಗೃಹ ಸಚಿವ

112ಕ್ಕೆ ಕರೆ ಮಾಡಿ



ಮಹಿಳೆಯರ ತುರ್ತು ಸ್ಪಂದನೆಗಾಗಿ 'ಸೇಫ್ ಸಿಟಿ' ಯೋಜನೆ ಅಡಿ ಸುರಕ್ಷತಾ ಕೇಂದ್ರ ಸ್ಥಾಪಿಸಲಾಗಿದೆ. 250 ಹೊಯ್ಸಳ ವಾಹನಗಳು 24X7 ತಾಸು ಗಸ್ತು ತಿರುಗುತ್ತಿವೆ. ಅಪಾಯಕ್ಕೆ ಸಿಲುಕಿದವರು ಪೊಲೀಸ್ ಸಹಾಯವಾಣಿ 112ಕ್ಕೆ ಕರೆ ಮಾಡಿ ಮಾಹಿತಿ ನೀಡಬಹುದು. ತಕ್ಷಣವೇ ಸಿಬ್ಬಂದಿ ಸ್ಪಂದಿಸಲಿದ್ದಾರೆ

ಬಿ.ದಯಾನಂದ
ನಗರ ಪೊಲೀಸ್ ಕಮಿಷನರ್

ದೌರ್ಜನ್ಯ ಪ್ರಕರಣಗಳು

	2023	2024
ಲೈಂಗಿಕ ದೌರ್ಜನ್ಯ	1,139	1,247
ಅತ್ಯಾಚಾರ	172	178

'ಕ್ಯಾಬ್ ಪ್ರಯಾಣದ ವೇಳೆ ಕೆಟ್ಟ ಅನುಭವ'

ರಾತ್ರಿ ಪಾಳಿ ಕೆಲಸ ಮುಗಿಸಿಕೊಂಡು ಅಥವಾ ದೂರದ ಊರಿನಿಂದ ನಗರಕ್ಕೆ ಬಂದು ಕ್ಯಾಬ್, ಆಟೊದಲ್ಲಿ ಮನೆಗೆ ತೆರಳುವಾಗ ಆಗಿರುವ ಕೆಟ್ಟ ಅನುಭವಗಳನ್ನು ಕೆಲವು ಯುವತಿಯರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ.

'ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕ್ಯಾಬ್‌ನಲ್ಲಿ ಪ್ರಯಾಣಿಸಿದ್ದು ಭಯಾನಕವಾಗಿತ್ತು. ಪ್ರಯಾಣ ಪ್ರಾರಂಭವಾದ ಕೂಡಲೇ ಚಾಲಕ, ನನ್ನನ್ನು ಕೆಟ್ಟ ದೃಷ್ಟಿಯಿಂದ ನೋಡಲು ಆರಂಭಿಸಿದ್ದ. ಜೋರಾಗಿ ಸಂಗೀತ ಹಾಕಿ ನನ್ನ ತೊಡೆಗಳನ್ನು ಸ್ಪರ್ಶಿಸಲು ಪ್ರಯತ್ನಿಸಿದ. ಕಾರಿನಲ್ಲಿ ಸಿಗರೇಟ್ ಸೇದಿದ. ಆ ಸಮಯದಲ್ಲಿ ನಾನು ಒಂಟಿಯಾಗಿದ್ದೆ' ಎಂದು ಯುವತಿಯೊಬ್ಬರು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

ಪರಿಣಾಮಕಾರಿಯಾಗದ ಗಸ್ತು ವ್ಯವಸ್ಥೆ

ಪೊಲೀಸ್ ಗಸ್ತು ವ್ಯವಸ್ಥೆ ಪರಿಣಾಮಕಾರಿ ಆಗುತ್ತಿಲ್ಲ. ಅದರ ಬದಲಿಗೆ ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯ 10 ಸ್ಥಳಗಳಲ್ಲಿ ಸ್ಥಿರ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತರಬೇಕು. ರಾತ್ರಿ ವೇಳೆ ನಿಗದಿತ ಸ್ಥಳಗಳಲ್ಲಿ ಪೊಲೀಸರು ಕಾಣಿಸಿಕೊಳ್ಳುವಂತೆ ಇರಬೇಕು. ಆಗ ದುಷ್ಕರ್ಮಿಗಳಲ್ಲಿ ಭಯದ ವಾತಾವರಣ ನಿರ್ಮಾಣವಾಗಲಿದೆ. ಈ ವ್ಯವಸ್ಥೆಯನ್ನು ಮಹಾರಾಷ್ಟ್ರದಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ಸ್ಥಿರ ಪೊಲೀಸ್ ವ್ಯವಸ್ಥೆ ಜಾರಿಗೆ ತಂದರೆ ರಾತ್ರಿ ವೇಳೆ ನಡೆಯುವ ಅಪರಾಧ ಚಟುವಟಿಕೆಗಳನ್ನು ನಿಯಂತ್ರಣಕ್ಕೆ ತರಲು ಸಾಧ್ಯ ಆಗಲಿದೆ.

ಬೆಂಗಳೂರಿನ ಪ್ರತಿ ಠಾಣೆಯಲ್ಲಿ ರಾತ್ರಿ ವೇಳೆ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಯ ಸಂಖ್ಯೆ 15ಕ್ಕಿಂತ ಕಡಿಮೆಯಿದೆ. ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸಬೇಕು. ನಾಲ್ಕು ಗೋಡೆಗಳ ಮಧ್ಯೆ ನಡೆಯುವ ಕೆಲವು ಕೃತ್ಯಗಳನ್ನು ತಡೆಯುವುದು ಪೊಲೀಸರಿಗೂ ಕಷ್ಟ. ಆದರೆ, ಆರೋಪಿಗಳನ್ನು ಬಂಧಿಸಿದ ಮೇಲೆ ಅವರಿಗೆ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕು. ಪ್ರಬಲ ಸಾಕ್ಷ್ಯಾಧಾರ ಕಲೆ ಹಾಕಿ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಬೇಕು.

ಎಸ್.ಕೆ.ಉಮೇಶ್, ನಿವೃತ್ತ ಪೊಲೀಸ್ ಅಧಿಕಾರಿ

ಗೃಹ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳು



'ಸಲಹಾ ಕೇಂದ್ರ'

ದೌರ್ಜನ್ಯಕ್ಕೆ ಒಳಗಾದವರಿಗೆ ಆಪ್ತ ಸಮಾಲೋಚನೆ ಹಾಗೂ ಚಿಕಿತ್ಸೆಗೆಂದು ಸೇಫ್ ಸಿಟಿ ಯೋಜನೆ ಅಡಿ ನಗರದ ಎಂಟು ಆಸ್ಪತ್ರೆಗಳಲ್ಲಿ ಸಲಹಾ ಕೇಂದ್ರ ಸ್ಥಾಪಿಸಲಾಗಿದೆ. ವಿಕ್ಟೋರಿಯಾ, ಬೌರಿಂಗ್, ಕೆ.ಸಿ.ಜನರಲ್, ವಾಣಿ ವಿಲಾಸ ಆಸ್ಪತ್ರೆ, ರಾಜಾಜಿನಗರದ ಇಎಸ್ಐ ಹಾಗೂ ಯಲಹಂಕದ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಘಟಕಗಳನ್ನು ತೆರೆಯಲಾಗಿದೆ. ಇಲ್ಲಿ ಸಂತ್ರಸ್ತರಿಗೆ ಸಲಹೆ, ಮಾರ್ಗದರ್ಶನ ಹಾಗೂ ಧೈರ್ಯ ತುಂಬುವ ಕೆಲಸ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ರಾಷ್ಟ್ರೀಯ

'ಒಂದು ದೇಗುಲ, ಒಂದು ಬಾವಿ, ಒಂದು ಸ್ಮಶಾನ ತತ್ವ ಪಾಲಿಸಿ'

ಪ್ರಜಾವಾಣಿ ವಾರ್ತೆ/ಪಿಟಿಐ

ಅಲೀಗಢ(ಉತ್ತರ ಪ್ರದೇಶ): ಸಾಮಾಜಿಕ ಸೌಹಾರ್ದ ಹಾಗೂ ರಾಷ್ಟ್ರ ನಿರ್ಮಾಣಕ್ಕಾಗಿ ಹಿಂದೂಗಳು 'ಒಂದು ದೇವಸ್ಥಾನ, ಒಂದು ಬಾವಿ ಹಾಗೂ ಒಂದು ಸ್ಮಶಾನ' ಎಂಬ ತತ್ವ ಅನುಸರಿಸಬೇಕು ಹಾಗೂ 'ಪಂಚ ಪರಿವರ್ತನೆ'ಗಳನ್ನು ಅಳವಡಿಸಿಕೊಳ್ಳಬೇಕು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ ಭಾಗವತ್ ಪ್ರತಿಪಾದಿಸಿದ್ದಾರೆ.

ಅಲೀಗಢಕ್ಕೆ ಪ್ರವಾಸ ಕೈಗೊಂಡಿರುವ ಅವರು, ಎಚ್.ಬಿ. ಇಂಟರ್ ಕಾಲೇಜ್ ಹಾಗೂ ಪಂಚನ್ ನಗರಿ ಪಾರ್ಕ್‌ನಲ್ಲಿ ಸಂಘಟನೆಯ ಸ್ವಯಂ ಸೇವಕರನ್ನು ಉದ್ದೇಶಿಸಿ ಮಾತನಾಡಿದರು.

'ಒಂದು ದೇವಸ್ಥಾನ, ಒಂದು ಬಾವಿ ಹಾಗೂ ಒಂದು ಸ್ಮಶಾನ ಎಂಬ ತತ್ವವನ್ನು ಪಾಲಿಸಿದಾಗ ಮಾತ್ರ ನಮ್ಮಲ್ಲಿನ ಭೇದ ಹಾಗೂ ತಾರತಮ್ಯ ಅಳಿಯುತ್ತದೆ. ಇದು ಸಮಾಜದ ಎಲ್ಲ ವರ್ಗಗಳ ನಡುವೆ ಏಕತೆ ಮೂಡಿಸಲು ನೆರವಾಗುತ್ತದೆ' ಎಂದು ಭಾಗವತ್ ಹೇಳಿದ್ದಾರೆ.

'ಕುಟುಂಬ ನಿರ್ವಹಣೆ, ಸಾಮಾಜಿಕ ಸೌಹಾರ್ದ, ಪರಿಸರ ಸಂರಕ್ಷಣೆ, ಸ್ವಯಂ ಅರಿವು ಹಾಗೂ ನಾಗರಿಕ ಕರ್ತವ್ಯ ಪಾಲನೆ ಎಂಬ ಐದು 'ಪರಿವರ್ತನೆ'ಗಳನ್ನು ಅಳವಡಿಸಿಕೊಂಡರೆ ಸಮಾಜದಲ್ಲಿ ಭಾರಿ ಬದಲಾವಣೆ ಸಾಧ್ಯ' ಎಂದಿದ್ದಾರೆ.

'ಸಂಘಟನೆಯ ಶತಮಾನೋತ್ಸವ ವರ್ಷದ ಅಂಗವಾಗಿ ಈ ವಿಚಾರಗಳನ್ನು ಸಾಮಾಜಿಕ ಆಂದೋಲನವಾಗಿ ಆರ್‌ಎಸ್‌ಎಸ್ ಆರಂಭಿಸಲಿದೆ. ಈ ವಿಚಾರಗಳನ್ನು ಸಮಾಜಕ್ಕೆ ತಲುಪಿಸುವುದಕ್ಕಾಗಿ ಯೋಜನೆ ಮತ್ತು ಕಾರ್ಯತಂತ್ರಗಳನ್ನು ರೂಪಿಸಲಾಗಿದೆ' ಎಂದು ಹೇಳಿದ ಭಾಗವತ್, 'ಮೌಲ್ಯಗಳೇ ಭಾರತೀಯ ಸಮಾಜದ ಬಹು ದೊಡ್ಡ ಆಸ್ತಿ' ಎಂದು ವಿವರಿಸಿದ್ದಾರೆ.

'ಸಂಸ್ಕಾರವೇ ಹಿಂದೂ ಸಮಾಜದ ತಳಪಾಯ. ಹೀಗಾಗಿ ಪಾರಂಪರಿಕ, ಸಾಂಸ್ಕೃತಿಕ ಮೌಲ್ಯಗಳು ಹಾಗೂ ನೈತಿಕ ತತ್ವಗಳೇ ಆಧಾರವಾಗಿರುವಂತಹ ಸಮಾಜ ನಿರ್ಮಾಣಕ್ಕೆ ಹಿಂದೂಗಳು ಶ್ರಮಿಸಬೇಕು' ಎಂದು ಹೇಳಿದ್ದಾರೆ.

ಬರುವ ವಿಜಯದಶಮಿಯಂದು ಶತಮಾನೋತ್ಸವ ಹಮ್ಮಿಕೊಳ್ಳಲಾಗುತ್ತದೆ. ಇದಕ್ಕಾಗಿ ಸಂಘಟನೆ ಕೈಗೊಂಡಿರುವ ಸಿದ್ಧತೆ ಭಾಗವಾಗಿ ಭಾಗವತ್ ಅವರು ಆರ್‌ಎಸ್‌ಎಸ್ ಪ್ರಚಾರಕರೊಂದಿಗೆ ಸಭೆ ನಡೆಸಲಿದ್ದಾರೆ. ಬ್ರಜ್ ಪ್ರದೇಶಕ್ಕೆ ಸೇರಿರುವ ಅಲೀಗಢದಿಂದ ಇಂತಹ ಸಭೆಗಳಿಗೆ ಅವರು ಏ. 17ರಂದು ಚಾಲನೆ ನೀಡಿದ್ದಾರೆ.

ಸ್ವಯಂಸೇವಕರು ಎಲ್ಲ ವರ್ಗಗಳನ್ನು ಬೆಸೆಯಬೇಕು. ಎಲ್ಲರನ್ನು ತಮ್ಮ ಮನೆಗಳಿಗೆ ಆಹ್ವಾನಿಸಿ ಸೌಹಾರ್ದ ಮತ್ತು ಏಕತೆ ಸಂದೇಶ ರವಾನಿಸಬೇಕು

ಮೋಹನ ಭಾಗವತ್
ಆರ್‌ಎಸ್‌ಎಸ್ ಮುಖ್ಯಸ್ಥ

ಭಾಗವತ್ ಭಾಷಣದ ಪ್ರಮುಖ ಅಂಶಗಳು

- ಕುಟುಂಬವೇ ಸಮಾಜದ ಮೂಲಭೂತ ಘಟಕ. ಸಂಸ್ಕಾರದಿಂದ ಹೊಮ್ಮಿದ ದೃಢವಾದ ಮೌಲ್ಯಗಳು ಕುಟುಂಬದ ಆಧಾರವಾಗಿರಬೇಕು
- ಹಬ್ಬಗಳನ್ನು ಎಲ್ಲರೂ ಸೇರಿ ಆಚರಿಸಬೇಕು. ಇದರಿಂದ ರಾಷ್ಟ್ರೀಯತೆ ಮತ್ತು ಸಾಮಾಜಿಕ ಒಗ್ಗಟ್ಟು ಮತ್ತಷ್ಟು ಗಟ್ಟಿಗೊಳ್ಳುತ್ತದೆ
- 'ಆದರ್ಶ ಹಿಂದೂ ಕುಟುಂಬ' ಪರಿಕಲ್ಪನೆ ಸಾಕಾರಗೊಳಿಸುವುದಕ್ಕಾಗಿ ಕಾಲೇಜುಗಳಲ್ಲಿ ವಿಚಾರ ಸಂಕಿರಣ ಹಮ್ಮಿಕೊಳ್ಳುವುದು, ಮಹಿಳೆಯರೊಂದಿಗೆ ಸಭೆ ನಡೆಸುವುದು ಹಾಗೂ 'ಮಾತಾ-ಪಿತ ಪೂಜೆ' ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು

900 ಎಂಜಿನ್ ಕಳ್ಳತನ: 9 ಮಂದಿ ಸೆರೆ



ಪೆನುಕೊಂಡ (ಪಿಟಿಐ): ಆಂಧ್ರಪ್ರದೇಶದ ಶ್ರೀ ಸತ್ಯ ಸಾಯಿ ಜಿಲ್ಲೆಯಲ್ಲಿನ ಕಿಯಾ ಮೋಟರ್ಸ್ ಘಟಕವೊಂದರಿಂದ 900 ಎಂಜಿನ್‌ಗಳನ್ನು ಕಳವು ಮಾಡಿದ ಪ್ರಕರಣ ಸಂಬಂಧ ಒಂಬತ್ತು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪೆನುಕೊಂಡ ನ್ಯಾಯಾಲಯವು ಆರೋಪಿಗಳಿಗೆ 14 ದಿನ ನ್ಯಾಯಾಂಗ ಬಂಧನ ವಿಧಿಸಿದೆ. ಆಟೊಮೊಬೈಲ್ ಉದ್ಯಮವನ್ನು ಬೆಚ್ಚಿಬೀಳಿಸಿದ್ದ ಬೃಹತ್ ಪ್ರಮಾಣದ ಕಳ್ಳತನದ ಬಗ್ಗೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

'ಕೇವಲ 10 ಶೇಕಡದಷ್ಟು ತನಿಖೆ ಪೂರ್ಣಗೊಂಡಿದೆ. ಕಳವು ಮಾಡಿರುವ ಎಂಜಿನ್‌ಗಳನ್ನು ಆರೋಪಿಗಳು ಹಲವು ರಾಜ್ಯಗಳಿಗೆ ಕಳ್ಳಸಾಗಾಣೆ ಮಾಡಿ ಮಾರಾಟ ಮಾಡುತ್ತಿದ್ದರು. ಆಂಧ್ರ ಪ್ರದೇಶದ ಗಡಿಯಾಚೆಗೂ ಅಕ್ರಮ ಜಾಲವೊಂದು ಸಕ್ರಿಯವಾಗಿರುವ ಮುನ್ಸೂಚನೆ ಸಿಗುತ್ತಿದೆ' ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಕಿಯಾ ಅಧಿಕಾರಿಗಳು ಕಳೆದ ತಿಂಗಳು ಆಂತರಿಕ ಪರಿಶೀಲನೆ ನಡೆಸಿದ ವೇಳೆ ಎಂಜಿನ್‌ಗಳು ಕಳವಾಗಿರುವ ಬಗ್ಗೆ ಮಾಹಿತಿ ಲಭಿಸಿತ್ತು. ಈ ಬಗ್ಗೆ ಮಾರ್ಚ್ 19ರಂದು ದೂರು ದಾಖಲಾಗಿತ್ತು.

ಗುಂಡಣ್ಣ

ಮಾನವ ಜನ್ಮ ಬಹಳ ದೊಡ್ಡದು

ನುಡಿ ಬೆಳಗು
ಗವಿಸಿದ್ಧೇಶ್ವರ ಸ್ವಾಮೀಜಿ,
ಗವಿಮಠ, ಕೊಪ್ಪಳ
177

ನಿಸರ್ಗ ದೇವತೆ ನಮ್ಮೆಲ್ಲರಿಗೂ ಅದ್ಭುತವಾದ ಬದುಕು ನೀಡಿದೆ. ಎಲ್ಲರಿಗೂ ಸಮಾನ ಬದುಕು ಕೊಟ್ಟಿದೆ. ವಿದ್ಯಾವಂತರಿಗೆ ಒಂದು ಬದುಕು, ಅವಿದ್ಯಾವಂತರಿಗೆ ಒಂದು, ಮೇಲ್ಜಾತಿಗಳಿಗೆ ಒಂದು, ಕೆಳಜಾತಿಗಳಿಗೆ ಒಂದು, ಬಡವನಿಗೆ ಒಂದು, ಶ್ರೀಮಂತನಿಗೆ ಒಂದು ಬದುಕು ಎನ್ನುವಂತಿಲ್ಲ. ಎಲ್ಲರಿಗೂ ಸುಂದರ ಬದುಕು ನೀಡಿದೆ. ಶ್ರೀಮಂತನ ಅರಮನೆಯಲ್ಲಿ ಬಂಗಾರದ ಹಣತೆ ಇರಬಹುದು. ಬಡವನ ಗುಡಿಸಿಲಿನಲ್ಲಿ ಮಣ್ಣಿನ ಹಣತೆ ಇರಬಹುದು. ಹಣತೆ ಬಂಗಾರದ್ದಾದರೆ ಏನು? ಮಣ್ಣಿನದ್ದಾದರೆ ಏನು? ಬೆಳಕು ಬಡತನದ್ದೂ ಅಲ್ಲ, ಶ್ರೀಮಂತಿಕೆಯದ್ದೂ ಅಲ್ಲ. ಬೆಳಕು ಸುಮ್ಮನೆ ಬೆಳಕು ಅಷ್ಟೆ. ಹಾಗೆಯೇ ಬದುಕು. ಅದು ಬದುಕು ಅಷ್ಟೆ.

ಹುಟ್ಟಿನಿಂದ ಆರಂಭವಾಗಿ ಸಾವಿನೊಂದಿಗೆ ಪೂರ್ಣವಾಗುವ ಮನುಷ್ಯನ ಬದುಕು ವಿಶಿಷ್ಟವಾಗಬೇಕು, ಅರ್ಥಪೂರ್ಣವೂ ಆಗಬೇಕು. ಕ್ಷಣಿಕವಾಗಿರುವ ಈ ಬದುಕಿನಲ್ಲಿ ಶ್ರೇಷ್ಠವಾದುದನ್ನು ಸಾಧಿಸಬೇಕಲ್ಲ.
ದಾರ್ಶನಿಕರು, ಹಿರಿಯರು ಈ ಬದುಕಿನ ಬಗ್ಗೆ ಸಾಕಷ್ಟು ಚಿಂತಿಸಿದರು. ನಮ್ಮ ದೇಶದ ಋಷಿಯೊಬ್ಬರು 'ಕಣ್ಣು ನೋಡುತ್ತದೆ, ಕಿವಿ ಕೇಳುತ್ತದೆ, ಕಾಲು ನಡೆಯುತ್ತದೆ, ಮನಸ್ಸು ಭಾವಿಸುತ್ತದೆ. ಎಲ್ಲಿಯವರೆಗೆ ಅಂದ್ರೆ, ಈ ದೇಹದಲ್ಲಿ ಉಸಿರು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ. ಉಸಿರಿನ ಜೊತೆಗೆ ಜೀವನವೂ ನಿಂತು ಬಿಡುತ್ತದೆ. ಬದುಕು ಎಂದರೆ ಉಸಿರಿನ ಲೀಲಾವಿಲಾಸ ಅಷ್ಟೆ' ಎಂದಿದ್ದಾರೆ. ಅದಕ್ಕಾಗಿ ಮನುಷ್ಯ ಸತ್ಯವನ್ನು ಅರ್ಥ ಮಾಡಿಕೊಳ್ಳಬೇಕು. ಮನುಷ್ಯ ತಾಯಿಯ ಗರ್ಭದಿಂದ ಭೂಮಿಗೆ ಬಂದಾಗ ಉಸಿರಿತ್ತು. ಹೆಸರು ಇರಲಿಲ್ಲ. ಭೂಮಿಯನ್ನು ಬಿಟ್ಟು ಹೋಗುವಾಗ ಉಸಿರು ಇರೋದಿಲ್ಲ. ಆದರೆ ಹೆಸರು ಇರುವಂತೆ ಮಾಡಿ ಹೋಗಬೇಕು. ಅದು ಜೀವನದ ಸಾರ್ಥಕತೆ. ಮನುಷ್ಯ ಎಷ್ಟು ವರ್ಷ ಬದುಕಿದ ಎನ್ನುವುದು ಮುಖ್ಯ ಅಲ್ಲ. ಅವ ಹೇಗೆ ಬದುಕಿದ ಎನ್ನುವುದು ಮುಖ್ಯ. ಅದಕ್ಕೆ ಮನುಷ್ಯ ಸುಂದರವಾದ ಬದುಕು ಕಟ್ಟಿಕೊಳ್ಳಬೇಕು. ಬದುಕು ಸುಂದರವಾಗಬೇಕಾದರೆ ನಿರುತ್ಸಾಹ, ಚಿಂತೆ, ದುಃಖ, ನೋವುಗಳಿಂದ ಹೊರಬರಬೇಕಾಗುತ್ತದೆ. ಮನುಷ್ಯನ ಜೀವನದಲ್ಲಿ ಕ್ರಿಯಾಶೀಲತೆ, ಉತ್ಸಾಹಗಳು ಮನೆ ಮಾಡಬೇಕಾಗುತ್ತದೆ. ನಿಸರ್ಗದ ಕರುಣೆಯಿಂದ ಬಂದ ಈ ಬದುಕನ್ನು ಯಾರೂ ಹಾಳು ಮಾಡಿಕೊಳ್ಳಬಾರದು. 'ಮಾನವ ಜನ್ಮ ಬಹಳ ದೊಡ್ಡದು, ಇದು ಹಾನಿ ಮಾಡಬೇಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ' ಎಂದರು ದಾಸರು.

ಬದುಕು ಬಹಳ ದೊಡ್ಡದು, ಇದನ್ನು ನಾವು ಎಲ್ಲಿ ಹಾನಿ ಮಾಡಿಕೊಂಡಿದ್ದೇವೆ ಎನ್ನುವುದು ಚಿಂತನೆಯ ವಿಷಯ. ಮನುಷ್ಯ ಗಾತ್ರದಲ್ಲಿ ಬಹಳ ಚಿಕ್ಕವನಾದರೂ ಪಾತ್ರದಲ್ಲಿ ಬಹಳ ದೊಡ್ಡವನು. ಅದೇ ಮನುಷ್ಯನ ವೈಶಿಷ್ಟ್ಯ. ಒಂದು ಬೀಜ ಇದೆ. ಅದನ್ನು ಒಡೆದು ನೋಡಿದರೆ ಏನೂ ಇರೋದಿಲ್ಲ. ಆದರೆ, ಬೀಜಕ್ಕೆ ಒಂದಿಷ್ಟು ಗಾಳಿ, ನೀರು, ಬೆಳಕು, ಮಣ್ಣಿನ ಸಂಪರ್ಕ ಬಂದರೆ ಏನೂ ಇಲ್ಲದ ಬೀಜದೊಳಗಿಂದ ಒಂದು ಸಸಿ ಹೊರಗೆ ಬರುತ್ತದೆ. ಹಾಗೆಯೇ ಮನುಷ್ಯ ನೋಡಲು ಏನೂ ಇಲ್ಲ ಎಂದು ಅನ್ನಿಸಬಹುದು. ಆದರೆ ಅವನೊಳಗೆ ಒಂದು ಶಕ್ತಿ ಇದೆ. ಆ ಶಕ್ತಿಯಿಂದ ಅವನು ದೊಡ್ಡವನಾಗುತ್ತಾನೆ. ಎಲ್ಲ ಪಶು ಪಕ್ಷಿ ಪ್ರಾಣಿಗಳಿಗಿಂತ ಮನುಷ್ಯ ಯಾಕೆ ದೊಡ್ಡವನಾಗುತ್ತಾನೆ ಎಂದರೆ ಮನುಷ್ಯನ ಶಕ್ತಿಯ ವಿಕಾಸಕ್ಕೆ ಬಹಳ ದಾರಿಗಳಿವೆ. ಮನುಷ್ಯನ ಶಕ್ತಿಯ ವಿಕಾಸ ಆಗದೇ ಇದ್ದರೆ ಅವ ವೀರಪ್ಪನ್ ಆಗ್ತಾನೆ. ವಿಕಾಸ ಆದರೆ ಅವ ವಿಶ್ವೇಶ್ವರಯ್ಯ ಆಗ್ತಾನೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಏಪ್ರಿಲ್ 21, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಅಷ್ಟಮಿ ಗಂ. 18-59 ನಕ್ಷತ್ರ: ಉತ್ತರಾಷಾಢ ಗಂ. 12-37 ಯೋಗ: ಸಾಧ್ಯ ಗಂ. 23-00, ಕರಣ: ಬಾಲವ ಗಂ. 7-06, ಮೇಷ ಮಾಸದ 08 ನೇ ದಿನ.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-17 **ಸೂರ್ಯಾಸ್ತ:** 06-41
ಮುಸ್ಲಿಂ ದಿನಾಂಕ: 22 ಶವ್ವಾಲ್
ಅದೃಷ್ಟ ಸಂಖ್ಯೆ: 1, 13

ಮೇಷ: ಯಾವುದೇ ಹೊಸ ಉದ್ಯೋಗ ಒಪ್ಪಿಕೊಳ್ಳುವಾಗ ಅಥವಾ ಕರಾರಿಗೆ ಸಹಿ ಮಾಡುವಾಗ ಜಾಣತನದಿಂದ ನಿಯಮಗಳನ್ನು ಸಂಪೂರ್ಣವಾಗಿ ಓದಿ ತಿಳಿದು ಒಪ್ಪಿಕೊಳ್ಳಿ. ಮೋಸ ಹೋಗುವ ಲಕ್ಷಣಗಳಿವೆ.

ವೃಷಭ: ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ. ವಿದ್ಯಾರ್ಥಿಗಳಿಗೆ ಮಿತ್ರವರ್ಗದವರ ಸಹವಾಸ ಕಂಡುಬರುವುದು. ಪರೀಕ್ಷೆಗೆ ಬೇಕಾದ ಪೂರ್ವತಯಾರಿ ಮಾಡಿ.

ಮಿಥುನ: ಕೆಲಸದ ವಿಷಯದಲ್ಲಿ ಭಯಪಡುವುದು ಸರಿಯಲ್ಲ, ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ತಾನಾಗಿಯೇ ಪರಿಹಾರಗೊಳ್ಳಲಿವೆ. ಹಣಕಾಸಿನ ವ್ಯಾಮೋಹ ತೊಂದರೆಗಳಿಗೆ ಕಾರಣವಾಗದಂತೆ ನೋಡಿಕೊಳ್ಳಿ.

ಕರ್ಕಾಟಕ: ದಡ ಸೇರುವ ಮೊದಲೇ ಅಂಬಿಗನನ್ನು ಹೀಯಾಳಿಸುವ ಕೆಲಸ ನಿಮ್ಮಿಂದಾಗಬಹುದು. ಸರ್ಕಾರಿ ಅಧಿಕಾರಿಗಳಿಗೆ ಸಹೋದ್ಯೋಗಿಗಳಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು.

ಸಿಂಹ: ನ್ಯಾಯಾಲಯದ ಮೆಟ್ಟಿಲನ್ನು ಏರುವ ವಿಚಾರಗಳು ನಡೆಯದಂತೆ ಎಚ್ಚರವಹಿಸಿ. ಬದುಕಿನಲ್ಲಿ ನಡೆಯುತ್ತಿರುವ ಅನೇಕ ಸಮಸ್ಯೆಗೆ ಮೂಲ ಏನೆಂಬುದನ್ನು ಕಂಡುಕೊಂಡರೆ ಪರಿಸ್ಥಿತಿ ಸುಧಾರಿಸುವುದು.

ಕನ್ಯಾ: ಮರಗೆಲಸ ಮಾಡುವ ವಿಶ್ವಕರ್ಮರಿಗೆ ಉದ್ಯೋಗದಲ್ಲಿ ಕೀರ್ತಿ ಸಂಪಾದನೆಯಾಗುವುದು. ಜಾಹೀರಾತುಗಳಿಂದ ವ್ಯಾಪಾರದಲ್ಲಿ ಲಾಭ ಪ್ರಾಪ್ತಿ. ತ್ಯಾಗದ ಮನೋಭಾವ ಅನಿವಾರ್ಯ.

ತುಲಾ: ದಾನ-ಧರ್ಮ ಪ್ರವೃತ್ತಿಯಿಂದ ಶುಭಫಲಗಳು ಅನುಭವಕ್ಕೆ ಬರಲಿವೆ. ಹಣಕಾಸಿನ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿದರೆ ಲೇಸು. ಗಣಪತಿಯನ್ನು ಆರಾಧಿಸಿ.

ವೃಶ್ಚಿಕ: ಉದ್ವೇಗ ಹಾಗೂ ಕೆಲ ವೈಮನಸ್ಸುಗಳು ವೈರಿಗಳಿಗೆ ಅಸ್ತ್ರವಾಗದಂತೆ ಜಾಗ್ರತೆ ವಹಿಸಿ. ಸಗಟು ವ್ಯಾಪಾರಿಗಳಿಗೆ ಒಳ್ಳೆಯ ಸಮಯ. ಸಂಜೆಯ ಸಮಯದಲ್ಲಿ ಶಿರೋವೇದನ ಕಾಡಲಿದೆ.

ಧನು: ಜಾನುವಾರು ಸಾಕಣೆ ಮಾಡುವವರಿಗೆ ಅವುಗಳ ಆಮದು ಅಥವಾ ರಫ್ತಿನ ವಿಚಾರವಾಗಿ ಸಮಸ್ಯೆಗಳು ಉಂಟಾಗಬಹುದು. ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಪಾಠವನ್ನು ಬೋಧಿಸುವುದು.

ಮಕರ: ಕುಟುಂಬದಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆಯನ್ನು ಕಳೆದುಕೊಳ್ಳಬೇಡಿ. ಸಮಾಧಾನ ಇರಲಿ. ಆಡಳಿತಾರೂಢ ಜನರ ಸಂಪರ್ಕದಿಂದ ಕೆಲಸಗಳನ್ನು ಸಾಧಿಸಿಕೊಳ್ಳಲು ಕಷ್ಟವೆನಿಸುವುದು.

ಕುಂಭ: ಸಿನಿಮಾ ನಟ–ನಟಿಯರಿಗೆ ಅವಕಾಶಗಳು ದೊರೆಯಲಿವೆ. ಬೇರೆಯವರ ಬಳಿ ಹೋರಾಟ ಮಾಡಿ ಕೆಲಸ ಮಾಡಿಸಿಕೊಳ್ಳುವ ಬದಲು ಸ್ವಂತವಾಗಿ ಕೆಲಸ ಮಾಡುವುದು ಉತ್ತಮವೆಂದು ಅನಿಸಲಿದೆ.

ಮೀನ: ಬಾಲ್ಯದ ಸಮಯದಲ್ಲಿ ಆದ ದೈಹಿಕ ಹೊಡೆತದ ನೋವುಗಳು ಕಾಡಲಿವೆ. ವಿದ್ಯಾಭ್ಯಾಸದ ಜೊತೆಯಲ್ಲಿ ಸಂಪಾದನೆ ಮಾಡುವ ಆಸೆಗೆ ಪೂರಕವಾದ ವಾತಾವರಣ ದೇವತಾನುಗ್ರಹದಿಂದ ಲಭಿಸುವುದು.

ಪದಬಂಧ 6018

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೆಳಮುಖವಾಗಿ ಹೋಗುವುದು (4)
3.ಮೂಲಿಕೆಗಳನ್ನು ಬಟ್ಟಿಯಿಳಿಸಿ ತೆಗೆದ ರಸ (3)
5.ನಿಂತು ನಿಂತು ಬರುವ ಅಸ್ಪಷ್ಟ ಮಾತು (3)
7.ಹಲ್ಲುಗಳಿಗೆ ಆಧಾರವಾಗಿರುವ ಮಾಂಸಖಂಡ (3)
8.ಎಲ್ಲರೂ ಒಟ್ಟಾಗಿ ಹಾಡುವಿಕೆ (5)
11.ಗದ್ದಲ ಇಲ್ಲೇ ಕೇಳುತ್ತಿದೆ (3)
12.ಬಕ್ಕ ತಲೆಯವನು ನೀಡಿದ ಜೋಳದ ರೊಟ್ಟಿ (3)
15.ಪಕ್ಷದೊಳಗೆ ಪ್ರತ್ಯಕ್ಷವೇ ವಿರುದ್ಧ! (3)
16.ಅಕ್ಕಪಕ್ಕ ಎಂದು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1.ಎಣ್ಣೆ ಮಜ್ಜನಕ್ಕೇನೂ ಭಂಗವಿಲ್ಲ ಬಿಡಿ! (3)
2.ಕಸದ ಗುಡ್ಡೆ ಇಲ್ಲಿದೆ (2)
3.ಕೈಯಲ್ಲಿ ಹಿಡಿದಿರುವ ಕಚ್ಚಾಪ್ರತಿ (3)
4.ಘೋರವಾದ ದಂಡನೆಯನ್ನು ಹೀಗೂ ಹೇಳುವರು (4)
6.ಆ ದಿವಸ ತಂದುಕೊಂಡ ಕಾಲುಕಡಿ (3)
7.ಇದು ಕೆಲಸಕ್ಕೆ ಬಾರದ ಮಾತು (5)
9.ಮುಸಲ್ಮಾನರ ದೊರೆ (3)
10.ಈ ಪರಿಯಾಗಿ ಅತಿಯಾದ ದುಃಖ ಬಂದಿದೆ (4)
11.ಬೆಳಕಿನ ಕಿಂಡಿಯಿದು (3)
13.ರೀತಿಯೊಡನೆ ಬಂದ ಸಂಪ್ರದಾಯ (3)
14.ಕೂರ್ಮವಿಲ್ಲಿ ತಲೆಕೆಳಗಾಗಿದೆಯಲ್ಲಾ (2)



6017ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನವಯೌವ್ವನ
3.ಕಳಸ 5.ದಿನ
7.ಬಳಗ 8.ತಪ್ಪುಕಲ್ಪನೆ
11.ಹಮ್ಮೀರ 12.ಣಕ
14.ಉಬ್ಧಕ 15.ದೇಹಪ್ರಕೃತಿ

ಮೇಲಿಂದ ಕೆಳಕ್ಕೆ:
1.ನಸರಾಣಿ 2.ವಸ್ತಾದಿ
4.ಸಭಾಂಗಣ 6.ನವೀಕರಣ
7.ಬಣ್ಣನೆ 8.ತವರ
9.ತಹಸೀಲು 10.ಅಪಖ್ಯಾತಿ
13.ಕಸ್ತಹ

ಸುಡೊಕು 6403

	9			3			6	
4					7		2	9
	8	3		9		1		7
		4			9		8	
	2			5				3
8			2				4	
	4			2		8		
			9					5
2		8		7			3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6402 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಕಮಿಷನ್ ಹೆಚ್ಚಳಕ್ಕೆ 3 ತಿಂಗಳ ಗಡುವು

ಬೇಡಿಕೆ ಈಡೇರಿಸದಿದ್ದರೆ ಪ್ರತಿಭಟನೆ: ಎಲ್‌ಪಿಜಿ ವಿತರಕರು

ಭೋಪಾಲ್ (ಪಿಟಿಐ): ಕೇಂದ್ರ ಸರ್ಕಾರವು ಮೂರು ತಿಂಗಳೊಳಗೆ ಕಮಿಷನ್ ಹೆಚ್ಚಳ ಸೇರಿ ಎಲ್‌ಪಿಜಿ ವಿತರಕರ ವಿವಿಧ ಬೇಡಿಕೆ ಈಡೇರಿಸಬೇಕಿದೆ. ಇಲ್ಲವಾದರೆ ದೇಶದಾದ್ಯಂತ ಅನಿರ್ದಿಷ್ಟಾವಧಿ ವರೆಗೆ ಪ್ರತಿಭಟನೆ ನಡೆಸಲಾಗುವುದು ಎಂದು ಎಲ್‌ಪಿಜಿ ವಿತರಕರ ಸಂಘ ಗಡುವು ನೀಡಿದೆ.

ಭೋಪಾಲ್‌ನಲ್ಲಿ ಶನಿವಾರ ಸಂಘದ ಸಮಾವೇಶ ಆಯೋಜಿಸಲಾಗಿತ್ತು. ವಿವಿಧ ರಾಜ್ಯದ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸಮಾವೇಶದಲ್ಲಿ ಮಂಡಿಸಿದ ಹೋರಾಟದ ನಿರ್ಣಯಕ್ಕೆ ಎಲ್ಲರೂ ಒಪ್ಪಿಗೆ ಸೂಚಿಸಿದ್ದಾರೆ ಎಂದು ಸಂಘದ ಅಧ್ಯಕ್ಷ ಬಿ.ಎಸ್. ಶರ್ಮಾ ತಿಳಿಸಿದ್ದಾರೆ.

ವಿತರಕರ ಬೇಡಿಕೆ ಈಡೇರಿಸುವಂತೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯಕ್ಕೆ ಪತ್ರ ಬರೆಯಲಾಗಿದೆ. ಪ್ರಸ್ತುತ ಕಡಿಮೆ ಕಮಿಷನ್ ನೀಡಲಾಗುತ್ತಿದೆ. ಇದರಿಂದ ಕಾರ್ಯಾಚರಣೆಯ ವೆಚ್ಚವನ್ನು ಸರಿದೂಗಿಸಲು ಆಗುವುದಿಲ್ಲ. ಕಮಿಷನ್ ಮೊತ್ತವನ್ನು ಕನಿಷ್ಠ ₹150ಕ್ಕೆ ಹೆಚ್ಚಿಸಬೇಕಿದೆ ಎಂದು ಒತ್ತಾಯಿಸಿದ್ದಾರೆ.

ಎಲ್‌ಪಿಜಿ ಸಿಲಿಂಡರ್ ವಿತರಣೆಯು ಬೇಡಿಕೆ ಮತ್ತು ಪೂರೈಕೆ ಮೇಲೆ ನಿರ್ಧರಿತವಾಗಲಿದೆ. ಆದರೆ, ತೈಲ ಉತ್ಪಾದನಾ ಕಂಪನಿಗಳು ಬೇಡಿಕೆ ಇಲ್ಲದಿದ್ದರೂ ಗೃಹಬಳಕೆಯೇತರ ಸಿಲಿಂಡರ್‌ಗಳನ್ನು ವಿತರಕರಿಗೆ ರವಾನಿಸುತ್ತವೆ. ಇದು ನಿಯಮಾವಳಿಗೆ ವಿರುದ್ಧವಾಗಿದೆ. ಈ ಪದ್ಧತಿಯನ್ನು ಕೂಡಲೇ ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಪ್ರಧಾನ ಮಂತ್ರಿ ಉಜ್ವಲಾ ಯೋಜನೆಯ ಸಿಲಿಂಡರ್ ವಿತರಣೆಯಲ್ಲಿ ಹಲವು ಸಮಸ್ಯೆಗಳಿವೆ. ಇವುಗಳನ್ನು ಬಗೆಹರಿಸಬೇಕಿದೆ. ನಿಗದಿತ ಅವಧಿಯಲ್ಲಿ ಈ ಬೇಡಿಕೆಗಳನ್ನು ಈಡೇರಿಸಬೇಕಿದೆ. ಇಲ್ಲವಾದರೆ ಹೋರಾಟ ಅನಿವಾರ್ಯ ಆಗಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಪಿಪಿಎಫ್: ಮೆಚ್ಯೂರಿಟಿಗೆ ಹತ್ತಿರ ಇದೆಯೇ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಸಾರ್ವಜನಿಕ ಭವಿಷ್ಯ ನಿಧಿಯಲ್ಲಿ (ಪಿಪಿಎಫ್) 15 ವರ್ಷಗಳಿಂದ ಹೂಡಿಕೆ ಮಾಡುತ್ತಿದ್ದೇನೆ. ಇನ್ನೇನು ಅದು ಮೆಚ್ಯೂರಿಟಿ ಅವಧಿಗೆ ಹತ್ತಿರ ಇದೆ. ಈಗ ಅದರಲ್ಲಿರುವ ಹಣ ಹಿಂಪಡೆದುಕೊಳ್ಳಬೇಕೆ ಅಥವಾ ಹೂಡಿಕೆ ಮುಂದುವರಿಸಬೇಕೆ ಎನ್ನುವ ಪ್ರಶ್ನೆ ಅನೇಕ ಹೂಡಿಕೆದಾರರಿಗೆ ಕಾಡುತ್ತದೆ. ಈ ನಿಟ್ಟಿನಲ್ಲಿ ಪಿಪಿಎಫ್ ಮೆಚ್ಯೂರಿಟಿ ಸಂದರ್ಭದಲ್ಲಿ ಹೂಡಿಕೆದಾರನಿಗೆ ಇರುವ ವಿವಿಧ ಆಯ್ಕೆಯ ಬಗ್ಗೆ ವಿವರವಾಗಿ ತಿಳಿಯೋಣ.

ಪಿಪಿಎಫ್ ಎಂದರೇನು?: ಸಾರ್ವಜನಿಕ ಭವಿಷ್ಯ ನಿಧಿಯು 15 ವರ್ಷದ ದೀರ್ಘಾವಧಿಯ ಉಳಿತಾಯ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು 1986ರಲ್ಲಿ ಇದನ್ನು ಪರಿಚಯಿಸಿದೆ. ಪ್ರಮುಖ ಬ್ಯಾಂಕ್‌ಗಳು, ಅಂಚೆ ಕಚೇರಿಯಲ್ಲಿ ಪಿಪಿಎಫ್ ಹೂಡಿಕೆ ಆರಂಭಿಸಬಹುದು.

ಪಿಪಿಎಫ್‌ನಲ್ಲಿ ಒಂದು ವರ್ಷಕ್ಕೆ ಕನಿಷ್ಠ ಹೂಡಿಕೆ ಮೊತ್ತ ₹500 ಆಗಿದ್ದು, ಗರಿಷ್ಠ ಹೂಡಿಕೆ ಮೊತ್ತ ₹1.5 ಲಕ್ಷ ಆಗಿದೆ. ಈ ಹೂಡಿಕೆಯಲ್ಲಿನ ಮೊತ್ತಕ್ಕೆ ಕೇಂದ್ರ ಸರ್ಕಾರವೇ ಗ್ಯಾರಂಟಿ ನೀಡುತ್ತದೆ. ಪಿಪಿಎಫ್‌ನಲ್ಲಿ ಹೂಡಿಕೆ ಮಾಡುವಾಗ, ಅದರ ಮೇಲೆ ಗಳಿಸುವ ಬಡ್ಡಿ ಮತ್ತು ನಗದೀಕರಣದ ಸಂದರ್ಭದಲ್ಲಿ ತೆರಿಗೆ ವಿನಾಯಿತಿ ಇದೆ. ಇದು ಅದನ್ನು ಆಕರ್ಷಕ ಹೂಡಿಕೆಯ ಆಯ್ಕೆಯನ್ನಾಗಿಸಿದೆ.

ಸರ್ಕಾರವೇ ಮೂರು ತಿಂಗಳಿಗೊಮ್ಮೆ ಪಿಪಿಎಫ್ ಬಡ್ಡಿದರವನ್ನು ಪರಿಷ್ಕರಿಸುತ್ತದೆ. ಪ್ರಸ್ತುತ ಶೇ 7.1ರಷ್ಟು ನಿಗದಿಪಡಿಸಲಾಗಿದೆ. ಇದರಲ್ಲಿ ಹೂಡಿಕೆ ಮಾಡಿದ ಹಣವನ್ನು 5 ವರ್ಷದ ನಂತರ ಭಾಗಶಃ ಬಿಡಿಸಿಕೊಳ್ಳಬಹುದು. ಆದರೆ, ಪೂರ್ತಿ ಹಣ ವಾಪಸ್ ಪಡೆಯಬೇಕಾದರೆ 15 ವರ್ಷಗಳ ನಂತರವಷ್ಟೇ ಸಾಧ್ಯ.

ಮೆಚ್ಯೂರಿಟಿಗೆ ಬಂದಾಗ ಇರುವ ಆಯ್ಕೆಗಳೇನು?

- ಪಿಪಿಎಫ್‌ನಲ್ಲಿ ಹೂಡಿಕೆ ಮಾಡಿದ 15 ವರ್ಷಗಳ ಬಳಿಕ ಮೆಚ್ಯೂರಿಟಿ ಅವಧಿ ಬರುತ್ತದೆ. ಈ ಸಂದರ್ಭದಲ್ಲಿ ಹೂಡಿಕೆಯ ಮೊತ್ತ, ಅದರ ಮೇಲಿನ ಬಡ್ಡಿ ಗಳಿಕೆಯನ್ನೂ ಪೂರ್ತಿಯಾಗಿ ವಾಪಸ್ ಪಡೆದುಕೊಳ್ಳಬಹುದು. ವಿಶೇಷ ಅಂದರೆ, ಪಿಪಿಎಫ್ ನಗದೀಕರಣದ ಸಂದರ್ಭದಲ್ಲಿ ಯಾವುದೇ ತೆರಿಗೆ ಅನ್ವಯಿಸುವುದಿಲ್ಲ. ಪಿಪಿಎಫ್ ವಿತ್ ಡ್ರಾ ಮಾಡಲು ನಿಮ್ಮ ಪಿಪಿಎಫ್ ಪಾಸ್ ಪುಸ್ತಕ ಮತ್ತು ಕೆವೈಸಿ ವಿವರಗಳೊಂದಿಗೆ ಬ್ಯಾಂಕ್ ಅಥವಾ ಅಂಚೆ ಕಚೇರಿಗೆ ಫಾರಂ 'ಸಿ' ಸಲ್ಲಿಕೆ ಮಾಡಬೇಕು.
- ಪಿಪಿಎಫ್‌ನಲ್ಲಿನ ಹೂಡಿಕೆಯು ಮೆಚ್ಯೂರಿಟಿಗೆ ಬಂದ ನಂತರ ಹೊಸ ಹೂಡಿಕೆ ಮಾಡದೆ ಹೂಡಿಕೆ ಅವಧಿಯನ್ನು ವಿಸ್ತರಿಸಿಕೊಳ್ಳಲು ಅವಕಾಶವಿದೆ. ಹೂಡಿಕೆ ಅವಧಿ ಮುಗಿದ ಬಳಿಕ ನಿಮ್ಮ ಖಾತೆಯಲ್ಲಿರುವ ಅಸಲು ಮತ್ತು ಬಡ್ಡಿ ಮೊತ್ತವನ್ನು ಮತ್ತೆ ಐದು ವರ್ಷ ಹೂಡಿಕೆಯಾಗಿ ಮುಂದುವರಿಸಬಹುದು. ಯಾವುದೇ ಹೆಚ್ಚುವರಿ ಹೂಡಿಕೆ ಮಾಡದೆ ಇದ್ದರೂ ನಿಮ್ಮ ಖಾತೆಯಲ್ಲಿ ಈಗಾಗಲೇ ಇರುವ ಮೊತ್ತದ ಮೇಲೆ ಪ್ರಸ್ತುತ ನಿಗದಿಯಾಗಿರುವ ಬಡ್ಡಿದರದ ಲೆಕ್ಕಾಚಾರದಲ್ಲಿ ಗಳಿಕೆ ಸಿಗುತ್ತದೆ. ಅಲ್ಲದೆ, ಹೂಡಿಕೆ ಅವಧಿ ವಿಸ್ತರಿಸಿದ ಬಳಿಕವೂ ವರ್ಷಕ್ಕೊಮ್ಮೆ ಭಾಗಶಃ ಮೊತ್ತವನ್ನು ನಗದೀಕರಣ ಮಾಡಿಕೊಳ್ಳಲು ಅವಕಾಶವಿದೆ.
- ಹೂಡಿಕೆಯು ಮೆಚ್ಯೂರಿಟಿಗೆ ಬಂದ ನಂತರ ಹೊಸ ಹೂಡಿಕೆಯನ್ನು ಮುಂದುವರಿಸುವ ಜೊತೆ ಜೊತೆಗೆ ಹೂಡಿಕೆ ಅವಧಿಯನ್ನು ವಿಸ್ತರಿಸಿಕೊಳ್ಳಲು ಅವಕಾಶವಿದೆ. 15 ವರ್ಷಗಳ ಹೂಡಿಕೆ ಅವಧಿ ಮುಗಿದ ಬಳಿಕ ಮತ್ತೆ ಐದು ವರ್ಷಕ್ಕೆ ಹೂಡಿಕೆ ಮುಂದುವರಿಸಲು ಸಾಧ್ಯವಿದೆ. ಆದರೆ, ಮೆಚ್ಯೂರಿಟಿಯ ನಂತರದ ಒಂದು ವರ್ಷದ ಒಳಗೆ ಹೂಡಿಕೆ ಮುಂದುವರಿಸುವ ಬಗ್ಗೆ ನೀವು ನಿಮ್ಮ ಬ್ಯಾಂಕ್/ಅಂಚೆ ಕಚೇರಿಗೆ ಮಾಹಿತಿ ಒದಗಿಸಬೇಕು. ಹೂಡಿಕೆ ಅವಧಿ ಮುಂದುವರಿಸಿದಾಗ ವರ್ಷಕ್ಕೆ ಕನಿಷ್ಠ ₹500 ಮತ್ತು ಗರಿಷ್ಠ ₹1.5 ಲಕ್ಷದವರೆಗೆ ಹೂಡಿಕೆ ಮಾಡುವ ಅವಕಾಶ ಸಿಗುತ್ತದೆ.

ಈ ಅಂಶಗಳು ತಿಳಿದಿರಲಿ

- ಪಿಪಿಎಫ್ ಹೂಡಿಕೆ ಅವಧಿ ವಿಸ್ತರಿಸುವಾಗ ತಪ್ಪದೇ ಫಾರಂ 'ಎಚ್' ಸಲ್ಲಿಸಿ. ಇಲ್ಲದಿದ್ದರೆ ಪಿಪಿಎಫ್‌ನಲ್ಲಿ ಹೂಡಿಕೆ ಮುಂದುವರಿಸಲು ಸಾಧ್ಯವಾಗುವುದಿಲ್ಲ.
- ಪಿಪಿಎಫ್ ಮೆಚ್ಯೂರಿಟಿ ಅವಧಿ ಮುಗಿದ ಬಳಿಕ ನಗದೀಕರಣಕ್ಕೆ ಮುಂದಾಗದಿದ್ದರೆ ಹೂಡಿಕೆ ಅವಧಿ ಸ್ವಯಂಚಾಲಿತವಾಗಿ ಮತ್ತೆ ಐದು ವರ್ಷಗಳಿಗೆ ವಿಸ್ತಾರವಾಗುತ್ತದೆ. ಆದರೆ, ಸ್ವಯಂಚಾಲಿತವಾಗಿ ವಿಸ್ತರಿತವಾದರೆ ಪಿಪಿಎಫ್ ಖಾತೆಯಲ್ಲಿ ಹೊಸ ಮೊತ್ತ ಡೆಪಾಸಿಟ್ ಮಾಡಲು ಸಾಧ್ಯವಾಗುವುದಿಲ್ಲ. ಫಾರಂ 'ಎಚ್' ಸಲ್ಲಿಸಿದರೆ ಮಾತ್ರ ಡೆಪಾಸಿಟ್ ಮಾಡಬಹುದು.
- ಪಿಪಿಎಫ್ ಹೂಡಿಕೆ ವಿಸ್ತರಿಸುವಾಗಲೂ ಅದರ ಮೇಲಿನ ಬಡ್ಡಿ ಗಳಿಕೆ ಮತ್ತು ನಗದೀಕರಣದ ವೇಳೆ ಯಾವುದೇ ತೆರಿಗೆ ಅನ್ವಯಿಸುವುದಿಲ್ಲ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಹೆಚ್ಚಿದ ಖರೀದಿ ಉತ್ಸಾಹ

ಏಪ್ರಿಲ್ 17ಕ್ಕೆ ಕೊನೆಗೊಂಡ ವಾರದಲ್ಲಿ ಷೇರು ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 78,553 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 4.52ರಷ್ಟು ಗಳಿಸಿಕೊಂಡಿದೆ. 23,851 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 4.48ರಷ್ಟು ಜಿಗಿದಿದೆ.

ಉಳಿದಂತೆ ಬಿಎಸ್ಇ ಮಿಡ್‌ಕ್ಯಾಪ್ ಸೂಚ್ಯಂಕ ಶೇ 4.24ರಷ್ಟು ಗಳಿಸಿಕೊಂಡಿದ್ದರೆ, ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 4.69ರಷ್ಟು ಜಿಗಿದಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಉತ್ಸಾಹ, ಸಗಟು ಮತ್ತು ಚಿಲ್ಲರೆ ಹಣದುಬ್ಬರ ಇಳಿಕೆ, ಆರ್‌ಬಿಐ ಮತ್ತಷ್ಟು ರೆಪೊ ದರ ಇಳಿಕೆ ಮಾಡಬಹುದು ಎಂಬ ವಿಶ್ವಾಸ, ಕಂಪ್ಯೂಟರ್, ಮೊಬೈಲ್ ಫೋನ್ ಮತ್ತು ಇನ್ನಿತರ ಕೆಲ ಉತ್ಪನ್ನಗಳ ಮೇಲೆ ಪ್ರತಿ ಸುಂಕ ವಿನಾಯಿತಿ ಸೇರಿ ಹಲವು ಅಂಶಗಳು ಷೇರುಪೇಟೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಿವೆ.

ವಾರದ ಲೆಕ್ಕಾಚಾರದಲ್ಲಿ ವಲಯವಾರು ಪ್ರಗತಿ ನೋಡಿದಾಗ ಬಿಎಸ್ಇ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 7.08, ಬ್ಯಾಂಕ್ ಸೂಚ್ಯಂಕ ಶೇ 6.66, ಫೈನಾನ್ಸ್ ಶೇ 6.13, ಬಿಎಸ್ಇ ಗ್ರಾಹಕ ಬಳಕೆ ವಸ್ತುಗಳ ಸೂಚ್ಯಂಕ ಶೇ 4.48, ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕ ಶೇ 4.38ರಷ್ಟು ಗಳಿಸಿಕೊಂಡಿವೆ. ಬಿಎಸ್ಇ ಸೂಚ್ಯಂಕದಲ್ಲಿ ಯಾವುದೇ ವಲಯ ಸಹ ಕುಸಿತ ಕಂಡಿಲ್ಲ.

ವಾರದ ಗಳಿಕೆ ಲೆಕ್ಕಾಚಾರದಲ್ಲಿ ನಿಫ್ಟಿ ಸೂಚ್ಯಂಕ ನೋಡಿದಾಗ ಇಂಡಸ್ ಇಂಡ್ ಬ್ಯಾಂಕ್ ಶೇ 17.1, ಎಕ್ಸಿಸ್ ಬ್ಯಾಂಕ್ ಶೇ 12.15, ಜಿಯೊ ಫೈನಾನ್ಷಿಯಲ್ ಶೇ 11.57, ಅದಾನಿ ಪೋರ್ಟ್ಸ್ ಶೇ 11.43, ಟ್ರೆಂಟ್ ಶೇ 11.01, ಶ್ರೀರಾಮ್ ಫೈನಾನ್ಸ್ ಶೇ 10.78, ಏರ್‌ಟೆಲ್ ಶೇ 9.98, ಒಎನ್‌ಜಿಸಿ ಶೇ 9.61, ಎಟರ್‌ನಲ್ ಲಿಮಿಟೆಡ್ ಶೇ 9.57, ಐಷರ್ ಮೋಟರ್ಸ್ ಶೇ 8.14, ಐಸಿಐಸಿಐ ಬ್ಯಾಂಕ್ ಶೇ 8.11, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 7.99ರಷ್ಟು ಗಳಿಸಿಕೊಂಡಿವೆ. ನಿಫ್ಟಿ 50 ಸೂಚ್ಯಂಕದಲ್ಲಿ ಯಾವುದೇ ಕಂಪನಿ ಕುಸಿತ ಕಂಡಿಲ್ಲ.

ಮುನ್ನೋಟ: ಈ ವಾರ ಹ್ಯಾವೆಲ್ಸ್ ಇಂಡಿಯಾ, ಎಚ್‌ಸಿಎಲ್ ಟೆಕ್ನಾಲಜೀಸ್, ಎಯು ಸ್ಮಾಲ್ ಫೈನಾನ್ಸ್ ಬ್ಯಾಂಕ್, ಡೆಲ್ಟಾ ಕಾರ್ಪ್, ಟಾಟಾ ಕಮ್ಯೂನಿಕೇಷನ್ಸ್, ವಾರಿ ಎಂಜಿನಿಯರ್ಸ್, ಬಜಾಜ್ ಹೌಸಿಂಗ್ ಫೈನಾನ್ಸ್, ಮೈಂಡ್ ಟ್ರೀ, ಎಚ್‌ಯುಎಲ್, ಎಕ್ಸಿಸ್ ಬ್ಯಾಂಕ್, ನೆಸ್ಲೆ ಇಂಡಿಯಾ, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಕಂಪನಿ, ಮಾರುತಿ ಸುಜುಕಿ, ಶ್ರೀರಾಮ್ ಫೈನಾನ್ಸ್, ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಸಂಕ್ಷಿಪ್ತ ಸುದ್ದಿ

ಎಫ್‌ಪಿಐ: ₹8,500 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ದೇಶದ ಆರ್ಥಿಕತೆಯು ಚೇತರಿಕೆಯ ಹಳಿಗೆ ಮರಳಿರುವುದು ವಿದೇಶಿ ಬಂಡವಾಳ ಹೂಡಿಕೆದಾರರಲ್ಲಿ (ಎಫ್‌ಪಿಐ) ವಿಶ್ವಾಸ ಹೆಚ್ಚಿಸಿದೆ. ಹಾಗಾಗಿ, ಏಪ್ರಿಲ್ 15ರಿಂದ 17ರ ವರೆಗೆ ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ₹8,500 ಕೋಟಿ ಹೂಡಿಕೆ ಮಾಡಿದ್ದಾರೆ.

ಪ್ರಸಕ್ತ ತಿಂಗಳ ಮೊದಲ ಎರಡು ವಾರಗಳಲ್ಲಿ ₹23,103 ಕೋಟಿ ಬಂಡವಾಳವನ್ನು ಹಿಂಪಡೆದಿದ್ದರು. ಜನವರಿ ಆರಂಭದಿಂದ ಇಲ್ಲಿಯವರೆಗೆ ಒಟ್ಟು ₹1.4 ಲಕ್ಷ ಕೋಟಿ ಬಂಡವಾಳ ಹಿಂಪಡೆದಿದ್ದಾರೆ.

'ಅಮೆರಿಕದ ವ್ಯಾಪಾರ ನೀತಿಯು ಸ್ಥಿರತೆ ಕಾಯ್ದುಕೊಳ್ಳುತ್ತಿದೆ. ದೇಶೀಯ ಷೇರುಪೇಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದಿದೆ. ಈ ಬೆಳವಣಿಗೆಯು ವಿದೇಶಿ ಬಂಡವಾಳದ ಒಳಹರಿವು ಏರಿಕೆಗೆ ಕಾರಣವಾಗಿದೆ' ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ವ್ಯವಸ್ಥಾಪಕ (ಸಂಶೋಧನೆ) ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಮಹಿಳಾ ಸ್ವಸಹಾಯ ಗುಂಪುಗಳಿಗೆ ₹20 ಸಾವಿರ ಕೋಟಿ ಸಾಲ

ಚೆನ್ನೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಬ್ಯಾಂಕ್, ಮಹಿಳಾ ಸ್ವಸಹಾಯ ಗುಂಪುಗಳಿಗೆ ₹20 ಸಾವಿರ ಕೋಟಿ ಸಾಲ ವಿತರಿಸುವ ಗುರಿ ಹೊಂದಿದೆ.

ದೇಶದ ಒಂದು ಕೋಟಿ ಮಹಿಳಾ ಸ್ವಸಹಾಯ ಗುಂಪುಗಳ ಸಬಲೀಕರಣಕ್ಕೆ ನಿರ್ಧರಿಸಲಾಗಿದೆ. ಇದರ ಭಾಗವಾಗಿ ಸಾಲ ವಿತರಿಸಲು ನಿರ್ಧರಿಸಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ. ಭುವನೇಶ್ವರದಲ್ಲಿ ನಡೆದ ಸ್ವಸಹಾಯ ಗುಂಪುಗಳಿಗೆ ಬೃಹತ್ ಸಾಲ ವಿತರಣಾ ಸಮಾರಂಭದಲ್ಲಿ 9,961 ಸ್ವಸಹಾಯ ಸಂಘಗಳಿಗೆ ₹509 ಕೋಟಿ ಸಾಲ ವಿತರಿಸಲಾಗಿದೆ. ತಳಮಟ್ಟದಲ್ಲಿ ಮಹಿಳಾ ಉದ್ಯಮಶೀಲತೆಗೆ ಉತ್ತೇಜನ ನೀಡುವುದು ಬ್ಯಾಂಕ್‌ನ ಗುರಿಯಾಗಿದೆ ಎಂದು ಹೇಳಿದೆ.

4ನೇ ವರ್ಷದ ಪುಣ್ಯ ಸ್ಮರಣೆ



ಶ್ರೀ ಪಿ.ರಾಮು
ಮಾವಳ್ಳಿ ರಾಮಣ್ಣ
(Retd. BDA Class-I Contractor)
ಜನನ: 09.11.1941 – ಮರಣ :21.04.2021
ನೀವು ನಮ್ಮನ್ನು ಅಗಲಿ ಇಂದಿಗೆ ನಾಲ್ಕು ವರ್ಷ ಕಳೆದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ.
ತಮ್ಮ ಸ್ಮರಣೆಯಲ್ಲಿರುವ
ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು

49th DEATH ANNIVERSARY
TRIBUTE We fondly remember

PROF. N. ANANTHACHAR
(05.09.1910 - 21.04.1976)
Founder Secretary, APS Institutions
On his 49th Death Anniversary, we pay our REVERENTIAL HOMAGE to a visionary educationist, compassionate leader, and the guiding force behind Acharya Patashala Institutions.
His pioneering spirit, deep commitment to learning, and noble ideals continue to inspire generations of students, educators, and administrators.
On behalf of the APS FAMILY
His legacy lives on - eternally etched in the heart of APS Family.
President General Secretary
(CA Dr. Vishnu Bharath Alampalli) (Prof. A. Prakash)

ಪುಣ್ಯಸ್ಮರಣೆ



ಶ್ರೀ ಜಿ. ಹೆಚ್. ಮುನಿರೆಡ್ಡಿ
ದಿ. ಗೌಡರ ಹನುಮಯ್ಯರೆಡ್ಡಿರವರ ಮಗ (ಗೋಣೆಘಟ್ಟಪುರ)
ಇವರು ದೈವಾಧೀನರಾದ ದಿನಾಂಕ : 11-03-2018

ಶ್ರೀಮತಿ ಗೌರಮ್ಮ
ದಿ. ಜಿ.ಹೆಚ್. ಮುನಿರೆಡ್ಡಿಯವರ ಧರ್ಮಪತ್ನಿ
ಇವರು ದೈವಾಧೀನರಾದ ದಿನಾಂಕ : 21-04-2021

ನೀವು ನಮ್ಮನ್ನಗಲಿ 7 ವರ್ಷ ಕಳೆದರೂ ಹಾಗೂ ನೀವು ನಮ್ಮನ್ನಗಲಿ 4 ವರ್ಷ ಕಳೆದರೂ ನಿಮ್ಮಿಬ್ಬರ ಸವಿನೆನಪು ನಮ್ಮ ಹೃದಯಗಳಲ್ಲಿ ಹಚ್ಚ ಹಸಿರಾಗಿ ಉಳಿದಿದೆ. ನಿಮ್ಮಿಬ್ಬರ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ನಿಮ್ಮ ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

ಬಿಎಚ್‌ಇಎಲ್ ವರಮಾನ ಏರಿಕೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್‌ಇಎಲ್) ₹27,350 ಕೋಟಿ ವರಮಾನ ಗಳಿಸಿದೆ.

2023–24ನೇ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ವರಮಾನದಲ್ಲಿ ಶೇ 19ರಷ್ಟು ಏರಿಕೆಯಾಗಿದೆ ಎಂದು ಕಂಪನಿಯು ಭಾನುವಾರ ತಿಳಿಸಿದೆ. ಇದೇ ಅವಧಿಯಲ್ಲಿ ಒಟ್ಟು ₹1.95 ಲಕ್ಷ ಕೋಟಿ ಮೌಲ್ಯದ ಆರ್ಡರ್ ಪಡೆಯಲಾಗಿದೆ ಎಂದು ತಿಳಿಸಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಕಂಪನಿಯ ವರಮಾನ ಹೆಚ್ಚಳವಾಗಿದೆ. ಹೊಸ ಆರ್ಡರ್‌ಗಳ ಸಂಖ್ಯೆಯಲ್ಲೂ ಏರಿಕೆಯಾಗಿದೆ. 2025–26ನೇ ಆರ್ಥಿಕ ವರ್ಷದಲ್ಲೂ ಇದೇ ಬೆಳವಣಿಗೆ ಯನ್ನು ಕಾಯ್ದುಕೊಳ್ಳಲಾಗುವುದು. ದೇಶೀಯ ಉತ್ಪಾದನೆಗೆ ಒತ್ತು ನೀಡುವ ಜೊತೆಗೆ, ಮಧ್ಯಸ್ಥಗಾರರ ಹಿತಕಾಯಲು ಬದ್ಧ ಎಂದು ಹೇಳಿದೆ.

ಸುಂಕ ಸಮರ: ಉದ್ಯೋಗಿಗಳ ಸಂಬಳ ಹೆಚ್ಚಳ ಮುಂದೂಡಿಕೆ

ಕುಸಿದ ಐ.ಟಿ ಕಂಪನಿ ಲಾಭ

ನವದೆಹಲಿ (ಪಿಟಿಐ): ಜಾಗತಿಕ ಸುಂಕ ಸಮರವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಐ.ಟಿ ಕಂಪನಿಗಳ ವರಮಾನ, ಹೊಸ ನೇಮಕಾತಿ ಮತ್ತು ಉದ್ಯೋಗಿಗಳ ಸಂಬಳದ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ತಜ್ಞರು ಹೇಳಿದ್ದಾರೆ.

2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಟಿಸಿಎಸ್, ಇನ್ಫೊಸಿಸ್ ಮತ್ತು ವಿಪ್ರೊ ಕಂಪನಿಯು ನಿರೀಕ್ಷಿತ ಮಟ್ಟದಲ್ಲಿ ನಿವ್ವಳ ಲಾಭಗಳಿಸಿಲ್ಲ. ಪೂರ್ಣ ಆರ್ಥಿಕ ವರ್ಷದಲ್ಲಿಯೂ ಕಂಪನಿಗಳು, ಹಲವು ಎಡರುತೊಡರು ಅನುಭವಿಸಿವೆ.

ಪ್ರಸ್ತುತ ಅಮೆರಿಕದ ಪ್ರತಿ ಸುಂಕ ನೀತಿಯು ಜಾಗತಿಕ ವ್ಯಾಪಾರ ಮಾರುಕಟ್ಟೆಯಲ್ಲಿ ಅನಿಶ್ಚಿತ ಸ್ಥಿತಿ ಸೃಷ್ಟಿಯಿದೆ. ಇದು ಐ.ಟಿ ಕಂಪನಿಗಳ ವರಮಾನ ಗಳಿಕೆ ಮೇಲೂ ಪರಿಣಾಮ ಬೀರಲಿದೆ ಎಂದು ಹೇಳಿದ್ದಾರೆ.

ವ್ಯಾಪಾರ ವಹಿವಾಟಿನ ಅನಿಶ್ಚಿತತೆಯಿಂದಾಗಿ ಉದ್ಯೋಗಿಗಳ ಸಂಬಳ ಏರಿಕೆಯನ್ನು ಮುಂದೂಡುವುದಾಗಿ ಟಿಸಿಎಸ್ ಘೋಷಿಸಿದೆ. ಮತ್ತೊಂದೆಡೆ ವಿಪ್ರೊ ಕೂಡ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಉದ್ಯೋಗಿಗಳ ವೇತನ ಏರಿಕೆ ಬಗ್ಗೆ ತಡವಾಗಿ ನಿರ್ಧಾರ ಕೈಗೊಳ್ಳುವುದಾಗಿ ಪ್ರಕಟಿಸಿದೆ.

ಹೊಸ ನೇಮಕಾತಿ ಕಥೆ ಏನು?: ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಗಳಲ್ಲಿ ಹೊಸ ನೇಮಕಾತಿಯು ಸ್ವಲ್ಪಮಟ್ಟಿಗೆ ಉತ್ತಮವಾಗಿತ್ತು. ಡಿಸೆಂಬರ್ ಮತ್ತು ಮಾರ್ಚ್ ತ್ರೈಮಾಸಿಕದ ನಡುವೆ ಟಿಸಿಎಸ್, ಇನ್ಫೊಸಿಸ್ ಮತ್ತು ವಿಪ್ರೊ ಕಂಪನಿಯು 1,438 ಹೊಸ ಉದ್ಯೋಗಿಗಳನ್ನು ನೇಮಿಸಿಕೊಂಡಿವೆ.

ಟಾಟಾ ಸಮೂಹದ ಟಿಸಿಎಸ್ ಕಂಪನಿಯು 2024–25ನೇ ಆರ್ಥಿಕ ವರ್ಷದಲ್ಲಿ 42 ಸಾವಿರ ಹೊಸಬರನ್ನು ನೇಮಿಸಿಕೊಂಡಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲೂ ಹೊಸಬರನ್ನು ನೇಮಿಸಿಕೊಳ್ಳಲಾಗುವುದು ಎಂದು ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಮಿಲಿಂದ್ ಲಕ್ಕಾಡ್ ಹೇಳಿದ್ದಾರೆ.

ವಿಪ್ರೊ ಕಂಪನಿಯು ಕಳೆದ ಆರ್ಥಿಕ ವರ್ಷದಲ್ಲಿ 10 ಸಾವಿರ ಹೊಸಬರನ್ನು ನೇಮಿಸಿಕೊಂಡಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಎಷ್ಟು ಸಂಖ್ಯೆಯಲ್ಲಿ ಹೊಸಬರನ್ನು ನೇಮಿಸಿಕೊಳ್ಳಲಾಗುವುದು ಎಂಬ ಬಗ್ಗೆ ಕಂಪನಿಯು ಅಧಿಕೃತವಾಗಿ ಪ್ರಕಟಿಸಿಲ್ಲ.

20 ಸಾವಿರ ಹೊಸಬರನ್ನು ನೇಮಿಸಿಕೊಳ್ಳುವುದಾಗಿ ಇನ್ಫೊಸಿಸ್ ಕಂಪನಿಯು ವರ್ಷದ ಆರಂಭದಲ್ಲಿ ಹೇಳಿತ್ತು.

'ಐ.ಟಿ ವಲಯದಲ್ಲಿನ ಹೊಸ ನೇಮಕಾತಿಯು ಜಾಗತಿಕ ವಿದ್ಯಮಾನ ಮತ್ತು ಆರ್ಥಿಕ ಸ್ಥಿತಿಯ ಮೇಲೆ ಅವಲಂಬಿತವಾಗಿದೆ' ಎಂದು ಡೆಲಾಯ್ಟ್ ಇಂಡಿಯಾದ ಪಾಲುದಾರ ವಂಶಿ ಕರವಾಡಿ ಹೇಳುತ್ತಾರೆ.

'ಟ್ರಂಪ್ ಘೋಷಿಸಿರುವ ಪ್ರತಿ ಸುಂಕ ನೀತಿಯು ಜಾಗತಿಕ ಮಟ್ಟದಲ್ಲಿ ಆರ್ಥಿಕ ಅನಿಶ್ಚಿತತೆ ಸೃಷ್ಟಿಯಿದೆ. ಇದರಿಂದ ಐ.ಟಿ ಸೇವಾ ಬಳಕೆದಾರರು ವೆಚ್ಚ ಕಡಿತಕ್ಕೆ ಮುಂದಾಗಿದ್ದಾರೆ. ಈ ಬೆಳವಣಿಗೆಯು ಪ್ರಸಕ್ತ ವರ್ಷದ ಆರಂಭ ಮೂರು ತಿಂಗಳ ಅವಧಿಯಲ್ಲಿ ಐ.ಟಿ ನೇಮಕಾತಿಯಲ್ಲಿ ಶೇ 10ರಷ್ಟು ಕುಸಿತಕ್ಕೆ ಕಾರಣವಾಗಿದೆ' ಎಂದು ಹೇಳಿದ್ದಾರೆ.

ಅಂಕಿ ಅಂಶಗಳು

6.07 ಲಕ್ಷ
ಟಿಸಿಎಸ್‌ನಲ್ಲಿರುವ ಉದ್ಯೋಗಿಗಳ ಸಂಖ್ಯೆ

3.23 ಲಕ್ಷ
ಇನ್ಫೊಸಿಸ್ ಉದ್ಯೋಗಿಗಳ ಸಂಖ್ಯೆ

2.33 ಲಕ್ಷ
ವಿಪ್ರೊದಲ್ಲಿರುವ ಉದ್ಯೋಗಿಗಳ ಸಂಖ್ಯೆ

(2024–25ನೇ ಆರ್ಥಿಕ ವರ್ಷದ ಅಂತ್ಯಕ್ಕೆ)

ಅತ್ಯಂತ ಚಿಕ್ಕ 'ಚಿಪ್' ಅಭಿವೃದ್ಧಿ ಐಐಎಸ್‌ಸಿ ವಿಜ್ಞಾನಿಗಳಿಂದ ಪ್ರಸ್ತಾವ

ನವದೆಹಲಿ(ಪಿಟಿಐ): ಸದ್ಯ ಲಭ್ಯವಿರುವ ಚಿಪ್‌ಗಳಿಗಿಂತಲೂ ಅತ್ಯಂತ ಚಿಕ್ಕದಾದ ಚಿಪ್ ತಯಾರಿಸುವುದಕ್ಕೆ ಸಂಬಂಧಿಸಿದ ಪ್ರಸ್ತಾವವನ್ನು ಬೆಂಗಳೂರು ಮೂಲದ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) 30 ವಿಜ್ಞಾನಿಗಳ ತಂಡ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ.

ಅತ್ಯಂತ ತೆಳುವಾದ ಹಾಗೂ ಹೊಸ ಬಗೆಯ ಸೆಮಿಕಂಡಕ್ಟರ್ ಪದಾರ್ಥಗಳಾದ ಗ್ರಾಫೀನ್ ಹಾಗೂ ಟಿಎಂಡಿ ಬಳಸಿ ಚಿಪ್‌ಗಳನ್ನು ತಯಾರಿಸುವ ಪ್ರಸ್ತಾವ ಒಳಗೊಂಡ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ವಿಜ್ಞಾನಿಗಳ ತಂಡ ಸಲ್ಲಿಸಿದೆ.

'ಐಐಎಸ್‌ಸಿ ವಿಜ್ಞಾನಿಗಳು ಸಲ್ಲಿಸಿರುವ ಪ್ರಸ್ತಾವ ಕುರಿತು ಚರ್ಚೆ ನಡೆಸಲಾಗುತ್ತಿದೆ' ಎಂದು ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ ಸಚಿವಾಲಯ ತಿಳಿಸಿದೆ.

ಪ್ರಸ್ತುತ, ಸಿಲಿಕಾನ್‌ನಿಂದ ತಯಾರಿಸುವ ಸೆಮಿಕಂಡಕ್ಟರ್‌ಗಳು ವ್ಯಾಪಕವಾಗಿ ಬಳಕೆಯಲ್ಲಿವೆ. ಅಮೆರಿಕ, ಜಪಾನ್, ದಕ್ಷಿಣ ಕೊರಿಯಾ ಹಾಗೂ ತೈವಾನ್ ಇಂತಹ ಚಿಪ್‌ಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿವೆ.

'ಐಐಎಸ್‌ಸಿ ವಿಜ್ಞಾನಿಗಳ ತಂಡವು ಈ ಕುರಿತ ಡಿಪಿಆರ್ ಅನ್ನು 2022ರ ಏಪ್ರಿಲ್‌ನಲ್ಲಿ ಪ್ರಧಾನ ವೈಜ್ಞಾನಿಕ ಸಲಹೆಗಾರರಿಗೆ (ಪಿಎಸ್‌ಎ) ಸಲ್ಲಿಸಿತ್ತು. 2024ರ ಅಕ್ಟೋಬರ್‌ನಲ್ಲಿ ಪರಿಷ್ಕೃತ ಡಿಪಿಆರ್ ಸಲ್ಲಿಸಲಾಗಿತ್ತು. ನಂತರ ಇದನ್ನು ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ ಸಚಿವಾಲಯಕ್ಕೆ ಸಲ್ಲಿಸಲಾಗಿದೆ. ಸದ್ಯ ಉತ್ಪಾದಿಸಲಾಗುತ್ತಿರುವ ಚಿಪ್‌ಗಳಿಗಿಂತ ಬಹಳ ಚಿಕ್ಕದಾದ ಚಿಪ್‌ಗಳ ತಯಾರಿಸುವ ಕುರಿತು ಈ ಪ್ರಾಜೆಕ್ಟ್ ಭರವಸೆ ಮೂಡಿಸುತ್ತಿದೆ' ಎಂದು ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

ಪ್ರಸ್ತಾವಿತ ಚಿಪ್‌ಗಳ ಅಳತೆ 'ಆ್ಯಂಗಸ್ಟ್ರಮ್'ನಲ್ಲಿ ಇರಲಿದೆ. ಒಂದು 'ಆ್ಯಂಗಸ್ಟ್ರಮ್' 0.1 ನ್ಯಾನೋಮೀಟರ್‌ಗೆ ಸಮ. ಅಣುಗಳು, ಮಾಲಿಕ್ಯೂಲ್‌ಗಳ ಗಾತ್ರಗಳನ್ನು ಈ ಅಳತೆಯಲ್ಲಿ ಹೇಳಲಾಗುತ್ತದೆ. ಪ್ರಸ್ತುತ ಲಭ್ಯವಿರುವ ಅತ್ಯಂತ ಚಿಕ್ಕ ಚಿಪ್‌ನ ಗಾತ್ರ 3 ನ್ಯಾನೋಮೀಟರ್‌ನಷ್ಟಿದ್ದು, ಸ್ಯಾಮ್‌ಸಂಗ್, ಮೀಡಿಯಾಟೆಕ್ ನಂತಹ ಕಂಪನಿಗಳು ಉತ್ಪಾದಿಸುತ್ತಿವೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹266-545
ದ್ವಿತಳಿ (ಬಿ.ವಿ)
₹288-675

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹430
12 ಕ್ಕೆ ₹60
ಮೈಸೂರು
100ಕ್ಕೆ ₹430

'ಕದನ ವಿರಾಮ ಘೋಷಿಸಿಯೂ ದಾಳಿ'

ಕೀವ್(ಎಪಿ): ಈಸ್ಟರ್ ಪ್ರಯುಕ್ತ ತಾತ್ಕಾಲಿಕ ಕದನ ವಿರಾಮ ಘೋಷಿಸಿ, ದಾಳಿ ಮುಂದುವರಿಸಿರುವ ರಷ್ಯಾ ನಡೆಯನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಭಾನುವಾರ ಟೀಕಿಸಿದ್ದಾರೆ.

'ಈಸ್ಟರ್‌ಗೆ ಗೌರವಿಸುವ ಉದ್ದೇಶದಿಂದ ರಷ್ಯಾ ತಾತ್ಕಾಲಿಕ ಕದನ ವಿರಾಮ ಘೋಷಿಸಿದೆ ಎಂಬ ಭಾವನೆ ಮೂಡಿಸುವ ಪ್ರಯತ್ನ ಇದಾಗಿದೆ. ಆದರೆ, ತಾತ್ಕಾಲಿಕ ಕದನ ವಿರಾಮ ಘೋಷಿಸಿದ ಮೇಲೂ ರಾತ್ರಿ ವೇಳೆ ಕೆಲ ಸ್ಥಳಗಳ ಮೇಲೆ ರಷ್ಯಾ ಪಡೆಗಳು ದಾಳಿ ನಡೆಸಿವೆ' ಎಂದು ಅವರು 'ಎಕ್ಸ್'ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಟೀಕಿಸಿದ್ದಾರೆ.

'ಭಾನುವಾರ ಮಧ್ಯರಾತ್ರಿಯಿಂದಲೇ ಜಾರಿಗೆ ಬರುವಂತೆ 30 ದಿನದ ವರೆಗೆ ಕದನ ವಿರಾಮ ವಿಸ್ತರಿಸಲು ಉಕ್ರೇನ್ ಸಿದ್ಧವಿದೆ. ರಷ್ಯಾ ಕೂಡ ಕದನ ವಿರಾಮಕ್ಕೆ ಸಂಬಂಧಿಸಿದ ನಿಬಂಧನೆಗಳಿಗೆ ಬದ್ಧವಾಗಿರಬೇಕು' ಎಂದು ಅವರು ಹೇಳಿದ್ದಾರೆ.

ನಿವೃತ್ತ ಡಿಜಿ ಓಂಪ್ರಕಾಶ್ ಹತ್ಯೆ

ಒಂದನೇ ಪುಟದಿಂದ...

ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ ವೇಳೆ, ಮನೆಯ ನೆಲ ಮಹಡಿಯಲ್ಲಿ ಓಂ ಪ್ರಕಾಶ್ ಅವರ ಮೃತದೇಹ ರಕ್ತದ ಮಡುವಿನಲ್ಲಿ ಬಿದ್ದಿರುವುದು ಕಂಡು ಬಂದಿದೆ. ಮರಣೋತ್ತರ ಪರೀಕ್ಷೆಗಾಗಿ ಶವವನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಸೋಮವಾರ ಬೆಳಿಗ್ಗೆ ಮರಣೋತ್ತರ ಪರೀಕ್ಷೆ ನಡೆಯಲಿದೆ.

ವೈಯಕ್ತಿಕ ವಿಚಾರಕ್ಕೆ ದಂಪತಿ ಮಧ್ಯೆ ಮನಸ್ತಾಪ ಇತ್ತು. ಇಬ್ಬರ ನಡುವೆ ಹೊಂದಾಣಿಕೆ ಇರಲಿಲ್ಲ. ಕೆಲವು ದಿನಗಳ ಹಿಂದೆಯಷ್ಟೇ ಓಂ ಪ್ರಕಾಶ್ ವಿರುದ್ಧ ಎಚ್‌ಎಸ್‌ಆರ್ ಠಾಣೆಗೆ ದೂರು ನೀಡಿದ್ದರು. ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ, ತಮ್ಮ ಮನೆ ಮುಂದೆಯೇ ಪಲ್ಲವಿ ಧರಣಿ ಮಾಡಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. 'ಪತಿ ಓಂ ಪ್ರಕಾಶ್ ಅವರು ರಿವಾಲ್ವರ್ ಹಿಡಿದು ಮನೆಯೊಳಗೆ ಸುತ್ತುತ್ತಿದ್ದಾರೆ. ನನಗೆ ಜೀವ ಬೆದರಿಕೆ ಇದೆ' ಎಂದು ಪಲ್ಲವಿ ಅವರು 'ಐಪಿಎಸ್ ಫ್ಯಾಮಿಲಿ' ಹೆಸರಿನ ವಾಟ್ಸ್ ಆ್ಯಪ್ ಗುಂಪಿನಲ್ಲಿ ಮೂರು ದಿನಗಳ ಹಿಂದೆ ಸಂದೇಶ ಹಾಕಿದ್ದರು. ರಾಜ್ಯದ ಹಾಲಿ ಮತ್ತು ನಿವೃತ್ತ ಐಪಿಎಸ್ ಅಧಿಕಾರಿಗಳು ಈ ಗುಂಪಿನಲ್ಲಿದ್ದಾರೆ ಎಂದು ಗೊತ್ತಾಗಿದೆ.

'ಪಲ್ಲವಿ ಅವರು ಹರಿತವಾದ ಆಯುಧದಿಂದ ಓಂ ಪ್ರಕಾಶ್ ಅವರ ಎದೆ, ಹೊಟ್ಟೆ, ಕುತ್ತಿಗೆಗೆ 8–9 ಬಾರಿ ಇರಿದಿದ್ದಾರೆ. ಹೊಟ್ಟೆಗೆ 4–5 ಬಾರಿ ಇರಿಯಲಾಗಿದೆ. ಸುಮಾರು 20 ನಿಮಿಷ ರಕ್ತದ ಮಡುವಿನಲ್ಲಿ ಪತಿ ನರಳಾಡುವುದನ್ನು ನೋಡಿದ್ದಾರೆ. ಸತ್ತ ಬಳಿಕ ಅವರ ಮುಖಕ್ಕೆ ಬಿಳಿ ಬಟ್ಟೆ ಕಟ್ಟಿ, ಮೂರನೇ ಮಹಡಿಗೆ ತೆರಳಿದ್ದಾರೆ. ಬಳಿಕ ನಿವೃತ್ತ ಐಪಿಎಸ್ ಅಧಿಕಾರಿಯೊಬ್ಬರ ಪತ್ನಿಗೆ ಕರೆ ಮಾಡಿ 'ನಾನು ಆ ರಾಕ್ಷಸನನ್ನು ಮುಗಿಸಿದ್ದೇನೆ' ಎಂದಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಘಟನೆ ನಡೆದ ಸಂದರ್ಭದಲ್ಲಿ ನೆಲ ಮಹಡಿಯಲ್ಲಿ ಪತ್ನಿ ಮತ್ತು ಮಗಳು ಕೃತಿ ಇದ್ದರು. ಮೊದಲ ಮಹಡಿಯಲ್ಲಿ ಮಗ ಕಾರ್ತಿಕ್ ಮತ್ತು ಸೊಸೆ ನೈದಿಲೆ ವಾಸವಾಗಿದ್ದಾರೆ. ಎಚ್‌ಎಸ್‌ಆರ್ ಠಾಣೆ ಪೊಲೀಸರು, ಸ್ಥಳ ಮಹಜರು ನಡೆಸಿ ಕುಟುಂಬದ ಸದಸ್ಯರ ಹೇಳಿಕೆ ಪಡೆದುಕೊಳ್ಳುತ್ತಿದ್ದಾರೆ.

'ಪತ್ನಿಗೆ ಮಾನಸಿಕ ಆರೋಗ್ಯ ಸಮಸ್ಯೆ': ಪಲ್ಲವಿ ಅವರು ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದು, ಇಂದಿರಾನಗರದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂಬ ಮಾಹಿತಿ ತನಿಖೆ ವೇಳೆ ಲಭ್ಯವಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಆದರೆ, ಎಷ್ಟು ವರ್ಷಗಳಿಂದ ಯಾವ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದರು ಎಂಬ ಬಗ್ಗೆ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾರೆ.

ಓಂ ಪ್ರಕಾಶ್ ಅವರ ನಿವಾಸದ ಬಳಿ ಭಾನುವಾರ ರಾತ್ರಿ ಕಂಡು ಬಂದ ದೃಶ್ಯ ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

1981ನೇ ಬ್ಯಾಚ್‌ನ ಅಧಿಕಾರಿ

ಬಿಹಾರದ ಚಂಪಾರಣ್ ಜಿಲ್ಲೆಯವರಾದ ಓಂ ಪ್ರಕಾಶ್ ಅವರು 1981ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದರು. ಕರ್ನಾಟಕ ಗೃಹರಕ್ಷಕದಳ, ಅಗ್ನಿಶಾಮಕದಳಗಳಲ್ಲಿ ಮಹಾನಿರ್ದೇಶಕರಾಗಿದ್ದ ಅವರು, 2015ರಿಂದ 2017ರವರೆಗೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು. ನಿವೃತ್ತಿ ಬಳಿಕ ಎಚ್‌ಎಸ್‌ಆರ್ ಬಡಾವಣೆಯಲ್ಲಿ ವಾಸವಿದ್ದರು.

ಅವಿಭಜಿತ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಉಪ ವಿಭಾಗದ ಎಎಸ್‌ಪಿ ಆಗಿ ವೃತ್ತಿ ಆರಂಭ ಮಾಡಿದ್ದರು. ಇದಾದ ನಂತರ ಶಿವಮೊಗ್ಗ, ಉತ್ತರ ಕನ್ನಡ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ರಾಜ್ಯ ಗುಪ್ತಚರ ವಿಭಾಗದ ಎಸ್‌ಪಿಯಾಗಿ, ಕರ್ನಾಟಕ ಲೋಕಾಯುಕ್ತ, ಅಗ್ನಿಶಾಮಕ ದಳದ ಡಿಐಜಿ, ಸಿಐಡಿ ಐಜಿಪಿಯಾಗಿ ಕರ್ತವ್ಯ ನಿರ್ವಹಣೆ ಮಾಡಿದ್ದರು.

ಪತ್ನಿ ಕೊಲೆಗೆ ಯತ್ನ?

ಒಂದನೇ ಪುಟದಿಂದ...

ಓಂ ಪ್ರಕಾಶ್ ಅವರ ಪತ್ನಿ ಹಾಗೂ ಮಗಳ ವಿಚಾರಣೆಯು ಎಚ್‌ಎಸ್‌ಆರ್ ಬಡಾವಣೆ ಪೊಲೀಸ್ ಠಾಣೆಯಲ್ಲಿ ತಡರಾತ್ರಿವರೆಗೂ ನಡೆದಿತ್ತು. 'ದಂಪತಿ ನಡುವೆ ಮನಸ್ತಾಪ ಇತ್ತು. ಆಸ್ತಿ ಕಾರಣಕ್ಕೂ ಕೊಲೆ ನಡೆದಿರುವ ಸಾಧ್ಯತೆ ಇದೆ' ಎಂದು ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಓಂ ಪ್ರಕಾಶ್ ಅವರು ಭಾನುವಾರ ಮಧ್ಯಾಹ್ನ 3 ಗಂಟೆಗೆ ಕರೆ ಮಾಡಿ ಮಾತನಾಡಿದರು. ಸೋಮವಾರ ಮನೆಯ ಬಳಿ ಬರುವುದಾಗಿ ಹೇಳಿದೆ. ಅದಕ್ಕೆ ಪತ್ನಿ ಮನೆಯಲ್ಲಿ ಇರುವುದರಿಂದ ಬರುವುದು ಬೇಡ ಎಂದಿದ್ದರು' ಎಂದು ಇನ್‌ಸ್ಪೆಕ್ಟರ್ ಒಬ್ಬರು ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 14,000 - 18,000. ಸಂಪರ್ಕಿಸಿ: 8951315839, 7022770052.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel Agencies

ಶ್ರೀಲಂಕಾ ಪ್ರವಾಸ ರಾಮಾಯಣ ಸ್ಥಳಗಳು 6 ದಿನಗಳು 9/5/25 ದಂಬುಲ್ಲಾ ಕ್ಯಾಂಡಿ ನೂವಾರ ಎಲಿಯ ಕೊಲಂಬೋ ಬೆಂಟೋಟ ಸುವರ್ಣಯಾತ್ರ 9019462508/ 6360146483

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

CONNECT

Orchid ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್
ನಿಮ್ಮ ಪ್ರವಾಸ ನಮ್ಮೊಂದಿಗೆ
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
99000 99252
Confirmed Group Departures
11 ದಿನಗಳ

ಸಿಂಗಾಪುರ್

ಮಲೇಶಿಯಾ



ಥೈಲ್ಯಾಂಡ್
ಬೆಂಗಳೂರಿನಿಂದ ಬೆಂಗಳೂರಿಗೆ
ವಿವರಗಳಿಗೆ ಸಂಪರ್ಕಿಸಿ

Travel

14 ದಿನಗಳ ಚಾರ್ಧಾಮ್ ಯಾತ್ರ 29.5.2025. 8 ದಿನಗಳ ಅಮರನಾಥ್ ಯಾತ್ರ 2.7.2025. ಶ್ರೀಮಹದೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್. ಸಂಪರ್ಕಿಸಿ: 9611801143, 9742810701.

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ
ನರ್ಸರಿ ಟೀಚರ್ಸ್ ಟ್ರೈನಿಂಗ್ ಕೋರ್ಸ್
Diploma in Computer Teachers Training Course
DIPLOMA IN COMPUTER DATA ENTRY OPERATOR
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು [Qual: SSLC/PUC]
ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Empanelled & Recognised by Govt. of India & Karnataka
The RCSS
Mob. 9008419955, 9901520055, 9449198555
Email: info@thercss.co, Web: www.thercss.com

ಪ್ರಜಾವಾಣಿ ಕ್ಲಾಸಿಫೈಡ್ಸ್ ಶಿಕ್ಷಣ
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

‘ಮಾಸ್ ಸಿನಿಮಾ ಮಾಡಿ’

ಬಾಲಿವುಡ್ ಸಿನಿಮಾಗಳ ಸೋಲಿನ ಕುರಿತು ಪ್ರತಿಕ್ರಿಯಿಸಿರುವ ಹೆಸರಾಂತ ನಿರ್ದೇಶಕ ವಿಕ್ರಂ ಭಟ್, ದಕ್ಷಿಣದ ಚಿತ್ರರಂಗದಂತೆ ಮಾಸ್ ಪ್ರೇಕ್ಷಕನ್ನೇ ಗಮನದಲ್ಲಿಟ್ಟುಕೊಂಡು ಸಿನಿಮಾ ಮಾಡಬೇಕು. ಪ್ರೇಕ್ಷಕರು ‘ಪುಷ್ಪ’, ‘ಕಾಂತಾರ’ದಂತಹ ಸೂಪರ್ ಹೀರೋಗಳನ್ನೇ ನೋಡಲು ಇಷ್ಟಪಡುತ್ತಾರೆ ಎಂದಿದ್ದಾರೆ.

‘ನಿರ್ದೇಶನದಲ್ಲಿ ಜವಾಬ್ದಾರಿ ಹೆಚ್ಚು’

ರಂಜನಿ ರಾಘವನ್

ನಟಿ, ಬರಹಗಾರ್ತಿ ರಂಜನಿ ರಾಘವನ್ ಈಗ ನಿರ್ದೇಶಕಿ ಕ್ಯಾಪ್ ತೊಟ್ಟಿದ್ದಾರೆ. ಅವರ ಚೊಚ್ಚಲ ನಿರ್ದೇಶನದ ‘ಡಿಡಿ ಡಿಕ್ಕಿ’ ಚಿತ್ರದ ಬಗ್ಗೆ ಅವರು ಮಾತನಾಡಿದ್ದಾರೆ...

‘ಕಳೆದ ಆರು–ಏಳು ವರ್ಷಗಳಿಂದ ನಟನೆ ಜೊತೆಗೆ ಕಥೆ, ಚಿತ್ರಕಥೆ ಬರವಣಿಗೆಯಲ್ಲಿ ನನ್ನನ್ನು ತೊಡಗಿಸಿಕೊಂಡಿರುವೆ. ಬರೆಯುವಾಗ ಚಿತ್ರದ ಸನ್ನಿವೇಶಗಳು ಕಣ್ಮುಂದೆ ಬರುತ್ತಿದ್ದವು. ಆಗಲೇ ನನಗೆ ನಿರ್ದೇಶಕಿಯಾಗಬೇಕೆಂಬ ಕನಸು ಶುರುವಾಗಿದ್ದು. ಯೋಗರಾಜ್ ಭಟ್, ತರುಣ್ ಸುಧೀರ್ ಮೊದಲಾದವರ ತಂಡದಲ್ಲಿ ಕೆಲಸ ಮಾಡಿದ್ದೇನೆ. ಕೆಲ ಸಿನಿಮಾಗಳಿಗೆ ಘೋಸ್ಟ್ ರೈಟರ್ ಆಗಿದ್ದೆ. ಇದರಿಂದಾಗಿ ಎರಡು ವರ್ಷಗಳ ಹಿಂದೆ ನಿರ್ದೇಶಕಿಯಾಗಬೇಕೆಂಬ ಹಂಬಲ ಹೆಚ್ಚಾಯಿತು’ ಎಂದು ಮಾತು ಪ್ರಾರಂಭಿಸಿದರು ರಂಜನಿ.

‘ಪುಟ್ಟಗೌರಿ ಮದುವೆ’ ಧಾರಾವಾಹಿಯಿಂದ ಮನೆಮಾತಾದ ರಂಜನಿ, ‘ಕನ್ನಡತಿ’ ನಟನೆ ಮೂಲಕ ಜನಪ್ರಿಯತೆ ಹೆಚ್ಚಿಸಿಕೊಂಡರು. ‘ಇಷ್ಟದೇವತೆ’ ಮೂಲಕ ಕಿರುತೆರೆ ಬರವಣಿಗೆಯಲ್ಲಿಯೂ ತೊಡಗಿಸಿಕೊಂಡರು. ‘ರಾಜಹಂಸ’ ನಾಯಕಿಯಾಗಿ ಮೊದಲ ಸಿನಿಮಾ. ‘ಕನ್ನಡತಿ’ ಬಳಿಕ ಕಿರುತೆರೆಯಿಂದ ಹೊರಬಂದ ಅವರು ತಮ್ಮ ಈ ಚಿತ್ರದ ಕೆಲಸ ಪ್ರಾರಂಭಿಸಿದರು.

‘ನನಗಾಗಿ ಬಹಳಷ್ಟು ಕಥೆಗಳನ್ನು ಬರೆದುಕೊಂಡಿದ್ದೆ. ಆದರೆ ಯಾವುದೂ ಸಿನಿಮಾವಾಗುವ ಮಟ್ಟಕ್ಕೆ ಹೋಗಲಿಲ್ಲ. ಈ ಚಿತ್ರದ ಕಥೆಯನ್ನು ನನ್ನ ಸಂಬಂಧಿಯೊಬ್ಬರಿಗೆ ಹೇಳಿದಾಗ ಇಷ್ಟವಾಗಿ ನಿರ್ಮಾಣಕ್ಕೆ ಮುಂದಾದರು. ಅಲ್ಲಿಂದ ಪಯಣ ಪ್ರಾರಂಭವಾಯಿತು. ರಂಗಭೂಮಿಯಲ್ಲಿ ನಾಟಕವೊಂದು ಶುರುವಾಗುವಂತೆ ಪ್ರಾರಂಭಗೊಂಡ ಜರ್ನಿಯಿದು. ಸಾಗುತ್ತ ದಾರಿಯಲ್ಲಿ ಒಬ್ಬೊಬ್ಬರೇ ಸೇರಿಕೊಂಡು ಇಲ್ಲಿಗೆ ಬಂದು ನಿಂತಿದೆ’ ಎನ್ನುತ್ತಾರೆ ಅವರು.



ಪ್ರೇಮ್, ವಿಹಾನ್

ಈ ಚಿತ್ರದಲ್ಲಿ ‘ನೆನಪಿರಲಿ’ ಪ್ರೇಮ್ ಮುಖ್ಯಪಾತ್ರಧಾರಿ. ಅವರ ಮಗನಾಗಿ ನಟ ಗಣೇಶ್ ಪುತ್ರ ವಿಹಾನ್ ಬಣ್ಣ ಹಚ್ಚಿದ್ದಾರೆ. ನಿರ್ದೇಶಕರಾದ ತರುಣ್ ಸುಧೀರ್ ಹಾಗೂ ಜಡೇಶ್ ಹಂಪಿ ತಾಂತ್ರಿಕವಾಗಿ ಈ ಚಿತ್ರತಂಡದ ನೆರವಿಗೆ ನಿಂತು ಚಿತ್ರದ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಇಳಯ ರಾಜ ಚಿತ್ರಕ್ಕೆ ಸಂಗೀತ ನೀಡುತ್ತಿದ್ದಾರೆ.

‘ಶೇ 60ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಪ್ರತಿ ಮನೆಯಲ್ಲಿ ನಡೆಯುವ ಘಟನೆಗಳೇ ಚಿತ್ರವಾಗಿದೆ. ಕೌಟಂಬಿಕ, ಹಾಸ್ಯಮಯ ಕಥಾಹಂದರವಿದೆ. ಈ ವರ್ಷದ ಅಂತ್ಯಕ್ಕೆ ಚಿತ್ರ ತೆರೆಗೆ ತರುವ ಆಲೋಚನೆಯಿದೆ. ನಿರ್ದೇಶಕಿಯಾಗಿ ಎಲ್ಲರಿಗೂ ನಾನೇ ಉತ್ತರ ನೀಡಬೇಕು. ತಂಡವನ್ನು ಮುನ್ನಡೆಸಬೇಕು. ನಾವು ಸರಳವಾಗಿ, ಖುಷಿಯಾಗಿ ಇದ್ದಾಗ ತಂಡವೂ ಉತ್ತಮವಾಗಿರುತ್ತದೆ. ನಟನೆಗಿಂತ ನಿರ್ದೇಶನದಲ್ಲಿ ಜವಾಬ್ದಾರಿ ಹೆಚ್ಚು. ಚಿತ್ರದ ಕಥೆ ತನಗೆ ಬೇಕಾಗಿದ್ದೆಲ್ಲವನ್ನೂ ಪಡೆದುಕೊಳ್ಳುತ್ತಿದೆ. ಎಲ್ಲವೂ ತಾನಾಗಿಯೇ ಕೂಡಬರುತ್ತಿದೆ. ಉತ್ತಮ ಚಿತ್ರ ನೀಡುತ್ತೇವೆ ಎಂಬ ಭರವಸೆಯಿದೆ’ ಎಂದರು.

ಅಂದಹಾಗೆ ಈ ಚಿತ್ರದಲ್ಲಿ ಅವರು ಕೂಡ ನಟಿಸುತ್ತಿದ್ದಾರಾ ಎಂಬ ಮಾಹಿತಿಯನ್ನು ಬಿಟ್ಟುಕೊಟ್ಟಿಲ್ಲ. ‘ಹೊರ ಊರಿನಿಂದ ಬೆಂಗಳೂರಿಗೆ ಬಂದು ಊರಿನ ಬಗ್ಗೆ ಹಪಹಪಿಸುವ ಪಾತ್ರ ಪ್ರೇಮ್ ಅವರದ್ದು. ಹಾಗಂತ ಇದೇ ಪೂರ್ತಿ ಕಥೆಯಲ್ಲ. ಮಿಕ್ಕ ಮಾಹಿತಿಗಳನ್ನು ಹಂತಹಂತವಾಗಿ ನೀಡುತ್ತೇವೆ. ಸಿನಿಮಾ ಪೂರ್ಣಗೊಳಿಸುವುದು ಸದ್ಯದ ಗುರಿ’ ಎಂದು ಮಾತಿಗೆ ವಿರಾಮವಿತ್ತರು. ❖

ಚಿತ್ರದ ದೃಶ್ಯ

ಪ್ರೈಮ್‌ಗೆ ಬಂದ ‘ಮಿಥ್ಯ’

ನಟ ರಕ್ಷಿತ್ ಶೆಟ್ಟಿ ತಮ್ಮ ಪರಂವಃ ಪಿಕ್ಚರ್ಸ್ ಮೂಲಕ ನಿರ್ಮಿಸಿದ್ದ ಚಿತ್ರ ‘ಮಿಥ್ಯ’. ಹೆತ್ತವರನ್ನು ಕಳೆದುಕೊಂಡ ಮಿಥುನ್ ಎಂಬ ಹುಡುಗನ ಹೊಸ ಕನಸಿನ ಕಥಾಹಂದರ ಹೊಂದಿರುವ ಈ ಚಿತ್ರ ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರಶಂಸೆ ಗಳಿಸಿತ್ತು. ಬಳಿಕ ಚಿತ್ರಮಂದಿರಕ್ಕೆ ಲಗ್ಗೆ ಇಟ್ಟರೂ ಪ್ರೇಕ್ಷಕರು ಚಿತ್ರದ ಕುರಿತು ಹೆಚ್ಚು ಒಲವು ತೋರಿಸಲಿಲ್ಲ. ಇದೀಗ ಚಿತ್ರ ಅಮೆಜಾನ್ ಪ್ರೈಮ್ ಒಟಿಟಿ ವೇದಿಕೆಯಲ್ಲಿ ಲಭ್ಯವಿದೆ.

‘ಏಕಂ’ ಎಂಬ ವೆಬ್ ಸರಣಿ ಸೇರಿದಂತೆ ಅನೇಕ ಕಿರುಚಿತ್ರಗಳನ್ನು ನಿರ್ದೇಶಿಸಿರುವ ಸುಮಂತ್ ಭಟ್ ಈ ಚಿತ್ರದ ನಿರ್ದೇಶಕರು. ಚಿತ್ರದಲ್ಲಿ ಮೂರು ಮುಖ್ಯಪಾತ್ರಗಳಿವೆ. ಮಾಸ್ಟರ್ ಅತೀಶ್ ಎಸ್ ಶೆಟ್ಟಿ ಮಿಥುನ್ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಪ್ರಕಾಶ್ ತುಮ್ಮಿನಾಡು, ರೂಪ ವರ್ಕಾಡ್ ಸಹ ಮುಖ್ಯಭೂಮಿಕೆಯಲ್ಲಿದ್ದಾರೆ. ಉದಿತ್ ಕುರಾನ ಛಾಯಾಚಿತ್ರಗ್ರಹಣ, ಭುವನೇಶ್ ಮಣಿವಣನ್ ಸಂಕಲನ ಹಾಗೂ ಮಿಥುನ್ ಮುಕುಂದನ್ ಸಂಗೀತ ಚಿತ್ರಕ್ಕಿದೆ. ❖

‘ಕೇಸರಿ–2’ಗೆ ನೀರಸ ಪ್ರತಿಕ್ರಿಯೆ

ಮಾಧವನ್, ಅಕ್ಷಯ್ ಕುಮಾರ್

ಕಳೆದ ಕೆಲ ವರ್ಷಗಳಿಂದ ಅಕ್ಷಯ್ ಕುಮಾರ್ ಚಿತ್ರಗಳು ಸಾಲು, ಸಾಲಾಗಿ ಸೋಲುತ್ತಿವೆ. ಕಳೆದ ಶುಕ್ರವಾರ ತೆರೆಕಂಡ ‘ಕೇಸರಿ ಚಾಪ್ಟರ್–2’ ಕೂಡ ಅದೇ ಸಾಲಿಗೆ ಸೇರುವ ಸೂಚನೆ ದಟ್ಟವಾಗಿದೆ. ಅಕ್ಷಯ್ ಕುಮಾರ್, ಆರ್ ಮಾಧವನ್, ಅನನ್ಯಾ ಪಾಂಡೆ ನಟನೆಯ ಈ ಚಿತ್ರ ಮೊದಲ ಎರಡು ದಿನದಲ್ಲಿ ಉತ್ತಮ ಗಳಿಕೆ ಕಂಡಿಲ್ಲ. 2019ರಲ್ಲಿ ‘ಕೇಸರಿ’ ಚಿತ್ರ ತೆರೆಕಂಡು ಉತ್ತಮ ಗಳಿಕೆ ಕಂಡಿತ್ತು. ಅದರ ಮುಂದುವರಿದ ಭಾಗ ‘ಕೇಸರಿ–2’. ದೇಶಭಕ್ತಿಯ ಕಥೆಗಳು, ಇತಿಹಾಸದ ಹೆಸರಿನಲ್ಲಿ ಧರ್ಮ ಕಲಹ ಬಿತ್ತುವ ಸಿನಿಮಾಗಳು ಗೆಲುವು ಕಾಣುವುದು ಇತ್ತೀಚಿನ ಟ್ರೆಂಡ್ ಆಗಿದೆ.

ಶಿವಾಜಿ ಮಗ ಸಂಭಾಜಿಯ ಕಥೆಯನ್ನು ಹೊಂದಿರುವ ‘ಛಾವಾ’ ಕೆಲ ದಿನಗಳ ಹಿಂದೆ ತೆರೆ ಕಂಡು, ಸೂಪರ್ ಹಿಟ್ ಎನಿಸಿಕೊಂಡಿತ್ತು. ‘ಕೇಸರಿ–2’ ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ ಕಥೆಯನ್ನು ಹೊಂದಿದ್ದು, ಭರ್ಜರಿ ಯಶಸ್ಸು ಗಳಿಸಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಕರಣ್ ಸಿಂಗ್ ತ್ಯಾಗಿ ನಿರ್ದೇಶನದ ಈ ಚಿತ್ರ ಪ್ರೇಕ್ಷಕರನ್ನು ಸೆಳೆಯುವಲ್ಲಿ ವಿಫಲವಾಗಿದೆ. ಹಿಂದಿನ ಸಿನಿಮಾಗಳ ಸೋಲಿನ ಹೊಣೆಯನ್ನು ಹೊತ್ತುಕೊಂಡಿದ್ದ ಅಕ್ಷಯ್ ಕಥೆಯ ಆಯ್ಕೆಯಲ್ಲಿ ಹೆಚ್ಚು ಎಚ್ಚರವಹಿಸುವುದಾಗಿ ಈ ಹಿಂದೆ ಹೇಳಿದ್ದರು. ❖

ತೆರೆಗೆ ಬರಲು ಸಜ್ಜಾದ ‘ನಾನು ಮತ್ತು ಗುಂಡ 2’

ಕನ್ನಡದಲ್ಲಿ ನಾಯಿಯನ್ನು ಮುಖ್ಯ ಪಾತ್ರದಲ್ಲಿಟ್ಟುಕೊಂಡು ಬಂದ ಕಥೆಗಳು ಕಡಿಮೆ. ರಕ್ಷಿತ್ ಶೆಟ್ಟಿ ಅಭಿನಯದ ‘ಚಾರ್ಲಿ’ ಚಿತ್ರ ಸೂಪರ್ ಹಿಟ್ ಆಗಿತ್ತು. ಆದರೆ ಅದಕ್ಕೂ ಮೊದಲೇ ‘ನಾನು ಮತ್ತು ಗುಂಡ’ ಎಂಬ ಚಿತ್ರವೊಂದು ‘ಸಿಂಬು’ ನಾಯಿಯ ನಟನೆಯಿಂದಲೇ ಗಮನ ಸೆಳೆದಿತ್ತು. ಆದರೆ ‘ಚಾರ್ಲಿ’ಯಷ್ಟು ಯಶಸ್ಸು ಗಳಿಸಿರಲಿಲ್ಲ. ಹೀಗಾಗಿ ‘ಚಾರ್ಲಿ’ ಯಶಸ್ಸಿನ ಬಳಿಕ ‘ನಾನು ಮತ್ತು ಗುಂಡ–2’ ಚಿತ್ರ ಸೆಟ್ಟೇರಿತ್ತು. ಇದೀಗ ಚಿತ್ರ ತೆರೆಗೆ ಬರಲು ಸಜ್ಜಾಗಿದ್ದು, ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಗುಂಡ(ನಾಯಿ) ಮತ್ತು ಅದರ ಮಾಲೀಕ ಶಂಕರನ ನಡುವಿನ ಅವಿನಾಭಾವ ಸಂಬಂಧದ ಕಥೆ ಹೊಂದಿದ್ದ ಚಿತ್ರ ‘ನಾನು ಮತ್ತು ಗುಂಡ’. ಶಿವರಾಜ್ ಕೆ.ಆರ್. ಪೇಟೆ ನಾಯಕನಾಗಿ ಅಭಿನಯಿಸಿದ್ದ ಆ ಚಿತ್ರಕ್ಕೆ ರಘು ಹಾಸನ್ ಆ್ಯಕ್ಷನ್ ಕಟ್ ಹೇಳಿದ್ದರು. 2020ರಲ್ಲಿ ಚಿತ್ರ ತೆರೆಗೆ ಬಂದಿತ್ತು. ಅದರ ಮುಂದುವರಿದ ಭಾಗ ‘ನಾನು ಮತ್ತು ಗುಂಡ -2’. ಈ ಚಿತ್ರಕ್ಕೆ ರಾಕೇಶ್ ಅಡಿಗ ನಾಯಕ. ರಚನಾ ಇಂದರ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ.

‘ರಾಕೇಶ್ ಈ ಚಿತ್ರದಲ್ಲಿ ಶಿವರಾಜ್ ಅವರ ಮಗನಾಗಿ ನಟಿಸಿದ್ದಾರೆ. ಈಗಾಗಲೇ ಚಿತ್ರದ ಮೊದಲ ಪ್ರತಿ ಸಿದ್ಧಗೊಂಡಿದ್ದು, ಸದ್ಯದಲ್ಲೇ ಸೆನ್ಸಾರ್‌ಗೆ ಹೋಗಲಿದೆ. ಊಟಿ, ಶಿವಮೊಗ್ಗ, ತೀರ್ಥಹಳ್ಳಿ, ಬಾಳೆಹೊನ್ನೂರು ಸುತ್ತಮುತ್ತ ಶೂಟಿಂಗ್ ನಡೆಸಲಾಗಿದ್ದು, ಮೇ ತಿಂಗಳಲ್ಲಿ ಚಿತ್ರವನ್ನು ಬಿಡುಗಡೆ ಮಾಡುವ ಯೋಜನೆಯಿದೆ. ಚಿತ್ರದಲ್ಲಿ ಒಟ್ಟು 6 ಹಾಡುಗಳಿದ್ದು, ಆರ್.ಪಿ.ಪಟ್ನಾಯಕ್ ಸಂಗೀತ ಸಂಯೋಜಿಸಿದ್ದಾರೆ. ತನ್ವಿಕ್ ಛಾಯಾಚಿತ್ರಗ್ರಹಣವಿದೆ. ಕನ್ನಡ, ತೆಲುಗು, ಹಿಂದಿ ಸೇರಿ ಐದು ಭಾಷೆಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ’ ಎಂದರು ನಿರ್ದೇಶಕರು.

ಪೊಯೆಮ್ ಪಿಕ್ಚರ್ಸ್ ಬಂಡವಾಳ ಹೂಡಿದೆ. ❖

ಚಿತ್ರತಂಡ

ದುಬೆ, ಶರ್ಮಾ ಅವರಿಂದ ‘ಸುಪ್ರೀಂ’, ಸಿಜೆಐ ಟೀಕೆ • ಬಿಜೆಪಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

‘ಬಿಜೆಪಿಯ ರಾಜಕೀಯ ಬೂಟಾಟಿಕೆ’

ನವದೆಹಲಿ(ಪಿಟಿಐ): ಸುಪ್ರೀಂ ಕೋರ್ಟ್ ಕಾರ್ಯವೈಖರಿ ಟೀಕಿಸಿ ತನ್ನ ಸಂಸದರು ನೀಡಿರುವ ಹೇಳಿಕೆಗಳಿಂದ ಅಂತರ ಕಾಯ್ದುಕೊಂಡಿರುವ ಬಿಜೆಪಿಯ ನಡೆಯನ್ನು ಕಾಂಗ್ರೆಸ್ ಟೀಕಿಸಿದೆ.

ಜೈರಾಮ್ ರಮೇಶ್

‘ಸುಪ್ರೀಂ ಕೋರ್ಟ್ ಅನ್ನು ಟೀಕಿಸಿರುವ ಸಂಸದರಾದ ನಿಶಿಕಾಂತ್ ದುಬೆ ಹಾಗೂ ದಿನೇಶ್ ಶರ್ಮಾ ಅವರನ್ನು ಪಕ್ಷದಿಂದ ಉಚ್ಚಾಟಿಸುವುದೇ ಅವರ ವಿರುದ್ಧ ಬಿಜೆಪಿ ಕೈಗೊಳ್ಳಬಹುದಾದ ಕನಿಷ್ಠ ಮಟ್ಟದ ಕ್ರಮ’ ಎಂದೂ ಚಾಟಿ ಬೀಸಿದೆ.

‘ಈ ವಿಚಾರಕ್ಕೆ ಸಂಬಂಧಿಸಿ ಈ ಇಬ್ಬರು ಸಂಸದರ ವಿರುದ್ಧ ಯಾಕೆ ಕ್ರಮ ಕೈಗೊಂಡಿಲ್ಲ? ಅವರಿಗೆ ಕಾರಣ ಕೇಳಿ ನೋಟಿಸ್ ನೀಡಿಲ್ಲ ಏಕೆ’ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

‘ಇಂತಹ ಹೇಳಿಕೆಗಳಿಂದ ಯಾರನ್ನೂ ಮೂರ್ಖರನ್ನಾಗಿ ಮಾಡಲು ಸಾಧ್ಯವಿಲ್ಲ. ಸಂಪೂರ್ಣ ರಾಜಕೀಯ ಶಾಸ್ತ್ರವು ಸಂಪೂರ್ಣ ರಾಜಕೀಯ ಬೂಟಾಟಿಕೆ ರೂಪದಲ್ಲಿ ವ್ಯಕ್ತವಾಗುತ್ತಿರುವ ಪರಿ ಇದು’ ಎಂದು ವ್ಯಂಗ್ಯವಾಡಿದ್ದಾರೆ.

‘ಬಿಜೆಪಿಯ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಲಿರುವವರು ಪಕ್ಷದ ಇಬ್ಬರು ಸಂಸದರು ಸುಪ್ರೀಂ ಕೋರ್ಟ್ ಮತ್ತು ಸಿಜೆಐ ವಿರುದ್ಧ ನೀಡಿರುವ ಅವಹೇಳನಕಾರಿ ಹೇಳಿಕೆಗಳಿಂದ ಅಂತರ ಕಾಯ್ದುಕೊಂಡಿರುವುದು ಸರಿಯಲ್ಲ’ ಎಂದು ಟೀಕಿಸಿದ್ದಾರೆ.

‘ಈ ಇಬ್ಬರು ಸಂಸದರು ಪದೇಪದೇ ದ್ವೇಷದ ಮಾತುಗಳನ್ನಾಡುತ್ತಾರೆ. ಕೆಲ ಸಮುದಾಯಗಳು, ಸಂಸ್ಥೆಗಳು ಹಾಗೂ ವ್ಯಕ್ತಿಗಳ ಕುರಿತು ಕೀಳು ಭಾಷೆ ಬಳಸಿ ದಾಳಿ ಮಾಡುತ್ತಾರೆ. ಈ ಇಬ್ಬರು ಸಂಸದರ ಹೇಳಿಕೆಗಳ ಕುರಿತು ಬಿಜೆಪಿ ಅಧ್ಯಕ್ಷರು ನೀಡಿರುವ ಸ್ಪಷ್ಟನೆ ಡ್ಯಾಮೇಜ್ ಕಂಟ್ರೋಲ್ ಪ್ರಯತ್ನವಷ್ಟೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಜೈರಾಮ್ ಅವರ ಪೋಸ್ಟ್ ಅನ್ನು ಕಾಂಗ್ರೆಸ್‌ನ ಮತ್ತೊಬ್ಬ ಪ್ರಧಾನ ಕಾರ್ಯದರ್ಶಿ ಮುಕುಲ್ ವಾಸ್ನಿಕ್ ಅವರು ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದು, ‘ಈ ಇಬ್ಬರು ಸಂಸದರ ವಿರುದ್ಧ ಬಿಜೆಪಿ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ ಎಂಬುದು ನಮಗೆ ಗೊತ್ತು’ ಎಂದಿದ್ದಾರೆ.

‘ಎಲ್ಲ ಕಾನೂನುಗಳನ್ನು ಸುಪ್ರೀಂ ಕೋರ್ಟ್ ರೂಪಿಸುವುದಾದರೆ ಸಂಸತ್ ಹಾಗೂ ರಾಜ್ಯ ವಿಧಾನಸಭೆಗಳನ್ನು ಮುಚ್ಚಿ ಬಿಡಬೇಕು’ ಎಂದು ದುಬೆ ಅವರು ಶನಿವಾರ ಹೇಳಿದ್ದರು.

‘ದೇಶದಲ್ಲಿ ನಡೆಯುತ್ತಿರುವ ಸಂಘರ್ಷಗಳಿಗೆ ಸಿಜೆಐ ಸಂಜೀವ್ ಖನ್ನಾ ಅವರೇ ಹೊಣೆ’ ಎಂದೂ ದುಬೆ ಆರೋಪಿಸಿದ್ದರು.

ಬಿಜೆಪಿಯ ಮತ್ತೊಬ್ಬ ಸಂಸದ ದಿನೇಶ್ ಶರ್ಮಾ, ‘ಸಂಸತ್ ಹಾಗೂ ರಾಷ್ಟ್ರಪತಿ ಅವರಿಗೆ ಯಾರೂ ಆದೇಶ ನೀಡುವಂತಿಲ್ಲ’ ಎಂದಿದ್ದರು.

ಈ ಇಬ್ಬರ ಹೇಳಿಕೆಗಳಿಂದ ಬಿಜೆಪಿ ಶನಿವಾರ ಅಂತರ ಕಾಯ್ದುಕೊಂಡಿತ್ತು.

ಖುರೇಷಿ ‘ಮುಸ್ಲಿಂ ಆಯುಕ್ತ’ರಾಗಿದ್ದರು: ದುಬೆ ಟೀಕೆ

ಸುಪ್ರೀಂ ಕೋರ್ಟ್ ಮತ್ತು ಸಿಜೆಐ ವಿರುದ್ಧದ ಹೇಳಿಕೆಗಳಿಂದಾಗಿ ವಿಪಕ್ಷಗಳ ವಾಗ್ದಾಳಿಗೆ ಗುರಿಯಾಗಿರುವ ಬಿಜೆಪಿ ಸಂಸದ ನಿಶಿಕಾಂತ್ ದುಬೆ, ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ.ಖುರೇಷಿ ವಿರುದ್ಧ ಭಾನುವಾರ ಟೀಕಾಪ್ರಹಾರ ನಡೆಸಿದ್ದಾರೆ.

‘ಖುರೇಷಿ ಅವರು ಚುನಾವಣಾ ಆಯುಕ್ತರಾಗಿರಲಿಲ್ಲ, ಬದಲಿಗೆ ಮುಸ್ಲಿಂ ಆಯುಕ್ತರಾಗಿದ್ದರು’ ಎಂದು ಟೀಕಿಸಿದ್ದಾರೆ.

ವಕ್ಫ್ ಕಾಯ್ದೆ ಕುರಿತು ಖುರೇಷಿ ಅವರು ಏಪ್ರಿಲ್ 17ರಂದು ‘ಎಕ್ಸ್’ನಲ್ಲಿ ಮಾಡಿದ್ದ ಪೋಸ್ಟ್ ಪ್ರಸ್ತಾಪಿಸಿ, ದುಬೆ ವಾಗ್ದಾಳಿ ನಡೆಸಿದ್ದಾರೆ.

‘ಮುಸ್ಲಿಮರ ಭೂಮಿಯನ್ನು ಕಬಳಿಸಲು ಕೇಂದ್ರ ಸರ್ಕಾರ ರೂಪಿಸಿರುವ ದುಷ್ಟ ಯೋಜನೆಯೇ ಈ ವಕ್ಫ್ ಕಾಯ್ದೆ. ಸುಪ್ರೀಂ ಕೋರ್ಟ್ ಇದನ್ನು ಗಮನಿಸುತ್ತದೆ ಎಂಬ ವಿಶ್ವಾಸ ನನಗಿದೆ. ದುರುದ್ದೇಶದಿಂದ ತಪ್ಪು ಮಾಹಿತಿ ಪ್ರಚಾರ ಮಾಡುವ ಕಾರ್ಯವನ್ನು ವ್ಯವಸ್ಥಿತವಾಗಿ ಮಾಡಲಾಗಿದೆ’ ಎಂದು ಖುರೇಷಿ ಪೋಸ್ಟ್ ಮಾಡಿದ್ದರು.

‘ನೀವು ಚುನಾವಣಾ ಆಯುಕ್ತರಂತೆ ಕಾರ್ಯ ನಿರ್ವಹಿಸ ಲಿಲ್ಲ. ನೀವು ಒಬ್ಬ ಮುಸ್ಲಿಂ ಆಯುಕ್ತರಾಗಿದ್ದಿರಿ. ನಿಮ್ಮ ಅಧಿಕಾರದ ಅವಧಿಯಲ್ಲಿಯೇ, ಜಾರ್ಖಂಡ್‌ನ ಸಂಥಾಲ್ ಪರಗಣದಲ್ಲಿ ಗರಿಷ್ಠ ಸಂಖ್ಯೆಯ ಬಾಂಗ್ಲಾದೇಶದ ನುಸುಳುಕೋರರ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿದೆ’ ಎಂದು ದುಬೆ ಆರೋಪಿಸಿದ್ದಾರೆ.

‘ಕ್ರಿ.ಶ. 712ರಲ್ಲಿ ಇಸ್ಲಾಂ ಭಾರತಕ್ಕೆ ಬಂತು. ವಕ್ಫ್‌ಗೆ ಸೇರಿದ್ದು ಎನ್ನುವ ಭೂಮಿ ಆಗ ಹಿಂದೂಗಳು ಅಥವಾ ಬುಡಕಟ್ಟು ಜನರು, ಜೈನರು ಇಲ್ಲವೇ ಬೌದ್ಧರಿಗೆ ಸೇರಿತ್ತು’ ಎಂದೂ ಹೇಳಿದ್ದಾರೆ.

‘ನನ್ನ ಗ್ರಾಮ ವಿಕ್ರಮಶಿಲೆಯನ್ನು ಭಕ್ತಿಯಾರ್ ಖಿಲ್ಜಿ 1189ರಲ್ಲಿ ಸುಟ್ಟುಹಾಕಿದ. ವಿಕ್ರಮಶಿಲಾ ವಿಶ್ವ ವಿದ್ಯಾಲಯವೇ ಮೊಟ್ಟಮೊದಲ ಕುಲಪತಿ ಆತಿಶ ದೀಪಾಂಕರ್ ಅವರನ್ನು ಜಗತ್ತಿಗೆ ನೀಡಿದೆ’ ಎಂದಿದ್ದಾರೆ.

‘ದೇಶವನ್ನು ಇಬ್ಭಾಗ ಮಾಡುವ ಮೂಲಕ ಪಾಕಿಸ್ತಾನ ರಚಿಸಲಾಯಿತು. ಈಗ ಮತ್ತೊಮ್ಮೆ ದೇಶ ವಿಭಜನೆ ಮಾಡಲು ಅವಕಾಶ ನೀಡುವುದಿಲ್ಲ’ ಎಂದೂ ಹೇಳಿದ್ದಾರೆ.

ದುಬೆ ವಿರುದ್ಧ ನ್ಯಾಯಾಂಗ ನಿಂದನೆ: ಅನುಮತಿ ಕೋರಿದ ವಕೀಲ

‘ಸುಪ್ರೀಂ ಕೋರ್ಟ್ ಘನತೆಗೆ ಧಕ್ಕೆ ತರುವಂತಹ ಹೇಳಿಕೆ ನೀಡಿರುವ ಬಿಜೆಪಿ ಸಂಸದ ನಿಶಿಕಾಂತ್ ದುಬೆ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲು ಅನುಮತಿ ನೀಡಬೇಕು’ ಎಂದು ಕೋರಿ ಸುಪ್ರೀಂ ಕೋರ್ಟ್ ವಕೀಲ ಅನಸ್ ತನ್ವೀರ್ ಅವರು ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರಿಗೆ ಪತ್ರ ಬರೆದಿದ್ದಾರೆ.

‘ಸಂಸದ ದುಬೆ ಅವರ ಹೇಳಿಕೆಗಳು ಅವಹೇಳನಕಾರಿ ಹಾಗೂ ಪ್ರಚೋದನಕಾರಿಯಾಗಿವೆ’ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಇವು ಸಂಸದರ ವೈಯಕ್ತಿಕ ಹೇಳಿಕೆಗಳು ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಪ್ರತಿಕ್ರಿಯಿಸಿದ್ದರು. ‘ಪ್ರಜಾಪ್ರಭುತ್ವ ವ್ಯವಸ್ಥೆಯ ಅವಿಭಾಜ್ಯ ಅಂಗವಾದ ನ್ಯಾಯಾಂಗವನ್ನು ಬಿಜೆಪಿ ಗೌರವಿಸುತ್ತದೆ. ದುಬೆ ಹಾಗೂ ಶರ್ಮಾ ಅವರ ನಿಲುವುಗಳನ್ನು ಬಿಜೆಪಿ ಒಪ್ಪುವುದಿಲ್ಲ ಹಾಗೂ ಇಂತಹ ಹೇಳಿಕೆಗಳನ್ನು ಬೆಂಬಲಿಸುವುದಿಲ್ಲ. ಈ ಹೇಳಿಕೆಗಳನ್ನು ಪಕ್ಷ ಸಾರಾಸಗಟಾಗಿ ತಿರಸ್ಕರಿಸುತ್ತದೆ’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದರು.

ವ್ಯಾನ್ಸ್ ಇಂದು ಭಾರತಕ್ಕೆ ಭೇಟಿ

ಪ್ರಧಾನಿ ಜೊತೆ ಮಾತುಕತೆ • ಅಕ್ಷರಧಾಮಕ್ಕೆ ಭೇಟಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಸೋಮವಾರ ಭಾರತಕ್ಕೆ ಭೇಟಿ ನೀಡಲಿದ್ದು, ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಾತುಕತೆ ನಡೆಸಲಿದ್ದಾರೆ.

ವ್ಯಾಪಾರ, ತೆರಿಗೆ, ಪ್ರಾದೇಶಿಕ ಭದ್ರತೆ ಮತ್ತು ದ್ವಿಪಕ್ಷೀಯ ಒಡನಾಟ ಹೆಚ್ಚಿಸುವ ವಿಚಾರವಾಗಿ ಮೋದಿ ಮತ್ತು ವ್ಯಾನ್ಸ್ ನಡುವೆ ಮಾತುಕತೆ ನಡೆಯಲಿದೆ.

ಅಲ್ಲದೆ, ಮೋದಿ ಅವರು ವ್ಯಾನ್ಸ್ ಅವರಿಗೆ ಸೋಮವಾರ ರಾತ್ರಿ ಔತಣಕೂಟ ಆಯೋಜಿಸಿದ್ದಾರೆ. ಔತಣಕೂಟದಲ್ಲಿ ವ್ಯಾನ್ಸ್ ಜೊತೆ ಅವರ ಪತ್ನಿ ಉಷಾ ಅವರೂ ಇರಲಿದ್ದಾರೆ. ಉಷಾ ಅವರು ಭಾರತ ಮೂಲದವರು.

ವ್ಯಾನ್ಸ್, ಉಷಾ ಮತ್ತು ಅವರ ಮೂವರು ಮಕ್ಕಳು ಪಾಲಂ ವಾಯುನೆಲೆಗೆ ಸೋಮವಾರ ಬೆಳಿಗ್ಗೆ 10 ಗಂಟೆಯ ಸುಮಾರಿಗೆ ತಲುಪಲಿದ್ದಾರೆ. ಅವರು ನಾಲ್ಕು ದಿನ ಭಾರತದಲ್ಲಿ ಇರಲಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತ ಸೇರಿದಂತೆ ಸರಿಸುಮಾರು 60 ದೇಶಗಳನ್ನು ಗುರಿಯಾಗಿಸಿಕೊಂಡು ಪ್ರತಿಸುಂಕವನ್ನು ವಿಧಿಸಿ, ಅದನ್ನು 90 ದಿನಗಳ ಮಟ್ಟಿಗೆ ತಡೆಹಿಡಿದ ನಂತರದಲ್ಲಿ ವ್ಯಾನ್ಸ್ ಅವರು ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ.

ಭಾರತ ಮತ್ತು ಅಮೆರಿಕದ ನಡುವೆ ಈಗ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಅಂತಿಮಗೊಳಿಸುವ ವಿಚಾರವಾಗಿ ಮಾತುಕತೆಗಳು ನಡೆಯುತ್ತಿವೆ.

ದೆಹಲಿ ತಲುಪಿದ ಕೆಲವೇ ತಾಸುಗಳಲ್ಲಿ ಅವರು ಸ್ವಾಮಿನಾರಾಯಣ ಅಕ್ಷರಧಾಮ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಭಾರತದ ಸಾಂಪ್ರದಾಯಿಕ ಕರಕುಶಲ ವಸ್ತುಗಳನ್ನು ಮಾರಾಟ ಮಾಡುವ ಮಾರುಕಟ್ಟೆಯೊಂದಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ವ್ಯಾನ್ಸ್ ದಂಪತಿಯನ್ನು ಕೇಂದ್ರ ಸಂಪುಟದ ಹಿರಿಯ ಸಚಿವರೊಬ್ಬರು ಪಾಲಂ ವಾಯುನೆಲೆಯಲ್ಲಿ ಸ್ವಾಗತಿಸಲಿದ್ದಾರೆ. ವ್ಯಾನ್ಸ್ ಕುಟುಂಬವು ಆಗ್ರಾ ಹಾಗೂ ಜೈಪುರಕ್ಕೆ ಭೇಟಿ ನೀಡಲಿದೆ.

ಪ್ರಧಾನಿ ಮೋದಿ ಅವರು ವ್ಯಾನ್ಸ್ ಅವರನ್ನು ತಮ್ಮ ನಿವಾಸದಲ್ಲಿ ಸೋಮವಾರ ಸಂಜೆ 6.30ಕ್ಕೆ ಸ್ವಾಗತಿಸ ಲಿದ್ದಾರೆ. ನಂತರ ಅಧಿಕೃತ ಮಾತುಕತೆ ನಡೆಯಲಿದೆ. ನವ ದೆಹಲಿಯಲ್ಲಿ ವ್ಯಾನ್ಸ್ ಕುಟುಂಬವು ಐಟಿಸಿ ಮೌರ್ಯ ಶೆರಟನ್ ಹೋಟೆಲ್‌ನಲ್ಲಿ ತಂಗಲಿದೆ.

ಪ್ರಧಾನಿಗೆ ಕಾಂಗ್ರೆಸ್ ಪ್ರಶ್ನೆ

ಭಾರತೀಯರನ್ನು ಅಮೆರಿಕದಿಂದ ಗಡೀಪಾರು ಮಾಡುತ್ತಿರುವ ಬಗ್ಗೆ, ಭಾರತದ ವಿದ್ಯಾರ್ಥಿಗಳನ್ನು ಅಮೆರಿಕದಲ್ಲಿ ನಡೆಸಿಕೊಳ್ಳುತ್ತಿರುವ ಕ್ರಮದ ಬಗ್ಗೆ, ನಿಯಮ ಆಧಾರಿತ ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆಯನ್ನು ‘ಸಂಪೂರ್ಣವಾಗಿ ನಾಶ ಮಾಡಿರುವ’ ಬಗ್ಗೆ ಭಾರತ ಹೊಂದಿರುವ ಕಳವಳವನ್ನು ಪ್ರಧಾನಿ ಮೋದಿ ಅವರು ವ್ಯಾನ್ಸ್ ಅವರಲ್ಲಿ ಪ್ರಸ್ತಾಪಿಸಲಿದ್ದಾರೆಯೇ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಹವಾಮಾನ ಬದಲಾವಣೆಗೆ ಸಂಬಂಧಿಸಿದ ಪ್ಯಾರಿಸ್ ಒಪ್ಪಂದದಿಂದ ಮತ್ತು ವಿಶ್ವ ಆರೋಗ್ಯ ಸಂಸ್ಥೆಯಿಂದ ಅಮೆರಿಕವು ಹೊರಬಂದಿರುವುದರ ಕುರಿತ ಕಳವಳವನ್ನು ಮೋದಿ ಅವರು ಪ್ರಸ್ತಾಪ ಮಾಡಬಹುದೇ ಎಂದೂ ಕಾಂಗ್ರೆಸ್ ಪ್ರಶ್ನೆ ಮಾಡಿದೆ. ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಈ ಪ್ರಶ್ನೆಗಳನ್ನು ಎತ್ತಿದ್ದಾರೆ.

ವೃದ್ಧನ ಎಳೆದ ಪ್ರಕರಣ: ವೈದ್ಯ ವಜಾ

ಛತರಪುರ (ಪಿಟಿಐ): ಮಧ್ಯ ಪ್ರದೇಶದ ಛತರಪುರದ ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ 70 ವರ್ಷದ ವ್ಯಕ್ತಿಯನ್ನು ಇಬ್ಬರು ಎಳೆದುಕೊಂಡು ಹೋಗುತ್ತಿದ್ದ ದೃಶ್ಯವಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದಿದೆ.

ಇದರ ಬೆನ್ನಲ್ಲೇ, ಜಿಲ್ಲಾ ಆಸ್ಪತ್ರೆಯ ವೈದ್ಯ ಡಾ.ರಾಜೇಶ್ ಮಿಶ್ರಾ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿದ್ದು, ಸರ್ಜನ್ ಜಿ.ಎಲ್. ಅಹಿರ್‌ವಾರ್ ಅವರನ್ನು ಅಮಾನತು ಮಾಡಲಾಗಿದೆ.

ನೌಗಾಂವ್ ಪಟ್ಟಣದ ಉದ್ಧವ್ ಸಿಂಗ್ ಜೋಶಿ ಅವರು ಏ. 17ರಂದು ತಮ್ಮ ಪತ್ನಿಯನ್ನು ವೈದ್ಯಕೀಯ ಪರೀಕ್ಷೆಗಾಗಿ ಛತರಪುರ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಬಂದಿದ್ದರು.

‘ನಾನು ಸುಮಾರು ಹೊತ್ತು ಸಾಲಿನಲ್ಲಿ ನಿಂತಿದ್ದೆ. ನನ್ನ ಸರದಿ ಬಂದಾಗ ಡಾ. ರಾಜೇಶ್ ಮಿಶ್ರಾ ನನಗೆ ಅಡ್ಡಿಪಡಿಸಿದರು. ಅಲ್ಲದೆ, ನನ್ನ ಕಪಾಳಕ್ಕೆ ಹೊಡೆದು, ಒದ್ದರು’ ಎಂದು ಜೋಶಿ ಆರೋಪಿಸಿದ್ದಾರೆ. ಇಬ್ಬರು ವ್ಯಕ್ತಿಗಳು ಜೋಶಿ ಅವರ ಕೈಗಳನ್ನು ಹಿಡಿದು, ಎಳೆದೊಯ್ಯುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ. ಈ ಸಂಬಂಧ 24 ಗಂಟೆಯಲ್ಲಿ ವಿವರಣೆ ನೀಡುವಂತೆ ಸೂಚಿಸಿ ಆರೋಗ್ಯ ಇಲಾಖೆಯು, ಮಿಶ್ರಾ ಅವರಿಗೆ ನೋಟಿಸ್ ನೀಡಿತ್ತು.

ಇ.ಡಿಗೆ ಹೆದರಲ್ಲ • ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಖರ್ಗೆ ಕಿಡಿ

‘ಮೋದಿಯಿಂದ ಸುಳ್ಳಿನ ಕಾರ್ಖಾನೆ’

ಪ್ರಜಾವಾಣಿ ವಾರ್ತೆ/ ಪಿಟಿಐ

ಬಕ್ಸರ್/ಪಟ್ನಾ (ಪಿಟಿಐ): ‘ಬಿಹಾರಕ್ಕೆ ₹1.25 ಲಕ್ಷ ಕೋಟಿ ಮೊತ್ತದ ಪ್ಯಾಕೇಜ್ ನೀಡುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ್ದ ಭರವಸೆ ಏನಾಯಿತು’ ಎಂದು ಪ್ರಶ್ನಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ‘ಮೋದಿ ಅವರು ಸುಳ್ಳುಗಳ ಕಾರ್ಖಾನೆ ನಡೆಸುತ್ತಿದ್ದಾರೆ’ ಎಂದು ಟೀಕಿಸಿದರು.

ಮಲ್ಲಿಕಾರ್ಜುನ ಖರ್ಗೆ

ಬಕ್ಸರ್‌ನ ದಾಲ್‌ಸಾಗರ್ ಕ್ರೀಡಾಂಗಣ ದಲ್ಲಿ ಭಾನುವಾರ ನಡೆದ ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ್’ ರ‍್ಯಾಲಿಯಲ್ಲಿ ಅವರು ಮಾತನಾಡಿದರು.

‘ಪ್ರಧಾನಿ ಮೋದಿ ಅವರು 2015ರ ಆಗಸ್ಟ್ 18ರಂದು ಬಿಹಾರಕ್ಕೆ ಬಂದಿದ್ದಾಗ, ರಾಜ್ಯದ ಅಭಿವೃದ್ಧಿಗೆ ₹1.25 ಲಕ್ಷ ಕೋಟಿ ಮೊತ್ತದ ವಿಶೇಷ ಪ್ಯಾಕೇಜ್ ನೀಡುವುದಾಗಿ ಘೋಷಿಸಿದ್ದರು. ಅದು ಏನಾಯಿತು ಎಂದು ರಾಜ್ಯದ ಜನರು ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನೂ ಪ್ರಶ್ನಿಸಬೇಕು’ ಎಂದು ಹೇಳಿದರು.

‘ಮೋದಿ ಅವರು ಯುವಜನರಿಗೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದ್ದರು. ಅಂತೆಯೇ ವಿದೇಶಗಳಿಂದ ಕಪ್ಪುಹಣ ಹಿಂದಕ್ಕೆ ತರುವ, ಪ್ರತಿಯೊಬ್ಬರ ಖಾತೆಗೆ ₹15 ಲಕ್ಷ ಜಮೆ ಮಾಡುವ ಭರವಸೆಗಳನ್ನೂ ನೀಡಿದ್ದರು. ಅವೆಲ್ಲ ಏನಾದವು? ಮೋದಿ ಅವರ ‘ಮೇಕ್ ಇನ್ ಇಂಡಿಯಾ’ ಘೋಷಣೆ ಕೂಡ ಒಂದು ಸುಳ್ಳು. ಏಕೆಂದರೆ ಅವರು ಪುನಃ ತೆರೆಯುವುದಾಗಿ ಭರವಸೆ ನೀಡಿದ್ದ ಸಕ್ಕರೆ ಕಾರ್ಖಾನೆಗಳು ಇಲ್ಲಿಯವರೆಗೂ ತೆರೆದಿಲ್ಲ. ಇವೇ ಅಲ್ಲದೇ ಅವರು ನೀಡಿದ್ದ, 2022ರ ವೇಳೆಗೆ ಗಂಗಾ ನದಿ ಶುದ್ಧೀಕರಿಸುವ ಮತ್ತು ರೈತರ ಆದಾಯ ದ್ವಿಗುಣಗೊಳಿಸುವ ಭರವಸೆಗಳು ಏನಾದವು’ ಎಂದು ಅವರು ಪ್ರಶ್ನಿಸಿದರು.

ಬೆದರುವುದಿಲ್ಲ, ತಲೆಬಾಗುವುದಿಲ್ಲ: ಪಕ್ಷದ ವರಿಷ್ಠರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ದೋಷಾರೋಪಪಟ್ಟಿ ಸಲ್ಲಿಸಿರುವ ಕುರಿತು ಪ್ರತಿಕ್ರಿಯಿಸಿದ ಅವರು, ‘ಕಾಂಗ್ರೆಸ್ ಅನ್ನು ಬೆದರಿಸಲು ಹೀಗೆಲ್ಲ ಗುರಿಯಾಗಿಸಲಾಗಿದೆ. ಇದಕ್ಕೆಲ್ಲ ಹೆದರುವುದಿಲ್ಲ ಮತ್ತು ಯಾರ ಮುಂದೆಯೂ ತಲೆಬಾಗುವುದಿಲ್ಲ. ನಮ್ಮ ನಾಯಕರಾದ ಇಂದಿರಾಗಾಂಧಿ, ರಾಜೀವ್ ಗಾಂಧಿ ಅವರು ದೇಶಕ್ಕಾಗಿ ಜೀವವನ್ನೇ ಕಳೆದುಕೊಂಡಿದ್ದಾರೆ’ ಎಂದು ಹೇಳಿದರು.

ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಕಿಡಿ: ‘ಬಿಜೆಪಿ ಮತ್ತು ಆರ್‌ಎಸ್‌ಎಸ್ ಬಡವರು, ಮಹಿಳೆಯರು, ದುರ್ಬಲ ವರ್ಗದವರ ಅಭಿವೃದ್ಧಿಯನ್ನು ಬಯಸುವುದಿಲ್ಲ. ಅದೇನಿದ್ದರೂ ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಸಮಾಜವನ್ನು ವಿಭಜಿಸುವ ಉದ್ದೇಶ ಹೊಂದಿವೆ’ ಎಂದರು. ಮೋದಿ ಅವರು ಇದೇ 24ರಂದು ಬಿಹಾರದ ಝಂಜಾರ್‌ಪುರದ ಮಧುಬನಿಯಲ್ಲಿ ನಡೆಯುವ ರ‍್ಯಾಲಿಯಲ್ಲಿ ಭಾಗವಹಿಸಲಿದ್ದಾರೆ.

‘ಅವಕಾಶವಾದಿ ರಾಜಕಾರಣ’

‘ಬಿಹಾರದಲ್ಲಿ ಜೆಡಿ (ಯು) ಮತ್ತು ಬಿಜೆಪಿ ಮೈತ್ರಿಯು ಅವಕಾಶವಾದಿ ರಾಜಕಾರಣವಾಗಿದೆ. ನಿತೀಶ್ ಕುಮಾರ್ ಅವರು ‘ಕುರ್ಚಿ’ಗಾಗಿ (ಸಿ.ಎಂ.ಸ್ಥಾನ) ಪಥ ಬದಲಾಯಿಸಿದ್ದಾರೆ’ ಎಂದು ಖರ್ಗೆ ಆರೋಪಿಸಿದರು.

‘ಮಹಾತ್ಮ ಗಾಂಧಿ ಅವರನ್ನು ಪೂಜಿಸುವುದಾಗಿ ಹೇಳುವ ನಿತೀಶ್ ಅವರು, ಗಾಂಧಿ ಅವರ ಹತ್ಯೆಗೆ ಜವಾಬ್ದಾರರಾದವರ ಜತೆ ಕೈಜೋಡಿಸಿದ್ದಾರೆ’ ಎಂದು ಯಾವುದೇ ಸಂಘಟನೆಯನ್ನು ಹೆಸರಿಸದೆ ಅವರು ಟೀಕಿಸಿದರು.

‘ಈ ಅವಕಾಶವಾದಿ ಮೈತ್ರಿಯಿಂದ ರಾಜ್ಯದ ಜನರಿಗೆ ಅನುಕೂಲ ಆಗುವುದಿಲ್ಲ. ಹೀಗಾಗಿ, ಈ ವರ್ಷದ ಕೊನೆಯಲ್ಲಿ ಎದುರಾಗುವ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಸರ್ಕಾರವನ್ನು ರಾಜ್ಯದ ಜನರು ಕಿತ್ತೊಗೆದು, ಮಹಾಘಟಬಂಧನ್‌ಗೆ ಮತ ಚಲಾಯಿಸಲಿದ್ದಾರೆ’ ಎಂದು ಅವರು ಹೇಳಿದರು.

ಪ್ರವಾಹ ಜಮ್ಮು–ಕಾಶ್ಮೀರದ ರಾಮಬನ ಜಿಲ್ಲೆಯ ವಿವಿಧೆಡೆ ಶನಿವಾರ ಮಧ್ಯರಾತ್ರಿ ಸುರಿದ ಧಾರಾಕಾರ ಮಳೆಯಿಂದ ಉಂಟಾದ ದಿಢೀರ್ ಪ್ರವಾಹದಲ್ಲಿ ಮೂವರು ಮೃತಪಟ್ಟಿದ್ದಾರೆ. ಪ್ರವಾಹದಿಂದಾಗಿ ಕುಸಿದ ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ವಾಹನಗಳು ಸಿಲುಕಿದ್ದವು –ಪಿಟಿಐ ಚಿತ್ರ

ಅಪಹರಣ, ಲೈಂಗಿಕ- ದೌರ್ಜನ್ಯ: ಮಹಿಳೆಗೆ 20 ವರ್ಷ ಸಜೆ

ಜೈಪುರ (ಪಿಟಿಐ): ಬಾಲಕನನ್ನು ಅಪಹರಿಸಿ, ಲೈಂಗಿಕವಾಗಿ ದೌರ್ಜನ್ಯ ಎಸಗಿದ್ದ, 30 ವರ್ಷದ ಮಹಿಳೆಗೆ ಇಲ್ಲಿನ ಪೋಕ್ಸೊ ನ್ಯಾಯಾಲಯ 20 ವರ್ಷಗಳ ಸಜೆ ವಿಧಿಸಿ ಆದೇಶಿಸಿದೆ.

2023ರಲ್ಲಿ ಈ ಕೃತ್ಯ ನಡೆದಿತ್ತು. ಪ್ರಕರಣದ ತೀರ್ಪು ಪ್ರಕಟಿಸಿದ ಪೋಕ್ಸೊ ನ್ಯಾಯಾಲಯದ ನ್ಯಾಯಾಧೀಶರಾದ ಸಲೀಮ್ ಬಾದರ್ ಅವರು, ಅಪರಾಧಿ ಲಾಲಿಬಾಯಿಗೆ ₹45 ಸಾವಿರ ದಂಡವನ್ನು ವಿಧಿಸಿದರು.

ಬಾಲಕನ ಅಪಹರಣ, ಲೈಂಗಿಕ ದೌರ್ಜನ್ಯ ಆರೋಪದಡಿ ಮಹಿಳೆಯ ವಿರುದ್ಧ ಬಾಲ ನ್ಯಾಯ ಮಂಡಳಿ ಆದೇಶದಂತೆ 2023ರ ನವೆಂಬರ್ 7ರಂದು ಪ್ರಕರಣ ದಾಖಲಾಗಿತ್ತು.

‘16 ವರ್ಷದ ಮಗನನ್ನು ಮಹಿಳೆ ಆಮಿಷವೊಡ್ಡಿ ಜೈಪುರಕ್ಕೆ ಕರೆದೊಯ್ದಿದ್ದು, ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಅಲ್ಲದೆ, ಮಗನಿಗೆ ಮದ್ಯ ಕುಡಿಯಲು ಪ್ರಚೋದಿಸಿದ್ದು, 6–7 ದಿನ ಲೈಂಗಿಕವಾಗಿ ದೌರ್ಜನ್ಯ ಎಸಗಿದ್ದಾರೆ’ ಎಂದು ಬಾಲಕನ ತಾಯಿ ದೂರು ನೀಡಿದ್ದರು.

ದೂರು ಆಧರಿಸಿ ಮಹಿಳೆಯನ್ನು ಬಂಧಿಸಿದ್ದು, ಬಳಿಕ ಜೈಲಿನಿಂದ ಬಿಡುಗಡೆ ಆಗಿದ್ದರು. ಈಗ ಅಪರಾಧ ಸಾಬೀತಾಗಿದ್ದು, ಕೋರ್ಟ್ ಶಿಕ್ಷೆ ವಿಧಿಸಿದೆ ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಮುಕೇಶ್ ಜೋಶಿ ತಿಳಿಸಿದರು.

ಪಡಿಕ್ಕಲ್, ಕೊಹ್ಲಿ ಅರ್ಧಶತಕ • ಪಂಜಾಬ್ ವಿರುದ್ಧ ಮುಯ್ಯಿ ತೀರಿಸಿಕೊಂಡ ಪಾಟೀದಾರ್ ಪಡೆ

ತವರಿನಾಚೆ ಮುಂದುವರಿದ ಆರ್‌ಸಿಬಿ ತಂಡದ ದಿಗ್ವಿಜಯ

ಮುಲ್ಲನಪುರ (ಪಂಜಾಬ್), (ಪಿಟಿಐ): ಅನುಭವಿ ವಿರಾಟ್ ಕೊಹ್ಲಿ ಮಾರ್ಗದರ್ಶನದಲ್ಲಿ ಕನ್ನಡಿಗ ದೇವದತ್ತ ಪಡಿಕ್ಕಲ್ ಆಟ ಅರಳಿತು. ಇವರಿಬ್ಬರ ಅರ್ಧ ಶತಕಗಳ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಏಳು ವಿಕೆಟ್‌ಗಳಿಂದ ಸೋಲಿಸಿತು. ಆ ಮೂಲಕ ತವರಿನಿಂದಾಚೆಗಿನ ಪಂದ್ಯಗಳಲ್ಲಿ ದಿಗ್ವಿಜಯ ಮುಂದುವರಿಸಿತು.

ಎರಡು ದಿನಗಳ ಹಿಂದೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ ತಂಡದ ಕೈಲಿ ಅನುಭವಿಸಿದ ಸೋಲಿಗೆ ಮುಯ್ಯಿಯನ್ನೂ ತೀರಿಸಿಕೊಂಡಿತು. ಗೆಲುವಿಗೆ 158 ರನ್‌ಗಳ ಗುರಿ ಎದುರಿಸಿದ್ದ ಬೆಂಗಳೂರಿನ ತಂಡ ಪ್ರಯಾಸವಿಲ್ಲದೇ 18.5 ಓವರುಗಳಲ್ಲಿ 3 ವಿಕೆಟ್‌ಗೆ 159 ರನ್ ಬಾರಿಸಿ ಸಂಭ್ರಮಿಸಿತು. ಅಂಕಪಟ್ಟಿಯಲ್ಲಿ ಐದನೇ ಸ್ಥಾನದಿಂದ ಮೂರನೇ ಸ್ಥಾನಕ್ಕೇರಿತು.

ಇಂಪ್ಯಾಕ್ಟ್ ಪ್ಲೇಯರ್ ಆಗಿದ್ದ ಎಡಗೈ ಬ್ಯಾಟರ್ ಪಡಿಕ್ಕಲ್ (61, 35ಎ) ಸೊಗಸಾದ ಆಟವಾಡಿ ಐಪಿಎಲ್‌ನಲ್ಲಿ ಮೊದಲ ಅರ್ಧ ಶತಕ ದಾಖಲಿಸಿದರು. 'ಚೇಸ್ ಮಾಸ್ಟರ್' ಕೊಹ್ಲಿ 54 ಎಸೆತಗಳಲ್ಲಿ 73 ರನ್ ಬಾರಿಸಿ ಅಜೇಯರಾಗುಳಿದರು. ಇವರಿಬ್ಬರು ಮೂರನೇ ವಿಕೆಟ್‌ಗೆ 103 ರನ್ ಸೇರಿಸಿದರು.

ಇಬ್ಬರೂ ಸಾಹಸಗಳಿಗೆ ಹೋಗದೇ ಸಾಂಪ್ರದಾಯಿಕ ಹೊಡೆತಗಳನ್ನು ಆಡಿದರು. ವೇಗಿಗಳ ಜೊತೆಗೆ ಸ್ಪಿನ್ನರ್‌ಗಳನ್ನೂ ವಿಶ್ವಾಸದಿಂದ ಎದುರಿಸಿದರು. ಎಡಗೈ ಸ್ಪಿನ್ನರ್ ಹರ್‌ಪ್ರೀತ್ ಬ್ರಾರ್ ಬೌಲಿಂಗ್‌ನಲ್ಲಿ ತಮ್ಮ ಐದನೇ ಸಿಕ್ಸರ್ ಬಾರಿಸುವ ಯತ್ನದಲ್ಲಿ ಪಡಿಕ್ಕಲ್ ಲಾಂಗ್‌ಆನ್‌ನಲ್ಲಿ ಕ್ಯಾಚಿತ್ತರು. ಅಷ್ಟರಲ್ಲಿ ಆರ್‌ಸಿಬಿ ಗೆಲುವು ಖಚಿತವಾಗಿತ್ತು.

ಈ ಆವೃತ್ತಿಯಲ್ಲಿ ನಾಲ್ಕನೇ ಅರ್ಧಶತಕವನ್ನು ದಾಟಿದ ಮೇಲೆ ಕೊಹ್ಲಿ ಆಕ್ರಮಣಕಾರಿಯಾದರು. ಯಜುವೇಂದ್ರ ಚಾಹಲ್ ಬೌಲಿಂಗ್‌ನಲ್ಲಿ ಎತ್ತಿದ ನೇರ ಸಿಕ್ಸರ್ ಅವರ ಅತ್ಯುತ್ತಮ ಹೊಡೆತವೆನಿಸಿತು.

ಮಿಂಚಿದ ಸ್ಪಿನ್ನರ್‌ಗಳು: ಇದಕ್ಕೆ ಮೊದಲು, ಆರ್‌ಸಿಬಿ ಸ್ಪಿನ್ನರ್‌ಗಳಾದ ಕೃಣಾಲ್ ಪಾಂಡ್ಯ (25ಕ್ಕೆ2) ಮತ್ತು ಸುಯಶ್ ಶರ್ಮಾ (27ಕ್ಕೆ2) ಅವರು ಕಿಂಗ್ಸ್ ತಂಡವನ್ನು 20 ಓವರುಗಳಲ್ಲಿ 6 ವಿಕೆಟ್‌ಗೆ 157 ರನ್‌ಗಳಿಗೆ ಕಟ್ಟಿಹಾಕಲು ನೆರವಾಗಿದ್ದರು. ಆರ್‌ಸಿಬಿ ಟಾಸ್ ಗೆದ್ದು ನಿರೀಕ್ಷೆಯಂತೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಪ್ರಿಯಾಂಶ್ ಆರ್ಯ (22) ಮತ್ತು ಪ್ರಭಸಿಮ್ರನ್ ಸಿಂಗ್ (33) ಅವರು ಕೇವಲ 4.2 ಓವರುಗಳಲ್ಲಿ 42 ರನ್ ಸೇರಿಸಿ ಪಂಜಾಬ್‌ಗೆ ಬಿರುಸಿನ ಆರಂಭ ಒದಗಿಸಿದ್ದರು. ಕೃಣಾಲ್ ಅವರನ್ನು ಐದನೇ ಓವರಿನಲ್ಲಿ ದಾಳಿಗಿಳಿಸುವ ಪಾಟೀದಾರ್ ನಿರ್ಧಾರ ತಕ್ಷಣವೇ ಫಲ ನೀಡಿತು. ಪಾಂಡ್ಯ ಎರಡನೇ ಎಸೆತದಲ್ಲೇ ಆರ್ಯ ವಿಕೆಟ್ ಪಡೆದರು. ಇದರೊಂದಿಗೆ ಪಂಜಾಬ್ ಇನಿಂಗ್ಸ್ ಹಳಿತಪ್ಪಿತು. 14 ರನ್‌ಗಳ ಅಂತರದಲ್ಲಿ 3 ವಿಕೆಟ್‌ಗಳು ಬಿದ್ದವು. ನಾಯಕ ಶ್ರೇಯಸ್ ಅಯ್ಯರ್ (6) ಮತ್ತೊಮ್ಮೆ ನಿರಾಸೆ ಮೂಡಿಸಿದರು. ನೇಹಲ್ ವಧೇರಾ (5) ಅವರ ರನ್‌ಔಟ್ ಆತಿಥೇಯರ ಬೇಗುದಿ ಹೆಚ್ಚಿಸಿತು. ಸುಯಶ್ ಒಂದೇ ಓವರಿನಲ್ಲಿ (14ನೇ ಓವರ್) ಇಂಗ್ಲಿಸ್ ಮತ್ತು ಸ್ಟೊಯಿನಿಸ್ ವಿಕೆಟ್ ಪಡೆದಿದ್ದರಿಂದ ಆರ್‌ಸಿಬಿ ಮೇಲುಗೈ ಸಾಧಿಸಿತು. ಶಶಾಂಕ್ ಸಿಂಗ್ (ಔಟಾಗದೇ 31, 33ಎ) ಮತ್ತು ಮಾರ್ಕೊ ಯಾನ್ಸೆನ್ (ಔಟಾಗದೇ 25) ಅವರು ತಂಡದ ಮೊತ್ತ 150ರ ಗಡಿ ದಾಟಿಸಿದರು.

ವಿರಾಟ್ ಕೊಹ್ಲಿ ಬ್ಯಾಟಿಂಗ್ ಶೈಲಿ

73* ರನ್ | 54 ಎಸೆತ | 7 ಬೌಂಡರಿ | 1 ಸಿಕ್ಸರ್

ದೇವದತ್ತ ಪಡಿಕ್ಕಲ್

61 ರನ್ | 35 ಎಸೆತ | 5 ಬೌಂಡರಿ | 4 ಸಿಕ್ಸರ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	7	5	2	10	0.984
ಡೆಲ್ಲಿ ಕ್ಯಾಪಿಟಲ್ಸ್	7	5	2	10	0.589
ರಾಯಲ್ ಚಾಲೆಂಜರ್ಸ್ ಬೆಂಗಳೂರು	8	5	3	10	0.472
ಪಂಜಾಬ್ ಕಿಂಗ್ಸ್	8	5	3	10	0.177
ಲಖನೌ ಸೂಪರ್ ಜೈಂಟ್ಸ್	8	5	3	10	0.088
ಮುಂಬೈ ಇಂಡಿಯನ್ಸ್	8	4	4	8	0.483
ಕೋಲ್ಕತ್ತ ನೈಟ್ ರೈಡರ್ಸ್	7	3	4	6	0.547
ರಾಜಸ್ಥಾನ ರಾಯಲ್ಸ್	8	2	6	4	-0.633
ಸನ್‌ರೈಸರ್ಸ್ ಹೈದರಾಬಾದ್	7	2	5	4	-1.217
ಚೆನ್ನೈ ಸೂಪರ್ ಕಿಂಗ್ಸ್	8	2	6	4	-1.392

ಆರೇಂಜ್ ಕ್ಯಾಪ್: ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 368 ರನ್

ಪರ್ಪಲ್ ಕ್ಯಾಪ್: ಪ್ರಸಿದ್ಧ ಕೃಷ್ಣ (ಜಿಟಿ) 14 ವಿಕೆಟ್

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್: 6ಕ್ಕೆ 157 (20 ಓವರ್‌ಗಳಲ್ಲಿ)
ಪ್ರಿಯಾಂಶ್ ಸಿ ಡೇವಿಡ್ ಬಿ ಕೃಣಾಲ್ 22 (15ಎ, 4x3, 6x1)
ಪ್ರಭಸಿಮ್ರನ್ ಸಿ ಡೇವಿಡ್ ಬಿ ಕೃಣಾಲ್ 33 (17ಎ, 4x5, 6x1)
ಶ್ರೇಯಸ್ ಸಿ ಕೃಣಾಲ್ ಬಿ ಶೆಫರ್ಡ್ 6 (10ಎ, 4x1)
ಇಂಗ್ಲಿಸ್ ಬಿ ಸುಯಶ್ 29 (17ಎ, 4x2, 6x1)
ನೇಹಲ್ ರನೌಟ್ (ಡೇವಿಡ್/ಕೊಹ್ಲಿ/ಶರ್ಮಾ) 5 (6ಎ)
ಶಶಾಂಕ್ ಸಿಂಗ್ ಔಟಾಗದೇ 31 (33ಎ, 4x1)
ಮಾರ್ಕಸ್ ಬಿ ಸುಯಶ್ 1 (2ಎ)
ಮಾರ್ಕೊ ಯಾನ್ಸೆನ್ ಔಟಾಗದೇ 25 (20ಎ, 6x2)
ಇತರೆ: 5 (ಲೆಗ್‌ಬೈ 1, ವೈಡ್ 4)
ವಿಕೆಟ್ ಪತನ: 1-42 (ಪ್ರಿಯಾಂಶ್ ಆರ್ಯ, 4.2), 2-62 (ಪ್ರಭಸಿಮ್ರನ್ ಸಿಂಗ್, 6.1), 3-68 (ಶ್ರೇಯಸ್ ಅಯ್ಯರ್, 7.4), 4-76 (ನೇಹಲ್ ವಧೇರಾ, 8.6), 5-112 (ಜೋಶ್ ಇಂಗ್ಲಿಸ್, 13.2), 6-114 (ಮಾರ್ಕಸ್ ಸ್ಟೋಯಿನಿಸ್, 13.5)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-26-0, ಯಶ್ ದಯಾಳ್ 2-0-22-0, ಜೋಶ್ ಹೇಜಲ್‌ವುಡ್ 4-0-39-0, ಕೃಣಾಲ್ ಪಾಂಡ್ಯ 4-0-25-2, ರೊಮಾರಿಯೊ ಶೆಫರ್ಡ್ 2-0-18-1, ಸುಯಶ್ ಶರ್ಮಾ 4-0-26-2

ರಾಯಲ್ ಚಾಲೆಂಜರ್ಸ್ ಬೆಂಗಳೂರು: 3ಕ್ಕೆ 159 (18.5 ಓವರ್‌ಗಳಲ್ಲಿ)
ಸಾಲ್ಟ್ ಸಿ ಇಂಗ್ಲಿಸ್ ಬಿ ಅರ್ಷದೀಪ್ 1 (3ಎ)
ವಿರಾಟ್ ಕೊಹ್ಲಿ ಔಟಾಗದೇ 73 (54ಎ, 4x7, 6x1)
ಪಡಿಕ್ಕಲ್ ಸಿ ವಧೇರಾ ಬಿ ಹರ್‌ಪ್ರೀತ್ 61 (35ಎ, 4x5, 6x4)
ಪಾಟೀದಾರ್ ಸಿ ಯಾನ್ಸೆನ್ ಬಿ ಚಾಹಲ್ 12 (13ಎ, 4x1)
ಜಿತೇಶ್ ಶರ್ಮಾ ಔಟಾಗದೇ 11 (8ಎ, 6x1)
ಇತರೆ: 1 (ವೈಡ್ 1)
ವಿಕೆಟ್ ಪತನ: 1-6 (ಫಿಲ್ ಸಾಲ್ಟ್, 0.6), 2-109 (ದೇವದತ್ತ ಪಡಿಕ್ಕಲ್, 12.3), 3-143 (ರಜತ್ ಪಾಟೀದಾರ್, 16.4)
ಬೌಲಿಂಗ್: ಅರ್ಷದೀಪ್ ಸಿಂಗ್ 3-0-26-1, ಕ್ಸೇವಿಯರ್ ಬಾರ್ಟ್ಲೆಟ್ 3-0-28-0, ಹರ್‌ಪ್ರೀತ್ ಬ್ರಾರ್ 4-0-27-1, ಮಾರ್ಕೊ ಯಾನ್ಸೆನ್ 3-0-20-0, ಯಜುವೇಂದ್ರ ಚಾಹಲ್ 4-0-36-1, ಮಾರ್ಕಸ್ ಸ್ಟೊಯಿನಿಸ್ 1-0-13-0, ನೇಹಲ್ ವಧೇರಾ 0.5-0-9-0
ಪಂದ್ಯದ ಆಟಗಾರ: ವಿರಾಟ್ ಕೊಹ್ಲಿ

ಫಲಿತಾಂಶ: ಆರ್‌ಸಿಬಿ ತಂಡಕ್ಕೆ 7 ವಿಕೆಟ್‌ಗಳ ಜಯ

ಅಬ್ಬರಿಸಿದ ರೋಹಿತ್, ಸೂರ್ಯ

ಮುಂಬೈಗೆ ಹ್ಯಾಟ್ರಿಕ್ ಗೆಲುವು: ಚೆನ್ನೈಗೆ ಆರನೇ ಸೋಲು

ಮುಂಬೈ (ಪಿಟಿಐ): ರೋಹಿತ್ ಶರ್ಮಾ ಅಜೇಯ 76 ರನ್ ಗಳಿಸಿ ಹಾಲಿ ಐಪಿಎಲ್‌ನಲ್ಲಿ ಕೊನೆಗೂ ರನ್ ಬರದಿಂದ ಹೊರಬಂದರು. ಜೊತೆಗೆ ಸೂರ್ಯಕುಮಾರ್ ಯಾದವ್ ಕೂಡ ಮಿಂಚಿದರು. ಮುಂಬೈ ಇಂಡಿಯನ್ಸ್ ತಂಡ ಭಾನುವಾರ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಒಂಬತ್ತು ವಿಕೆಟ್‌ಗಳ ನಿರಾಯಾಸ ಜಯ ಪಡೆಯಲು ಇವರಿಬ್ಬರ ಶತಕದ ಜೊತೆಯಾಟ ಕಾರಣವಾಯಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಗೆಲುವಿಗೆ 177 ರನ್ ಗುರಿ ಬೆನ್ನಟ್ಟಿದ ಮುಂಬೈ ತಂಡವು 26 ಎಸೆತಗಳು ಇರುವಂತೆ ಒಂದು ವಿಕೆಟ್‌ಗೆ 177 ರನ್ ಹೊಡೆದು, ಹ್ಯಾಟ್ರಿಕ್ ಗೆಲುವನ್ನು ದಾಖಲಿಸಿತು. ಶರ್ಮಾ ಮತ್ತು ಸೂರ್ಯ ಮುರಿಯದ ಎರಡನೇ ವಿಕೆಟ್‌ಗೆ 114 (54ಎ) ರನ್ ಸೇರಿಸಿ ಗೆಲುವನ್ನು ತ್ವರಿತಗೊಳಿಸಿದರು.

ಈ ಮೊದಲಿನ ಆರು ಇನ್ನಿಂಗ್ಸ್‌ಗಳಲ್ಲಿ ಕೇವಲ 82 ರನ್ ಗಳಿಸಿದ್ದ ಶರ್ಮಾ ತವರಿನಲ್ಲಿ ಅಭಿಮಾನಿಗಳ ಎದುರು ಅಬ್ಬರಿಸಿದರು. 45 ಎಸೆತಗಳ ಅವರ ಇನ್ನಿಂಗ್ಸ್‌ನಲ್ಲಿ ನಾಲ್ಕು ಬೌಂಡರಿ ಮತ್ತು ಅರ್ಧ ಡಜನ್ ಸಿಕ್ಸರ್ ಇದ್ದವು. ಇದೇ ವೇಳೆ ಶರ್ಮಾ ಅವರು ಐಪಿಎಲ್‌ನಲ್ಲಿ ಒಟ್ಟು ರನ್ ಗಳಿಕೆಯಲ್ಲಿ ಶಿಖರ್ ಧವನ್ ದಾಖಲೆಯನ್ನು ಹಿಂದಿಕ್ಕಿ ಎರಡನೇ ಸ್ಥಾನಕ್ಕೆ ಏರಿದರು. ವಿರಾಟ್ ಕೊಹ್ಲಿ ಅಗ್ರಸ್ಥಾನದಲ್ಲಿದ್ದಾರೆ.

ಸೂರ್ಯಕುಮಾರ್ 30 ಎಸೆತಗಳಲ್ಲಿ ಅಜೇಯ 68 ರನ್ ಗಳಿಸಿದರು. ಅವರು ಆರು ಬೌಂಡರಿ ಮತ್ತು ಐದು ಸಿಕ್ಸರ್ ಸಿಡಿಸಿದರು. ಶರ್ಮಾ ಮತ್ತು ರೆಯಾನ್ ರಿಕಲ್ಟನ್ (24;19ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 63 ರನ್ ಸೇರಿಸಿದ್ದರು.

ಇದಕ್ಕೂ ಮೊದಲು ಟಾಸ್ ಗೆದ್ದ ಮುಂಬೈ ಫೀಲ್ಡಿಂಗ್ ಆಯ್ದುಕೊಂಡಿತು. ಶಿವಂ ದುಬೆ (50, 32ಎ, 4x2, 6x4) ಮತ್ತು ರವೀಂದ್ರ ಜಡೇಜ (ಔಟಾಗದೇ 53, 35ಎ, 4x4, 6x2) ಅವರ ಉಪಯುಕ್ತ ಅರ್ಧಶತಕಗಳ ನೆರವಿನಿಂದ ಚೆನ್ನೈ ತಂಡ 5 ವಿಕೆಟ್‌ಗೆ 176 ರನ್ ಗಳಿಸಿತು.

ಹದಿಹರೆಯದ ಆಟಗಾರ ಆಯುಷ್ ಮ್ಹಾತ್ರೆ (32, 15ಎ, 4x4, 6x2) ತಮ್ಮ ಚೊಚ್ಚಲ ಐಪಿಎಲ್ ಪಂದ್ಯದಲ್ಲಿ ನಿರಾಸೆ ಮೂಡಿಸಲಿಲ್ಲ. ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗಿಳಿದ 17 ವರ್ಷ ವಯಸ್ಸಿನ ಈ ಆಟಗಾರ ಚೊಚ್ಚಲ ಪ್ರಯತ್ನದಲ್ಲೇ ಆಕ್ರಮಣಕಾರಿ ಆಟದಿಂದ ಗಮನ ಸೆಳೆದರು. ಫ್ಲಿಕ್, ಪುಲ್ ಹೊಡೆತಗಳನ್ನು ಪ್ರದರ್ಶಿಸಿದರು. ಸತತವಾಗಿ ವಿಫಲರಾದ ರಾಹುಲ್ ತ್ರಿಪಾಠಿ ಅವರನ್ನು ಚೆನ್ನೈ ತಂಡ ಕೈಬಿಟ್ಟಿತ್ತು.

ನಾಲ್ಕನೇ ಕ್ರಮಾಂಕಕ್ಕೆ ಬಡ್ತಿ ಪಡೆದ ಜಡೇಜ ಅವರಿಗೆ ಇದು ಈ ಬಾರಿಯ ಐಪಿಎಲ್‌ನಲ್ಲಿ ಮೊದಲ ಅರ್ಧಶತಕ. ದುಬೆ ಅವರೂ ಈ ಬಾರಿ ಮೊದಲ ಅರ್ಧಶತಕ ದಾಖಲಿಸಿದರು. ಇವರಿಬ್ಬರು ಕ್ರೀಸಿಗೆ ಬರುವ ಮೊದಲು ಚೆನ್ನೈ ಕುಸಿಯುವ ಆತಂಕದಲ್ಲಿತ್ತು. ತಂಡದ ಮೊತ್ತ 3 ವಿಕೆಟ್‌ಗೆ 63 ರನ್‌ಗಳಾಗಿದ್ದಾಗ ಜೊತೆಗೂಡಿದ ಇವರಿಬ್ಬರು 79 ರನ್ ಜೊತೆಯಾಟವಾಡಿದರು.

ಮುಂಬೈ ಇಂಡಿಯನ್ಸ್ ತಂಡದ ಸೂರ್ಯಕುಮಾರ್ ಯಾದವ್ ಮತ್ತು ರೋಹಿತ್ ಶರ್ಮಾ — ಎಎಫ್‌ಪಿ ಚಿತ್ರ

ಐಪಿಎಲ್‌ನಲ್ಲಿ ಗರಿಷ್ಠ ರನ್ ಗಳಿಸಿದವರು

ಆಟಗಾರ	ಪಂದ್ಯ	ಒಟ್ಟು ರನ್	ಶತಕ	ಅರ್ಧಶತಕ
ವಿರಾಟ್ ಕೊಹ್ಲಿ	260	8326	8	59
ರೋಹಿತ್ ಶರ್ಮಾ	264	6786	2	44
ಶಿಖರ್ ಧವನ್	222	6769	2	51
ಡೇವಿಡ್ ವಾರ್ನರ್	184	6565	4	62
ಸುರೇಶ್ ರೈನಾ	205	5528	1	39
ಎಂ.ಎಸ್.ಧೋನಿ	272	5377	-	24

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 5ಕ್ಕೆ 176 (ಆಯುಷ್ ಮ್ಹಾತ್ರೆ 32, ರವೀಂದ್ರ ಜಡೇಜ ಔಟಾಗದೇ 53, ಶಿವಂ ದುಬೆ 50; ಜಸ್‌ಪ್ರೀತ್ ಬೂಮ್ರಾ 25ಕ್ಕೆ 2, ಮಿಚೆಲ್ ಸ್ಯಾಂಟನರ್ 14ಕ್ಕೆ1). **ಮುಂಬೈ ಇಂಡಿಯನ್ಸ್:** 15.4 ಓವರ್‌ಗಳಲ್ಲಿ 1ಕ್ಕೆ 177 (ರೆಯಾನ್ ರಿಕಲ್ಟನ್ 24, ರೋಹಿತ್ ಶರ್ಮಾ ಔಟಾಗದೇ 76, ಸೂರ್ಯಕುಮಾರ್ ಯಾದವ್ ಔಟಾಗದೇ 68; ರವೀಂದ್ರ ಜಡೇಜ 28ಕ್ಕೆ 1). **ಪಂದ್ಯದ ಆಟಗಾರ:** ರೋಹಿತ್ ಶರ್ಮಾ

ಶೂಟಿಂಗ್ ವಿಶ್ವಕಪ್: ಬಾಬುತಾಗೆ ಬೆಳ್ಳಿ

ನವದೆಹಲಿ (ಪಿಟಿಐ): ಒಲಿಂಪಿಯನ್ ಅರ್ಜುನ್ ಬಾಬುತಾ ಅವರು ಪೆರುವಿನ ಲಿಮಾದಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್‌ನ ಪುರುಷರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರು. ರುದ್ರಾಂಕ್ಷ್ ಪಾಟೀಲ್ ಮತ್ತು ಆರ್ಯ ಬೋರ್ಸೆ ಜೋಡಿ 10 ಮೀ. ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ಬೆಳ್ಳಿ ಜಯಿಸಿತು.

ಕಳೆದ ವರ್ಷ ಪ್ಯಾರಿಸ್ ಕ್ರೀಡಾಕೂಟದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಬಾಬುತಾ (252.3) ರೋಚಕ ಫೈನಲ್‌ನಲ್ಲಿ ಹಾಲಿ ಒಲಿಂಪಿಕ್ ಚಾಂಪಿಯನ್ ಚೀನಾದ ಶೆಂಗ್ ಲಿಹಾವೊ (252.4) ವಿರುದ್ಧ ಕೇವಲ 0.1 ಅಂಕಗಳಿಂದ ಸೋತರು.

ರುದ್ರಾಂಕ್ಷ್ ಮತ್ತು ಆರ್ಯ ಜೋಡಿಯು ಚಿನ್ನದ ಪದಕ ಸುತ್ತಿನಲ್ಲಿ 11-17ರಿಂದ ನಾರ್ವೆಯ ಜೋಡಿ ಜಾನ್ ಹರ್ಮನ್ ಹೆಗ್ ಮತ್ತು ಜೀನೆಟ್ ಹೆಗ್ ಡ್ಯುಸ್ಟಾಡ್ ವಿರುದ್ಧ ಪರಾಭವಗೊಂಡಿತು.

ಭಾರತದ ಶೂಟರ್‌ಗಳು ಈಗಾಗಲೇ ಎರಡು ಚಿನ್ನ ಮತ್ತು ಒಂದು ಕಂಚಿನ ಪದಕ ಗೆದ್ದಿದ್ದಾರೆ. ಈಗ ಎರಡು ಬೆಳ್ಳಿ ಪದಕ ಸೇರ್ಪಡೆಯಾಗಿದೆ.

ಸಂಕ್ಷಿಪ್ತ ಸುದ್ದಿ

ಶುಭಮನ್ ಗಿಲ್‌ಗೆ ₹12 ಲಕ್ಷ ದಂಡ

ಅಹಮದಾಬಾದ್ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ನಿಗದಿತ ಅವಧಿಯಲ್ಲಿ ಓವರ್‌ಗಳನ್ನು ಪೂರೈಸದ ಕಾರಣಕ್ಕೆ ಗುಜರಾತ್ ಟೈಟನ್ಸ್ ತಂಡದ ನಾಯಕ ಶುಭಮನ್ ಗಿಲ್ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ.

ಈ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ 7 ವಿಕೆಟ್‌ಗಳ ಗೆಲುವು ಪಡೆದಿತ್ತು.

ಫೆಡರೇಷನ್ ಕಪ್ ಅಥ್ಲೆಟಿಕ್ಸ್ ಇಂದಿನಿಂದ

ಕೊಚ್ಚಿ (ಪಿಟಿಐ): ಮುಂದಿನ ತಿಂಗಳ ಏಷ್ಯನ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯುವ ವಿಶ್ವಾಸದೊಡನೆ ದೇಶದ 400ಕ್ಕೂ ಹೆಚ್ಚು ಮಂದಿ ಅಥ್ಲೀಟುಗಳು ಸೋಮವಾರ ಇಲ್ಲಿ ಆರಂಭವಾಗುವ 28ನೇ ಫೆಡರೇಷನ್ ಕಪ್ ಸೀನಿಯರ್ ಅಥ್ಲೆಟಿಕ್ ಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ.

ನಾಲ್ಕು ದಿನಗಳ ಈ ಕೂಟದಲ್ಲಿ 38 ಸ್ಪರ್ಧೆಗಳಲ್ಲಿ ಪದಕಗಳನ್ನು ನೀಡಲಾಗುತ್ತಿದೆ. ಮೊದಲ ದಿನ ಪುರುಷರ ಮತ್ತು ಮಹಿಳೆಯರ 10,000 ಮೀ. ಓಟ ನಡೆಯಲಿದ್ದು, ತೀವ್ರ ಪೈಪೋಟಿ ನಿರೀಕ್ಷಿಸಲಾಗಿದೆ.

ಪುರುಷರ ಜಾವೆಲಿನ್‌ನಲ್ಲಿ ಉತ್ತರ ಪ್ರದೇಶದ ಉದಯೋನ್ಮುಖ ತಾರೆ ಸಚಿನ್ ಯಾದವ್ ಅವರ ಮೇಲೆ ಕುತೂಹಲದ ಕಣ್ಣು ಇದೆ. ಅವರು ತಮ್ಮ ವೈಯಕ್ತಿಕ ಶ್ರೇಷ್ಠ ಪ್ರದರ್ಶನವನ್ನು (84.39 ಮೀ.) ಎರಡು ತಿಂಗಳ ಹಿಂದೆ ದಾಖಲಿಸಿದ್ದರು.

ಏಷ್ಯನ್ ಚಾಂಪಿಯನ್‌ಷಿಪ್ ಮೇ 27 ರಿಂದ 31ರವರೆಗೆ ದಕ್ಷಿಣ ಕೊರಿಯಾದ ಗುಮಿಯಲ್ಲಿ ನಡೆಯಲಿದೆ.

ಸ್ಕ್ವಾಷ್: ಅನಾಹತ್, ಚೋತ್ರಾನಿಗೆ ಟಿಕೆಟ್

ಕ್ವಾಲಾಲಂಪುರ (ಪಿಟಿಐ): ಭಾರತದ ಅನಾಹತ್ ಸಿಂಗ್ ಮತ್ತು ವೀರ್ ಚೋತ್ರಾನಿ ಅವರು ಏಷ್ಯನ್ ಸ್ಕ್ವಾಷ್ ಕ್ವಾಲಿಫೈಯರ್ ಟೂರ್ನಿಯಲ್ಲಿ ಭಾನುವಾರ ಪ್ರಶಸ್ತಿ ಗೆದ್ದರು. ಈ ಮೂಲಕ ಷಿಕಾಗೊದಲ್ಲಿ ಮೇ ತಿಂಗಳಿನಲ್ಲಿ ನಡೆಯುವ ವಿಶ್ವ ಚಾಂಪಿಯನ್‌ಷಿಪ್‌ಗೆ ಟಿಕೆಟ್ ಪಡೆದರು.

17 ವರ್ಷ ವಯಸ್ಸಿನ ಅನಾಹತ್ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ 11-4, 9-11, 11-2, 11-8ರಿಂದ ಹಾಂಗ್‌ಕಾಂಗ್ ಚೀನಾದ ಟೋಬಿ ತ್ಸೆ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್‌ನ ಫೈನಲ್‌ನಲ್ಲಿ 23 ವರ್ಷ ವಯಸ್ಸಿನ ಚೋತ್ರಾನಿ 11-3, 11-4, 11-8 ರಿಂದ ಆತಿಥೇಯ ಮಲೇಷ್ಯಾದ ಅಮೇಶನರಾಜ್ ಚಂದರನ್ ಅವರನ್ನು ಸೋಲಿಸಿದರು.

ಕೋಲ್ಕತ್ತ ತಂಡಕ್ಕೆ ಪ್ರಬಲ ಟೈಟನ್ಸ್ ಸವಾಲು

ಕೋಲ್ಕತ್ತ (ಪಿಟಿಐ): ವಿಫಲವಾಗಿರುವ ಬ್ಯಾಟರ್‌ಗಳು ಲಯಕ್ಕೆ ಮರಳುವರೆಂಬ ವಿಶ್ವಾಸದೊಡನೆ ಕೋಲ್ಕತ್ತ ನೈಟ್ ರೈಡರ್ಸ್ ಸೋಮವಾರ ನಡೆಯುವ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ. ಟೈಟನ್ಸ್ ಉತ್ತಮ ಪ್ರದರ್ಶನ ನೀಡುತ್ತಿದ್ದು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಅಜಿಂಕ್ಯ ರಹಾನೆ

ಪ್ರಸಿದ್ಧ ಕೃಷ್ಣ

ಈ ಹಿಂದಿನ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಎದುರು 112 ರನ್ ಗುರಿ ಎದುರಿಸಿದ್ದ ಕೆಕೆಆರ್ ತಂಡ 95 ರನ್ನಿಗೆ ಉರುಳಿತ್ತು. ಆದರೆ ಅದರ ಬ್ಯಾಟರ್‌ಗಳ ವೈಫಲ್ಯ ಹೊಸದಲ್ಲ.

₹23.75 ಕೋಟಿ ಮೌಲ್ಯ ಪಡೆದು ತಂಡದ ಅತಿ ದುಬಾರಿ ಆಟಗಾರ ಎನಿಸಿರುವ ವೆಂಕಟೇಶ ಅಯ್ಯರ್ 24.20 ಸರಾಸರಿಯಲ್ಲಿ ಬರೇ 121 ರನ್ ಗಳಿಸಿದ್ದಾರೆ. ರಮಣದೀಪ್ ಆರು ಇನಿಂಗ್ಸ್‌ಗಳಿಂದ ಗಳಿಸಿರುವುದು 29 ರನ್‌ಗಳನ್ನಷ್ಟೇ. ಆ್ಯಂಡ್ರೆ ರಸೆಲ್ 5 ಇನಿಂಗ್ಸ್‌ಗಳಿಂದ 34 ಮತ್ತು ರಿಂಕು ಸಿಂಗ್ 38.66 ಸರಾಸರಿಯಲ್ಲಿ 116 ರನ್ ಕಲೆಹಾಕಿದ್ದಾರೆ. ಹೀಗೆ ತಂಡದ ಹೆಚ್ಚಿನ ಆಟಗಾರರು ಕೈಕೊಡುತ್ತಿರುವುದು ಕೆಕೆಆರ್‌ಗೆ ತಲೆನೋವಾಗಿದೆ.

ನಾಯಕ ಅಜಿಂಕ್ಯ ರಹಾನೆ (221 ರನ್) ಮತ್ತು ಯುವ ಆಟಗಾರ ಅಂಗ್‌ಕ್ರಿಶ್ ರಘುವಂಶಿ (170) ಮಾತ್ರ ಯಶಸ್ಸು ಕಂಡಿದ್ದಾರೆ.

ಭಾರತ ತಂಡದ ಸಹಾಯಕ ಕೋಚ್ ಅಭಿಷೇಕ್ ನಾಯರ್ ಅವರನ್ನು ಬಿಸಿಸಿಐ ವಜಾಗೊಳಿಸಿರುವುದನ್ನು ಅಧಿಕೃತಗೊಳಿಸುವ ಮೊದಲೇ ಅವರು ಕೋಲ್ಕತ್ತ ತಂಡಕ್ಕೆ ಮರಳಿರುವುದು ತಂಡದ ಸ್ಥೈರ್ಯ ಸ್ವಲ್ಪ ಹೆಚ್ಚಿಸಿದೆ.

ಬೌಲರ್‌ಗಳ ಉತ್ತಮ ನಿರ್ವಹಣೆ: ಟೈಟನ್ಸ್ ತಂಡದ ಸಾಮರ್ಥ್ಯ ಅದರ ಬೌಲಿಂಗ್ ವಿಭಾಗ. ವೇಗಿ ಪ್ರಸಿದ್ಧ ಕೃಷ್ಣ 7 ಪಂದ್ಯಗಳಿಂದ 14.35 ಸರಾಸರಿಯಲ್ಲಿ 14 ವಿಕೆಟ್ ಪಡೆದಿದ್ದಾರೆ. ಲೆಂತ್‌ನಲ್ಲಿ ವೈವಿಧ್ಯದ ಮೂಲಕ ಬ್ಯಾಟರ್‌ಗಳನ್ನು ಯೋಚನೆಗೆ ಹಚ್ಚುತ್ತಿದ್ದಾರೆ. ಸಾಯಿ ಕಿಶೋರ್ 11 ವಿಕೆಟ್ ಮತ್ತು ಮೊಹಮ್ಮದ್ ಸಿರಾಜ್ 10 ವಿಕೆಟ್ ಪಡೆದಿರುವುದು ಆ ತಂಡದ ಬೌಲಿಂಗ್ ಶಕ್ತಿಗೆ ಉದಾಹರಣೆ. ಸಾಯಿ ಸುದರ್ಶನ್ (365) ಉತ್ತಮ ಲಯದಲ್ಲಿದ್ದಾರೆ. ಜಾಸ್ ಬಟ್ಲರ್ (315) ಕೆಲವು ಪಂದ್ಯ ಗೆಲ್ಲಿಸಿದ್ದಾರೆ. ಶೆರ್ಫೇನ್ ರುದರ್‌ಫೋರ್ಡ್ ಉಪಯುಕ್ತ ಆಟವಾಡಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್ ಸ್ಟಾರ್

ಎಚ್‌ಸಿಎ ವಿರುದ್ಧ ಕೋರ್ಟ್ ಮೊರೆ: ಅಜರುದ್ದೀನ್

ನವದೆಹಲಿ (ಪಿಟಿಐ): ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದ ನಾರ್ತ್‌ಸ್ಟ್ಯಾಂಡ್ ನಿಂದ ತಮ್ಮ ಹೆಸರನ್ನು ತೆಗೆದುಹಾಕುವಂತೆ ಹೈದರಾಬಾದ್ ಕ್ರಿಕೆಟ್ ಸಂಸ್ಥೆಯ (ಎಚ್‌ಸಿಎ) ಒಂಬುಡ್ಸ್‌ಮನ್ ನೀಡಿ ರುವ ಆದೇಶಕ್ಕೆ ತಡೆ ಕೋರಿ ತೆಲಂಗಾಣ ಹೈಕೋರ್ಟ್ ಮೆಟ್ಟಿಲೇರಲು ಭಾರತ ತಂಡದ ಮಾಜಿ ನಾಯಕ ಮೊಹಮ್ಮದ್ ಅಜರುದ್ದೀನ್ ಯೋಚಿಸಿದ್ದಾರೆ.

ಎಚ್‌ಸಿಎನ 'ಎಥಿಕ್ಸ್ ಆಫೀಸರ್' ಆಗಿರುವ ನ್ಯಾಯಮೂರ್ತಿ (ನಿವೃತ್ತ) ವಿ.ಈಶ್ವರಯ್ಯ ಅವರು ಎಚ್‌ಸಿಎನ ಸದಸ್ಯ ಘಟಕವಾದ ಲಾರ್ಡ್ಸ್ ಕ್ರಿಕೆಟ್ ಕ್ಲಬ್ ಸಲ್ಲಿಸಿದ್ದ ಅರ್ಜಿಯ ಆಧಾರದಲ್ಲಿ ಈ ಆದೇಶ ಹೊರಡಿಸಿದ್ದರು. ಈ ಹಿಂದೆ ಎಚ್‌ಸಿಎ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಏಕಪಕ್ಷೀಯ ತೀರ್ಮಾನ ಕೈಗೊಳ್ಳುವ ಮೂಲಕ ಅಜರುದ್ದೀನ್ ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದರು ಎಂದು ಅರ್ಜಿಯಲ್ಲಿ ಕ್ಲಬ್ ಆರೋಪಿಸಿತ್ತು.

2019ರ ಡಿಸೆಂಬರ್‌ನಲ್ಲಿ ನಡೆದ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಹಾಜರಾಗಿ ಅವರು ನಾರ್ತ್ ಸ್ಟ್ಯಾಂಡ್‌ಗೆ ತಮ್ಮ ಹೆಸರಿಡುವ ನಿರ್ಣಯ ಅಂಗೀಕರಿಸಿಕೊಳ್ಳುವ ಮೂಲಕ ಸಂಸ್ಥೆಯ ನಿಯಮಗಳನ್ನು ಉಲ್ಲಂಘಿಸಿದ್ದರು ಎಂದು ಅರ್ಜಿಯಲ್ಲಿ ದೂರಲಾಗಿತ್ತು. ಆಗ ಅವರು ಅಧ್ಯಕ್ಷರಾಗಿ ಸುಮಾರು ಒಂದು ತಿಂಗಳಷ್ಟೇ ಆಗಿತ್ತು. ಎಚ್‌ಸಿಎ ನಿಯಮಾವಳಿ ಪ್ರಕಾರ, ಇಂಥ ನಿರ್ಣಯವನ್ನು ಸರ್ವಸದಸ್ಯರ ಸಭೆ ಸ್ಥಿರೀಕರಿಸಿಕೊಳ್ಳ ಬೇಕಾಗುತ್ತದೆ.

'ಆದೇಶಕ್ಕೆ ತಡೆ ಕೋರಿ ನಾನು ಹೈಕೋರ್ಟ್ ಮೊರೆಹೋಗುವುದು ಖಚಿತ. ಭಾರತ ತಂಡದ ನಾಯಕನೊಬ್ಬನ ಹೆಸರನ್ನು ತೆಗೆದುಹಾಕಲು ಹೇಳಿರುವುದು ನಾಚಿಕೆಗೇಡು' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಒಂಬುಡ್ಸ್‌ಮನ್ ಅವರ ಅವಧಿ ಮುಕ್ತಾಯಗೊಂಡಿದೆ ಎಂದು ಹೇಳಿರುವ ಅಜರ್, ಅವರ ಆದೇಶದ ಸಿಂಧುತ್ವವನ್ನು ಪ್ರಶ್ನಿಸಿದ್ದಾರೆ.

ಏಳು ಅಥ್ಲೀಟ್‌ಗಳ ವಿರುದ್ಧವೂ 'ನಾಡಾ' ಕ್ರಮ

ಅಥ್ಲೆಟಿಕ್ಸ್ ಕೋಚ್ ರಮೇಶ್ ಅಮಾನತು

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಪಿಡುಗು ಮತ್ತೊಮ್ಮೆ ದೇಶದ ಅಥ್ಲೆಟಿಕ್ಸ್‌ನಲ್ಲಿದೊಡ್ಡ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ. ಈ ಹಗರಣದಲ್ಲಿ 'ಕೈಜೋಡಿಸಿದ' ಭಾರತ ಜೂನಿಯರ್ ತಂಡದ ಮುಖ್ಯ ಕೋಚ್ ರಮೇಶ್ ನಾಗ್ಪುರಿ ಅವರನ್ನು ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ ಏಜನ್ಸಿ (ನಾಡಾ) ಅಮಾನತುಗೊಳಿಸಿದೆ.

ಉದ್ದೀಪನ ಮದ್ದು ಪರೀಕ್ಷೆ ತಪ್ಪಿಸಿಕೊಂಡಿರುವ ಏಳು ಮಂದಿ ಅಥ್ಲೀಟುಗಳನ್ನೂ ಅಮಾನತುಗೊಳಿಸಲಾಗಿದೆ. ರಮೇಶ್ ಜೊತೆ ಇನ್ನಿಬ್ಬರು ಕೋಚ್‌ಗಳೂ ಅಮಾನತಿಗೆ ಒಳಗಾಗಿದ್ದಾರೆ. ಕರಮವೀರ್ ಸಿಂಗ್ ಮತ್ತು ರಾಕೇಶ್ ಈ ಇಬ್ಬರು ಕೋಚ್‌ಗಳು.

ಪಾರಸ್ ಸಿಂಘಲ್, ಪೂಜಾ ರಾಣಿ, ನಲುಬೋತು ಷಣ್ಮುಗ ಶ್ರೀನಿವಾಸ್, ಚೆಲಿಮಿ ಪ್ರತುಷಾ, ಶುಭಂ ಮಹಾರ, ಕಿರಣ್ ಮತ್ತು ಜ್ಯೋತಿ ಅವರು 'ನಾಡಾ'ದಿಂದ ಅಮಾನತುಗೊಂಡ ಅಥ್ಲೀಟುಗಳ ಪಟ್ಟಿಯಲ್ಲಿದ್ದಾರೆ.

ನಾಗ್ಪುರಿ ಅವರು ಹೈದರಾಬಾದಿನ ಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. 2023ರಲ್ಲಿ ಅವರನ್ನು ಮುಖ್ಯ ಕೋಚ್ ಆಗಿ ಭಾರತ ಅಥ್ಲೆಟಿಕ್ ಫೆಡರೇಷನ್ ನೇಮಕ ಮಾಡಿದ್ದು, ಅವರು ದ್ರೋಣಾಚಾರ್ಯ ಪ್ರಶಸ್ತಿಗೆ ಪಾತ್ರರಾದ ಕೋಚ್.

19 ವರ್ಷ ವಯಸ್ಸಿನ ಸಿಂಘಲ್ ಅವರು ಹರಿಯಾಣದಲ್ಲಿ 2024ರ ನಡೆದ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ಬಾಲಕರ 2000 ಮೀ. ಸ್ಟೀಪಲ್‌ಚೇಸ್‌ನಲ್ಲಿ ಜಯಶಾಲಿ ಆಗಿದ್ದರು. ಶ್ರೀನಿವಾಸ್ ಅವರು ಫೆಡರೇಷನ್ ಕಪ್ ಮತ್ತು 2024ರ ರಾಷ್ಟ್ರೀಯ ಅಂತರ-ರಾಜ್ಯ ಚಾಂಪಿಯನ್‌ಷಿಪ್‌ನ 200 ಮೀ. ಓಟದಲ್ಲಿ ಬೆಳ್ಳಿ ಗೆದ್ದಿದ್ದರು.

'ಹೈದರಾಬಾದಿನ ಕ್ರೀಡಾ ಪ್ರಾಧಿಕಾರದ ಕೇಂದ್ರಕ್ಕೆ ನಾಡಾ ಕಳುಹಿಸಿದ್ದ ಮಾದರಿ ಸಂಗ್ರಹಣೆ ಅಧಿಕಾರಿಗಳ ತಪಾಸಣೆಯಿಂದ ಇಬ್ಬರು ಅಥ್ಲೀಟುಗಳು ತಪ್ಪಿಸಿಕೊಳ್ಳಲು ನೆರವು ನೀಡಿದ್ದರು ಎನ್ನಲಾದ ಆರೋಪ ನಾಗ್ಪುರಿ ಮೇಲಿದೆ' ಎಂದು ಮೂಲಗಳು ತಿಳಿಸಿವೆ.